ಸಂಪುಟ: 33
ಸಂಚಿಕೆ: 34
ಬೆಲೆ ರೂ. 8.00
ಮಂಗಳೂರು

ಸಜ್ಜನರ ಸಂಗಾತಿ
www.sanmarga.com

# ಸನ್ಮಾರ್ಗ ವಾರಪತ್ರಿಕೆ

2010 ನವೆಂಬರ್ 07 – 13
1431 ದುಲ್ ಕಅದ್ 29 – ದುಲ್ ಹಜ್ಜ್ 06




ಎ.ಕೆ. ಕುಕ್ಕಿಲ

## ಹಗಲನ್ನು ಕತ್ತಲೆ ಅಂದ ಮಾತ್ರಕ್ಕೆ ಹಗಲೇನು ಕತ್ತಲಾಗುತ್ತಾ?

ಜನಮತ ಸಂಗ್ರಹ ನಡೆಸಿಯೇ ಕಾಶ್ಮೀರವನ್ನು ಭಾರತಕ್ಕೆ ಸೇರಿಸಿಕೊಳ್ಳಲಾಗುವುದು ಎಂದು 1947 ಅಕ್ಟೋಬರ್ 5ರಂದು ಹೇಳಿದ್ದ ಭಾರತ ಸರಕಾರ, 1957 ಮಾರ್ಚ್ 21ರಂದು ಜನಮತ ಸಂಗ್ರಹ ಸಾಧ್ಯವೇ ಇಲ್ಲ ಅಂದಿತು. ಇಂಥದ್ದೊಂದು ಆಘಾತಕಾರಿ, ವಂಚನಾತ್ಮಕ ಘೋಷಣೆಯನ್ನು ದೆಹಲಿಯಲ್ಲಿ ನೆಹರೂ ಹೊರಡಿಸುತ್ತಿದ್ದ ಅದೇ ಸಂದರ್ಭದಲ್ಲಿ (1957), ಚಾರ್ಲ್ಸ್ ಡಿ ಗಾಲ್ಲೆ (Charles de Gaulle) ಫ್ರಾನ್ಸ್‌ನ ಅಧ್ಯಕ್ಷರಾಗಿ ನೇಮಕಗೊಂಡಿದ್ದರು.

ಅದು ಎಂಥ ಸಂದರ್ಭವಾಗಿತ್ತೆಂದರೆ ಫ್ರಾನ್ಸ್‌ನ ಹೆಚ್ಚಿನ ವಸಾಹತು ಪ್ರದೇಶಗಳು (Colonies) ಸ್ವಾತಂತ್ರ್ಯವನ್ನು ಆಗ್ರಹಿಸಿ ಬೀದಿಗಿಳಿದಿದ್ದುವು. ಅಲ್ಜೀರಿಯಾ ಆ ಪೈಕಿ ಮುಂಚೂಣಿಯಲ್ಲಿತ್ತು. ಅದಾಗಲೇ 2,50,000 ಅಲ್ಜೀರಿಯನ್ನರು ಈ ಸ್ವಾತಂತ್ರ್ಯ ಹೋರಾಟಕ್ಕೆ ಬಲಿಯಾದರು. ಆದರೂ ಚಳವಳಿ ತಣ್ಣಗಾಗುವ ಯಾವ ಸೂಚನೆಯೂ ಕಾಣುತ್ತಿರಲಿಲ್ಲ. ಒಂದು ರೀತಿಯಲ್ಲಿ ಫ್ರಾನ್ಸ್ ತನ್ನ ಭವಿಷ್ಯದ ಯೋಜನೆಗಳನ್ನು ರೂಪಿಸುವಲ್ಲಿ ಈ ಚಳವಳಿ ಪ್ರಮುಖ ಅಡ್ಡಿಯಾಗಿ ಪರಿಣಮಿಸತೊಡಗಿತು. ಡಿ. ಗಾಲ್ಲೆ ಕಂಗಾಲಾದರು. ತಮ್ಮ ಭಾಷೆ, ಸಂಸ್ಕೃತಿ, ತಮ್ಮತನವನ್ನೆಲ್ಲಾ ಉಳಿಸಿಕೊಂಡೇ, ಒಂದು ರೀತಿಯಲ್ಲಿ ಸ್ವಯಮಾಧಿಕಾರದೊಂದಿಗೆ ಫ್ರಾನ್ಸ್‌ನ ಜೊತೆ ಉಳಿದುಕೊಳ್ಳುವ ಪರಿಹಾರವೊಂದನ್ನು ಡಿ ಗಾಲ್ಲೆ ತನ್ನ ವಸಾಹತುಗಳ ಮುಂದಿಟ್ಟರು. ಆದರೆ ಅಲ್ಜೀರಿಯಾ ಒಪ್ಪಲಿಲ್ಲ. ಒಂದು ಕಡೆ ಫ್ರಾನ್ಸ್‌ನ ಶಕ್ತಿ-ಸಾಮರ್ಥ್ಯಗಳೆಲ್ಲಾ ಆಂತರಿಕ ದಂಗೆಯನ್ನು ಮಣಿಸುವುದಕ್ಕಾಗಿಯೇ ವ್ಯಯವಾಗುತ್ತಿದ್ದರೆ ಇನ್ನೊಂದು ಕಡೆ ಅಭಿವೃದ್ಧಿ ಕುಂಠಿತಗೊಂಡು ಯುರೋಪಿನಲ್ಲಿ ಫ್ರಾನ್ಸ್‌ನ ವರ್ಚಸ್ಸು ಕುಸಿಯತೊಡಗಿತು. ತನ್ನ ಬಹು ನಿರೀಕ್ಷೆಯ ಅಣು ಸಂಶೋಧನಾ ಚಟುವಟಿಕೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುವುದಕ್ಕೂ ಅದಕ್ಕೆ ಸಾಧ್ಯವಾಗಲಿಲ್ಲ. ದೇಶವನ್ನು ಬಲಿಷ್ಟವಾಗಿ ಮತ್ತು ಸೂಪರ್ ಪವರ್ ಆಗಿ ಕಟ್ಟಬೇಕಿದ್ದರೆ ಆಂತರಿಕ ದಂಗೆಯನ್ನು ಮೀರಿ ನಿಲ್ಲಬೇಕೆಂದು 67 ವರ್ಷದ ಡಿ. ಗಾಲ್ಲೆ ತೀರ್ಮಾನಿಸಿದರು. ಹಲವು ಸುತ್ತಿನ ಚರ್ಚೆ, ಸಂವಾದಗಳನ್ನು ನಡೆಸಿ ಅಂತಿಮವಾಗಿ ಅಲ್ಜೀರಿಯಾವನ್ನು ಸ್ವತಂತ್ರಗೊಳಿಸುವುದೇ ಫ್ರಾನ್ಸನ್ನು ಬಲಿಷ್ಠವಾಗಿ ಕಟ್ಟುವುದಕ್ಕಿರುವ ಏಕೈಕ ದಾರಿ ಅಂದುಕೊಂಡರು. ಮಾತ್ರವಲ್ಲ ತನ್ನ ರಾಜಕೀಯ ಭವಿಷ್ಯ, ವರ್ಚಸ್ಸು, ಜೀವ ಬೆದರಿಕೆಯನ್ನೂ ನಿರ್ಲಕ್ಷಿಸಿ, ಅಲ್ಜೀರಿಯನ್ ನಾಯಕರನ್ನು ಮಾತುಕತೆಗೆ ಆಹ್ವಾನಿಸಿದರು. ಅಲ್ಜೀರಿಯಾದಲ್ಲಿ ಜನಮತ ಸಂಗ್ರಹ ನಡೆಸುವ ಬಗ್ಗೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ನಿರೀಕ್ಷೆಯಂತೆ ಅಲ್ಜೀರಿಯನ್ನರು ಸ್ವಾತಂತ್ರ್ಯದ ಪರ ಮತ ಚಲಾಯಿಸಿದರು. ನೆಹರೂರಂತೆ ಮಾತಿಗೆ ತಪ್ಪದೆ ಜನಮತ ಸಂಗ್ರಹದ (3ನೇ ಪುಟಕ್ಕೆ)


ಅರುಂಧತಿ ರಾಯ್

## ಲೂಟುವ ರಾಜಕೀಯವೂ ಕನ್ನಡ ರಾಜ್ಯೋತ್ಸವವೂ

ಸುಂದರ ಚೆಲುವ ಕನ್ನಡ ನಾಡು ಪ್ರತೀವರ್ಷದಂತೆ ಈ ವರ್ಷವೂ ಕನ್ನಡ ರಾಜ್ಯೋತ್ಸವವನ್ನು ಆಚರಿಸಿತು. ಆದರೆ ಸುಂದರ ಸಂಸ್ಕೃತಿಯಿಂದ ಕಂಗೊಳಿಸುತ್ತಿದ್ದ ಕನ್ನಡ ನಾಡನ್ನು ಅಂದಗೆಡಿಸುವಲ್ಲಿ ಇಲ್ಲಿನ ರಾಜಕಾರಣಿಗಳು ತಮ್ಮದೇ ಆದ ಕಾಣಿಕೆಯನ್ನು ಅರ್ಪಿಸುತ್ತಿದ್ದಾರೆ. ಈ ನಾಡಿನ ಸೊಬಗನ್ನು ಹಾಡಿ ಹೊಗಳಿದ ಮಹಾ ಕವಿ ರನ್ನ, ಪಂಪ, ಕುವೆಂಪುರಂತಹ ಮಹಾನುಭಾವರು ಇಂದು ಜೀವಂತವಿರುತ್ತಿದ್ದರೆ ಅವರು ಏನಂದುಕೊಳ್ಳುತ್ತಿದ್ದರು ಎಂಬುದನ್ನು ಊಹಿಸಲೂ ಕಷ್ಟವಾಗುತ್ತಿದೆ.




■ ಬಿ.ಎ. ಸಲೀಮ್

ಪರಸ್ಪರ ಕಾಲೆಳೆಯುತ್ತಿರುವಂತಹ ರಾಜಕೀಯ ಮಹತ್ವಾಕಾಂಕ್ಷಿಗಳು ಓತಿಯಂತೆ ದಿನವೂ ತಮ್ಮ ಬಣ್ಣವನ್ನು ಬದಲಾಯಿಸುತ್ತಿದ್ದಾರೆ. ನಮ್ಮ ನಾಡಿನ ಸಂಸ್ಕೃತಿಯ ಕುರಿತು ನಾವು ಅಭಿಮಾನ ಪಟ್ಟುಕೊಳ್ಳುತ್ತಿದ್ದೆವು. ಆದರೆ ಇವತ್ತು ಇಲ್ಲಿ ನಡೆಯುವ ಪ್ರತಿಯೊಂದು ವ್ಯವಹಾರವನ್ನು ಅನುಮಾನದಿಂದ ನೋಡಬೇಕಾದ ಅನಿವಾರ್ಯತೆ ಬಂದೊದಗಿದೆ.

ಯಾಕೆಂದರೆ ಇಲ್ಲಿ ವರ್ಷಂಪ್ರತಿ ನಾಡಿಗಾಗಿ ಸೇವೆ ಸಲ್ಲಿಸಿದ ಗಣ್ಯರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತದೆ. ಈ ಸಲವೂ 162 ಮಂದಿಯನ್ನು ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು. ಇದಕ್ಕೆ ತಕ್ಕುದಾದ ಆಯ್ಕೆ ಸಮಿತಿಯೇನೋ ಇದೆ. ಆದರೆ ಇಲ್ಲಿ ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವೆಂದು ಪರಿಗಣಿಸಲಾಗಿದೆಯೇ ಅಥವಾ ಕೆಲವು ರಾಜಕಾರಣಿಗಳು (15ನೇ ಪುಟಕ್ಕೆ)

## ಈ ತೀರ್ಪು ನ್ಯಾಯಕ್ಕೆ ಸಂದ ಗೆಲುವೇ?



ಕೇರಳದ ವರ್ಗೀಸ್ ಎನ್‌ಕೌಂಟರ್ ಪ್ರಕರಣದ ತಪ್ಪಿತಸ್ಥ ಪೊಲೀಸಧಿಕಾರಿಗೆ ಜೀವಾವಧಿ ಶಿಕ್ಷೆಯ ತೀರ್ಪು ಹೊರಬಿದ್ದ ಹಿನ್ನೆಲೆಯಲ್ಲಿ ಸರಕಾರಿ ಭಯೋತ್ಪಾದನೆಯೊಂದು ಶಿಕ್ಷೆಗೆ ಪಾತ್ರವಾಗಿದೆ ಎಂಬ ಸಮಾಧಾನ ಹೊಂದಬಹುದು. ಅಂದರೆ ಎನ್‌ಕೌಂಟರ್ ನಡೆದು ನಲ್ವತ್ತು ವರ್ಷದ ನಂತರ ಅಪರಾಧಿ ಶಿಕ್ಷಿಸಲ್ಪಟ್ಟಿದ್ದಾನೆ! 1970 ಫೆ. 18ರಂದು ವರ್ಗೀಸ್‌ರನ್ನು ಗುಂಡಿಟ್ಟು ಸಾಯಿಸಲಾಗಿತ್ತು. ಅಂದರೆ ಪೊಲೀಸ್ ಭಾಷೆಯಂತೆ ಎನ್‌ಕೌಂಟರ್‌ನಲ್ಲಿ ಬಲಿ ಪಡೆಯಲಾಗಿತ್ತು. ಸಿಬಿಐ ವಿಶೇಷ ನ್ಯಾಯಾಲಯವೀಗ ಈ ಪ್ರಕರಣ ಕೂಡಾ ಇಂದು ನಡೆಯುವಂತೆ ನಕಲಿ ಎನ್‌ಕೌಂಟರ್ ಎಂಬುದಾಗಿ ತೀರ್ಪು ನೀಡಿದೆ. ಬರೋಬ್ಬರಿ 40 ವರ್ಷಗಳ ನಂತರ 2010 ಅಕ್ಟೋಬರ್ 28ರಂದು ಐಜಿಪಿ ಲಕ್ಷ್ಮಣ ಎಂಬವರನ್ನು ಅಪರಾಧಿ ಎಂದು ಕಂಡುಕೊಂಡು ಜೀವಾವಧಿ ಶಿಕ್ಷೆ ಮತ್ತು 10 ಸಾವಿರ ದಂಡವನ್ನೂ ವಿಧಿಸಿದೆ. (ಕೊನೆಯ ಪುಟಕ್ಕೆ)

## ಕಾರ್ಗಿಲ್ ಯೋಧರ ಮನೆಯನ್ನೂ ನುಂಗಿದರು

ಕಾರ್ಗಿಲ್ ಹೋರಾಟದ ಕಲಿಗಳನ್ನು ನಮ್ಮ ರಾಜಕಾರಣವು ಮತ್ತೆ ಭ್ರಷ್ಟಾಚಾರಕ್ಕೆ ಒತ್ತೆಯಿಟ್ಟಿದೆ. ದೇಶಪ್ರೇಮದ ಕುರಿತು ಬೊಬ್ಬಿಡುತ್ತಿದ್ದ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರದ ಅಧಿಕಾರಾವಧಿಯಲ್ಲಿ ಕಾರ್ಗಿಲ್ ಯೋಧರ ಶವ ಪೆಟ್ಟಿಗೆಗಳಲ್ಲೂ ಭ್ರಷ್ಟಾಚಾರ ಎಸಗಿ ದೇಶದ ಮಾನ ಹರಾಜಾಗಿತ್ತು. ಅಮೇರಿಕದಿಂದ ಮೂರು ಪಟ್ಟು ಹೆಚ್ಚು ಹಣ ಕೊಟ್ಟು ಕಾರ್ಗಿಲ್ ಯೋಧರ ಶವಗಳಿಗೆ ಶವಪೆಟ್ಟಿಗೆ ಖರೀದಿಸುವ ಮೂಲಕ ಜಾರ್ಜ್ ಫೆರ್ನಾಂಡಿಸ್ ಸುದ್ದಿಯಾಗಿದ್ದರು. ನಂತರ ಅವರಿಗೆ ಸಿಬಿಐ ಕ್ಲೀನ್‌ಚಿಟ್ ನೀಡಿದರೂ ಶವಪೆಟ್ಟಿಗೆ ಹಗರಣದಿಂದ ಅವರು ಪೂರ್ಣ ಮುಕ್ತರಾಗಿರಲಿಲ್ಲ.

ಇದೀಗ ಕಾರ್ಗಿಲ್‌ನಲ್ಲಿ ಮಡಿದವರ ಕುಟುಂಬಕ್ಕಾಗಿ ಮುಂಬೈಯಲ್ಲಿ ನಿರ್ಮಿಸಲಾದ ಆದರ್ಶ ಗ್ರೂಪ್ ಹೌಸಿಂಗ್ ಸೊಸೈಟಿ ಕಟ್ಟಡದ ಫ್ಲಾಟುಗಳನ್ನು ಉನ್ನತ ರಾಜಕಾರಣಿಗಳು, ಉನ್ನತ ಸೇನಾಧಿಕಾರಿಗಳು ಮುಂತಾದವರಿಗೆ ಹಂಚಲಾಗಿರುವುದು ಬಹಿರಂಗವಾಗಿದೆ. ಇದರಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ಚವ್ಹಾಣ್‌ರ ಹತ್ತಿರದ ಸಂಬಂಧಿಗಳಿಗೂ ಫ್ಲಾಟ್ ನೀಡಲಾಗಿದೆ. ನಿಜವಾಗಿ ಈ ಆದರ್ಶ ವಸತಿ ಸಮುಚ್ಛಯದಲ್ಲಿ ತಂಗಲು ಅರ್ಹ 40 ಮಂದಿಯ ಹೆಸರನ್ನು ಸಲ್ಲಿಸಲಾಗಿತ್ತು. ಆದರೆ ಇದೀಗ ಆ ಸಮುಚ್ಛಯದಲ್ಲಿ ನೆಲೆಗೊಂಡಿರುವ 103 ಕುಟುಂಬಗಳಲ್ಲಿ 37 ಕುಟುಂಬ ಮಾತ್ರ ಸೈನಿಕರಿಗೆ ಸಂಬಂಧಿಸಿದ್ದು. ವಿಶೇಷ ಏನೆಂದರೆ, ಈ 37 ಕುಟುಂಬಗಳಲ್ಲಿ (ಕೊನೆಯ ಪುಟಕ್ಕೆ)

## ಸನ್ಮಾರ್ಗ ಹಜ್ಜ್ ವಿಶೇಷಾಂಕ

ಮುಂದಿನ ವಾರ ನಿಮ್ಮ ಕೈಯಲ್ಲಿ
ನಿಮ್ಮ ಪ್ರತಿಗಳನ್ನು ಇಂದೇ ಕಾದಿರಿಸಿ



ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಇವು ಸುದ್ದಿಗಳಲ್ಲ, ಪ್ರತಿಭಟನೆಗಳು

1. ಲಾವಾಸ ಯೋಜನೆಯಲ್ಲಿ ನಡೆದಿರುವ ಅವ್ಯವಹಾರವನ್ನು ತನಿಖಿಸದಿದ್ದರೆ ಕೇಂದ್ರ ಸರಕಾರ ತನಗೆ ನೀಡಿರುವ ಪದ್ಮವಿಭೂಷಣ ಪುರಸ್ಕಾರವನ್ನು ಹಿಂತಿರುಗಿಸುವುದಾಗಿ ಖ್ಯಾತ ಸಾಮಾಜಿಕ ಕಾರ್ಯಕರ್ತ ಮಹಾರಾಷ್ಟ್ರದ ಅಣ್ಣಾ ಹಜಾರೆ ಘೋಷಿಸಿದ್ದಾರೆ.

2. ತನ್ನ ಪತ್ನಿಯ ಹೆರಿಗೆಯ ಬಿಲ್ಲನ್ನು ನೋಡಿ ಬೆದರಿದ ಒರಿಸ್ಸಾದ ಓಕಿಲ್ ಮುಂಡಾ ಎಂಬ ಆದಿವಾಸಿ ವ್ಯಕ್ತಿಯೊಬ್ಬ ಮೂರು ದಿನಗಳಿಂದ ಮರವೇರಿ ಕೂತಿದ್ದಾನೆ.

3. ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿಸುವಲ್ಲಿ ರಾಜ್ಯ ಸರಕಾರ ತೋರುತ್ತಿರುವ ತೀವ್ರ ಅಸಡ್ಡೆಯನ್ನು ಪ್ರತಿಭಟಿಸಿ ಈ ಸಾಲಿನ ನೃಪತುಂಗ ಪ್ರಶಸ್ತಿಯನ್ನು ಸ್ವೀಕರಿಸದಿರಲು ಖ್ಯಾತ ಸಾಹಿತಿ ದೇವನೂರು ಮಹಾದೇವ ನಿರ್ಧರಿಸಿದ್ದಾರೆ.

ಕಳೆದೊಂದು ವಾರದಲ್ಲಿ ಪ್ರಕಟವಾದ ಸುದ್ದಿಗಳಿವು. ನಿಜವಾಗಿ ಓದುಗರಿಗೆ ಈ ಸುದ್ದಿಗಳ ಬಗ್ಗೆ ಗೊತ್ತಿರುವ ಸಾಧ್ಯತೆ ತೀರಾ ಕಡಿಮೆ. ಯಾಕೆಂದರೆ ಪತ್ರಿಕೆಗಳ ಮುಖಪುಟದಲ್ಲಿ ದಪ್ಪಕ್ಷರಗಳಲ್ಲಿ ಪ್ರಕಟವಾಗುವ ಭಾಗ್ಯ ಇವುಗಳಿಗೆ ಸಿಕ್ಕಿಲ್ಲ. ಒಳಪುಟದ ತುಂಡು ಜಾಗದಲ್ಲಿ ಪ್ರಕಟವಾಗುವ ಸುದ್ದಿಗಳನ್ನು ಓದಿ ತುಸು ಚಿಂತಿಸುವ ಪುರುಸೊತ್ತಾದರೂ ಎಷ್ಟು ಮಂದಿಗಿದೆ? ಇಷ್ಟಕ್ಕೂ ಮುಖಪುಟ ಮೀಸಲಿಡುವುದಕ್ಕೆ, ಸಂಪಾದಕೀಯ ವಸ್ತುವಾಗಿ ಆಯ್ಕೆ ಮಾಡಿಕೊಳ್ಳುವುದಕ್ಕೆ ಇವೇನು ಹಾಲಪ್ಪರ ಅತ್ಯಾಚಾರ ಪ್ರಕರಣ ಅಲ್ಲವಲ್ಲ.

ನಿಜವಾಗಿ, ಅನ್ಯಾಯದ ವಿರುದ್ಧ ವ್ಯಕ್ತವಾದ ಅಪರೂಪದ ಪ್ರತಿಭಟನೆಗಳು ಎಂಬ ನೆಲೆಯಲ್ಲಿ ಈ ಮೂರೂ ಸುದ್ದಿಗಳಿಗೂ ಮಹತ್ವ ಕಲ್ಪಿಸಬೇಕಾಗಿದೆ. ಒಂದು ಪ್ರಶಸ್ತಿಗಾಗಿ ಪ್ರಭಾವಿಗಳ ಮುಂದೆ, ವಿಧಾನ ಸೌಧದ ಕಚೇರಿಗಳ ಎದುರು ತಮ್ಮ ಬಯೋಡಾಟವನ್ನು ಹಿಡಿದುಕೊಂಡು ವರ್ಷಗಟ್ಟಲೆ ಸುತ್ತಾಡುವವರಿರುವ ಇಂದಿನ ದಿನಗಳಲ್ಲಿ, ಸಿಕ್ಕ ಪ್ರಶಸ್ತಿಯನ್ನೇ ನಿರಾಕರಿಸುವುದು ಇಲ್ಲವೇ ಹಿಂತಿರುಗಿಸಿ ಬಿಡುವುದು ಖಂಡಿತ ಸಣ್ಣ ಸಂಗತಿಯಲ್ಲ. ಇಷ್ಟಕ್ಕೂ ಪ್ರಶಸ್ತಿಯನ್ನು ಹಿಂತಿರುಗಿಸದೆಯೇ ಸರಕಾರದ ವಿರುದ್ಧ ಪ್ರತಿಭಟಿಸುವುದಕ್ಕೆ ಅಣ್ಣಾ ಹಜಾರೆಗೆ ಸರ್ವ ಅವಕಾಶಗಳೂ ಇತ್ತು. ಅದೇ ವೇಳೆ ಪ್ರಶಸ್ತಿಯನ್ನು ಸ್ವೀಕರಿಸಿಕೊಂಡೇ ಸರಕಾರದ ನಿಲುವನ್ನು ಪ್ರಶ್ನಿಸುವ ಹಕ್ಕು, ಸ್ವಾತಂತ್ರ್ಯ ದೇವನೂರು ಅವರಿಗೂ ಇತ್ತು. ಅಲ್ಲದೇ ಹೀಗೆ ಮಾಡುವುದು ತಪ್ಪು ಕೂಡಾ ಅಲ್ಲ. ನಿಜವಾಗಿ ಪ್ರತಿಭಟನೆಗಳೇ ದಿಕ್ಕು ತಪ್ಪಿರುವ; ವಿವಿಧ ಪಕ್ಷ, ಜಾತಿಗಳಿಂದ ಹೈಜಾಕ್‌ಗೆ ಒಳಗಾಗಿರುವ ಇಂದಿನ ದಿನಗಳಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಸಣ್ಣದೊಂದು ಟೆಂಟು ಹಾಕಿ, ನಾಲ್ಕು ಕನ್ನಡ ಪ್ರೇಮದ ಮಾತನ್ನಾಡಿದ್ದರೆ ಅಥವಾ ನೃಪತುಂಗ ಪ್ರಶಸ್ತಿ ಸ್ವೀಕರಿಸಿ ಅದೇ ವೇದಿಕೆಯಿಂದ ಸರಕಾರವನ್ನು ಟೀಕಿಸಿದ್ದರೆ ಖಂಡಿತ ದೇವನೂರನ್ನು ಯಾರೂ ಟೀಕಿಸುತ್ತಿರಲಿಲ್ಲ. ಶರದ್ ಪವಾರ್‌ರ ಪತ್ನಿ, ಅಳಿಯರು ತೊಡಗಿಸಿಕೊಂಡಿರುವ ಲಾವಾಸ್ ಯೋಜನೆಯ ಅವ್ಯವಹಾರವನ್ನು ಪ್ರತಿ ಭಟಿಸುವುದಕ್ಕೆ ಹಜಾರೆಯವರು ಪದ್ಮವಿಭೂಷಣವನ್ನು ಹಿಂತಿರುಗಿಸುವುದಾಗಿ ಬೆದರಿಸುವ ಯಾವ ಅಗತ್ಯವೂ ಇರಲಿಲ್ಲ. ಅದನ್ನು ಇಟ್ಟುಕೊಂಡೇ ಪ್ರತಿಭಟನೆಗೆ ಕರೆ ಕೊಡುತ್ತಿದ್ದರೆ ಪತ್ರಿಕೆಗಳಲ್ಲಿ ಖಂಡಿತ ಕವರೇಜು ಸಿಗುತ್ತಿತ್ತು. ಇಷ್ಟಿದ್ದೂ ಇವರಿಬ್ಬರೂ ಭಿನ್ನ ಮತ್ತು ವೈಯಕ್ತಿಕವಾಗಿ ನಷ್ಟವಾಗುವಂಥ ಪ್ರತಿಭಟನಾ ವಿಧಾನವನ್ನೇ ಆಯ್ಕೆ ಮಾಡಿಕೊಂಡರು ಎನ್ನುವುದರಿಂದಲೇ ಇಷ್ಟವಾಗುತ್ತಾರೆ. ಇಷ್ಟಕ್ಕೂ ಓಕಿಲ್ ಮುಂಡಾನಂತೆ ಮರವನ್ನೂ ಏರದೆ, ಅನ್ಯಾಯವನ್ನು ಪ್ರತಿಭಟಿಸಲೂ ತಿಳಿಯದೆ ವ್ಯವಸ್ಥೆಗೋ ಹಣೆಬರಹಕ್ಕೋ ಶಾಪ ಹಾಕುತ್ತಾ ದಿನ ಕಳೆಯುವ ಎಷ್ಟು ಬಡವರಿಲ್ಲ ಈ ದೇಶದಲ್ಲಿ? ಇವತ್ತು ಲಂಚ ಕೊಡದೆ ಬಡವನೊಬ್ಬ ತನ್ನದೇ ತುಂಡು ಭೂಮಿಯಲ್ಲಿ ಸಣ್ಣದೊಂದು ಗುಡಿಸಲು ಕಟ್ಟಲು ಸಾಧ್ಯವೇ? ದುಡ್ಡಿದ್ದವ ಒಂದೇ ದಿನದೊಳಗೆ ಸಕಲ ದಾಖಲೆಗಳನ್ನೂ ಪಡೆಯುವಾಗ ಬಡವನೊಬ್ಬ ಅದಕ್ಕಾಗಿ ತಿಂಗಳುಗಟ್ಟಲೆ ಕಚೇರಿಯಿಂದ ಕಚೇರಿಗೆ ಅಲೆಯಬೇಕಾಗುತ್ತದೆ. ಕಳೆದ ವಾರವಷ್ಟೇ ಬರ್ಲಿನ್ ಮೂಲದ ಟ್ರಾನ್ಸ್‌ಫರೆನ್ಸಿ ಇಂಟರ್‌ನ್ಯಾಶನಲ್ ಎಂಬ ಸರಕಾರೇತರ ಸಂಸ್ಥೆಯೊಂದು ಭ್ರಷ್ಟಾಚಾರದಲ್ಲಿ ಪಾಕಿಸ್ತಾನ, ಮ್ಯಾನ್ಮಾರ್, ಚೀನಾ, ಶ್ರೀಲಂಕಾಕ್ಕಿಂತಲೂ ಭಾರತ ಮೇಲಿನ ಸ್ಥಾನದಲ್ಲಿರುವುದನ್ನು ಬಹಿರಂಗಪಡಿಸಿದೆ. ಹೀಗಿರುವಾಗ ಪದ್ಮವಿಭೂಷಣವನ್ನು ಹಿಂತಿರುಗಿಸಲು ಮುಂದಾದ ಹಜಾರೆ ಇಲ್ಲವೇ ಸರಕಾರಿ ಆಸ್ಪತ್ರೆ ನೀಡಿದ ಬರೇ ನಾಲ್ಕು ಸಾವಿರ ರೂಪಾಯಿ ಬಿಲ್ಲನ್ನು ನೋಡಿ ಕಂಗಾಲಾಗಿ ಮರವೇರಿ ಕುಳಿತ ಮುಂಡಾ, ಈ ಭ್ರಷ್ಟ ಪರಂಪರೆಯನ್ನು ದಿಢೀರಾಗಿ ತಿದ್ದಿ ಬಿಡುತ್ತಾರೆ ಎಂದು ಅಂದುಕೊಳ್ಳುವುದಕ್ಕೆ ಖಂಡಿತ ಅರ್ಥವಿಲ್ಲ. ಆದರೂ ಈ ಪ್ರತಿಭಟನೆ ಮುಂಡಾನ ಆ ಸಣ್ಣ ಗ್ರಾಮದಲ್ಲಿ ದೊಡ್ಡ ಸಂಚಲನವನ್ನೇ ಸೃಷ್ಟಿಸಿತು. ಮರದಿಂದ ಇಳಿದರೆ ಒಟ್ಟು ಬಿಲ್ಲನ್ನೇ ಮನ್ನಾ ಮಾಡುವುದಾಗಿ ಉನ್ನತ ಅಧಿಕಾರಿಗಳು ಬಂದು ಭರವಸೆ ಕೊಟ್ಟರು. ಇಷ್ಟಕ್ಕೂ ಬಡವರಿಗೆ ಉಚಿತವಾಗಿ ಚಿಕಿತ್ಸೆ ನೀಡಬೇಕಾದ ಈ ಆಸ್ಪತ್ರೆ, ಈ ಹಿಂದೆ ಇಂಥ ಬಿಲ್ಲನ್ನು ಎಷ್ಟು ಮಂದಿಗೆ ಕೊಟ್ಟಿತ್ತೋ ಏನೋ. ಆದರೆ ಮುಂಡಾನ ಪ್ರತಿಭಟನೆ ಆ ಆಸ್ಪತ್ರೆಯ ಬಗ್ಗೆ, ಅಲ್ಲಿನ ಅಧಿಕಾರಿಗಳ ಕುರಿತಂತೆ ಸಾಮಾಜಿಕ ಆಕ್ರೋಶವೊಂದು ಪ್ರಕಟವಾಗಲು ಕಾರಣವಾಯಿತು. ಒಂದು ವೇಳೆ ಆತ ಅಂಥದ್ದೊಂದು ಅಪರೂಪದ ಪ್ರತಿಭಟನೆಗೆ ಇಳಿಯದೇ ಎಲ್ಲರಂತೆ ವ್ಯವಸ್ಥೆಯನ್ನು ದೂರುತ್ತಾ ದುಡ್ಡು ಪಾವತಿಸುತ್ತಿದ್ದರೆ ಶೋಷಣೆ ಮುಂದುವರಿಯುತ್ತಿತ್ತಲ್ಲವೇ?

ಬಂಡವಾಳಶಾಹಿ ಜಗತ್ತಿನಲ್ಲಿ ಪ್ರತಿಭಟನೆಗಳೇ ಅಪರೂಪವಾಗತೊಡಗಿದೆ. ಪ್ರಗತಿ, ಅಭಿವೃದ್ಧಿಯ ಹೆಸರಲ್ಲಿ ದುಡ್ಡಿದ್ದವರು ನಡೆಸುವ ಸರ್ವ ಮನುಷ್ಯ ವಿರೋಧಿ ಕ್ರೌರ್ಯಗಳನ್ನೂ ಸಹಿಸಿಕೊಳ್ಳುವ ಮನಸ್ಥಿತಿ ದಿನೇ ದಿನೇ ಹೆಚ್ಚತೊಡಗಿದೆ. ರಾಜಕೀಯದ ಮಂದಿ ಬಹಿರಂಗವಾಗಿಯೇ ಹರಾಜಾಗುತ್ತಿದ್ದರೂ ಪ್ರತಿಭಟಿಸುವುದಕ್ಕೆ ಜನರು ಆಸಕ್ತಿ ತೋರುತ್ತಿಲ್ಲ. ಭ್ರಷ್ಟಾಚಾರ, ಅನ್ಯಾಯಗಳ ಕುರಿತಂತೆ ಒಂದು ರೀತಿಯ ಹತಾಶೆ, ಉದಾಸೀನ ವ್ಯಕ್ತವಾಗುತ್ತಿದೆ. ವಿವಿಧ ಪಕ್ಷಗಳು, ಪ್ರಭಾವಿಗಳು ಪ್ರತಿಭಟನೆಗಳನ್ನೇ ಖರೀದಿಸಿ ಬಿಟ್ಟಿರುವಾಗ ಯಾವ ಪ್ರತಿಭಟನೆಯನ್ನು ಬೆಂಬಲಿಸಬೇಕು ಮತ್ತು ಬೆಂಬಲಿಸಬಾರದು ಎಂಬ ಬಗ್ಗೆಯೇ ಸಾಮಾನ್ಯ ವ್ಯಕ್ತಿ ಗೊಂದಲಕ್ಕೊಳಗಾಗುತ್ತಿದ್ದಾನೆ.

ಆದ್ದರಿಂದಲೇ ದೇವನೂರು, ಹಜಾರೆ ಮತ್ತು ಮುಂಡಾನ ಪ್ರತಿಭಟನೆಗಳು ಗಮನ ಸೆಳೆಯುತ್ತವೆ. ವ್ಯವಸ್ಥೆಯನ್ನು ಎಚ್ಚರಗೊಳಿಸುವುದಕ್ಕೆ, ಅದಕ್ಕೊಂದು ತಪರಾಕಿ ಕೊಡುವುದಕ್ಕೆ ಈ ವ್ಯವಸ್ಥೆ ಕೊಟ್ಟ ಪ್ರಶಸ್ತಿಗಳಿಂದಲೂ ಸಾಧ್ಯ ಎಂದು ಹಜಾರೆ ಮತ್ತು ದೇವನೂರು ಸಾರಿ ಹೇಳಿದ್ದಾರೆ. ಒಂದು ಕಡೆ ಗುಂಪುಗೂಡಿ ಪ್ರತಿಭಟಿಸುವುದಕ್ಕಿಂತ ಸರಕಾರವೊಂದಕ್ಕೆ ಹೆಚ್ಚು ತಾಗುವುದು ಇಂಥ ಪ್ರತಿಭಟನೆಗಳೇ. ವ್ಯವಸ್ಥೆಯ ಪಾಲಿಗೆ ಇದು ಬಹುದೊಡ್ಡ ಮುಖಭಂಗ. ಹಾಗೆಯೇ ಮನುಷ್ಯ ವಿರೋಧಿಯಾಗಿದ್ದ ಆಸ್ಪತ್ರೆಯೊಂದನ್ನು ಮುಂಡಾ ಮತ್ತೆ ಮನುಷ್ಯಪರಗೊಳಿಸಿದ್ದಾನೆ. ಅಲ್ಲಿರುವ ಮನುಷ್ಯರಿಗೆ ಮಾನವೀಯ ಪಾಠ ಹೇಳಿಕೊಟ್ಟಿದ್ದಾನೆ. ಈ ಕಾರಣದಿಂದಲೇ ಇವರನ್ನು ನಾವು ಅಭಿನಂದಿಸಬೇಕಾಗಿದೆ.

## ವಿ ಚಾ ರ ಮ ಣಿ

"ನಾವಿಚ್ಛಿಸುತ್ತಿದ್ದರೆ ಮೊದಲೇ ಪ್ರತಿಯೊಂದು ಜೀವಕ್ಕೂ ಅದರ ಮಾರ್ಗದರ್ಶನ ನೀಡಿ ಬಿಡುತ್ತಿದ್ದೆವು. ಆದರೆ ನಾನು ನರಕವನ್ನು ಯಕ್ಷಗಳಿಂದಲೂ ಮಾನವರಿಂದಲೂ ತುಂಬಿ ಬಿಡುವೆನೆಂದು ಹೇಳಿದ್ದ ನನ್ನ ಮಾತು ಸರಿಯಾಯಿತು. ಆದುದರಿಂದ ಈಗ ನೀವು ಇಂದಿನ ಭೇಟಿಯನ್ನು ಮರೆತು ಬಿಟ್ಟುದರ ರುಚಿಯನ್ನು ಸವಿಯಿರಿ. ನಾವೂ ಈಗ ನಿಮ್ಮನ್ನು ಮರೆತು ಬಿಟ್ಟಿದ್ದೇವೆ. ನಿಮ್ಮ ದುಷ್ಕೃತ್ಯಗಳ ಫಲವಾಗಿ ಶಾಶ್ವತ ಯಾತನೆಯ ರುಚಿಯನ್ನು ಸವಿಯಿರಿ" (ಎಂದು ಉತ್ತರ ಕೊಡ ಲಾಗುವುದು).ನಮ್ಮ ಸೂಕ್ತಗಳನ್ನು ಓದಿ ಹೇಳಿ ಉಪದೇಶಿಸಿದಾಗ ಸಾಷ್ಟಾಂಗವೆರ ಗುವವರೂ ತಮ್ಮ ಪ್ರಭುವಿನ ಸ್ತುತಿಯೊಂದಿಗೆ ಅವನನ್ನು ಜಪಿಸುವವರೂ ಅಹಂಕಾರ ಪ್ರಕಟಿಸದವರೂ ನಮ್ಮ ಸೂಕ್ತಗಳ ಮೇಲೆ ವಿಶ್ವಾಸವಿರಿಸುತ್ತಾರೆ.

(ಪವಿತ್ರ ಕುರ್‌ಆನ್: 32: 13-15)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




### ಚಿಂತನಾರ್ಹ

ಸಂಚಿಕೆ. 31ರ ಮುಖ್ಯ ಮಂತ್ರಿಗಳು ಸುಳ್ಳು ಹೇಳುತ್ತಿದ್ದಾರೆಯೇ? ಲೇಖನ ಬಹು ಗಂಭೀರವಾಗಿದ್ದು ಚಿಂತನಾರ್ಹವಾಗಿದೆ. ಹೌದು, ಹೈದಾರಾಬಾದ್, ಜುನಾಗಢ ರಾಜ್ಯಗಳಂತೆ ಕಾರ್ಯಾಚರಣೆಯ ಮೂಲಕ ಕಾಶ್ಮೀರವನ್ನು ಭಾರತದಲ್ಲಿ ಸೇರಿಸಿಕೊಳ್ಳಲಾಗಿದೆ. ಸಂವಿಧಾನದಲ್ಲಿ ಕಾಶ್ಮೀರಕ್ಕೆ ವಿಶೇಷ ಕಲಮನ್ನು ನೀಡಿ ವಿದೇಶಾಂಗ ನೀತಿ ಸಹಿತ ಮೂರಂಶದ ಕಾರ್ಯಕ್ರಮಗಳಲ್ಲಿ ಮಾತ್ರವೇ ಭಾರತದ ಅಧಿಕಾರದ ವ್ಯಾಪ್ತಿಗೆ ಸೇರಿಸಲಾಗಿದೆ. ಉಳಿದೆಲ್ಲ ಅಧಿಕಾರವನ್ನು ಕಾಶ್ಮೀರವೇ ನಿರ್ವಹಿಸಬೇಕಾಗಿದೆ. ಆದರೆ ಸಂವಿಧಾನ ಬದ್ಧ ಹಕ್ಕನ್ನು ಯಾವ ಕಾಂಗ್ರೆಸ್ ಪ್ರಧಾನಿಗಳೂ ನೀಡುವ ಮನಸ್ಸು ಮಾಡಲಿಲ್ಲ. ಈಗ ಸಂಘ ಪರಿವಾರದವರು ಇದನ್ನು ತಿಳಿಯಬೇಕು. ಸಂವಿಧಾನಬದ್ಧ ಹಕ್ಕು ದೊರೆಯದಿರುವುದೇ ಕಾಶ್ಮೀರಗಳ ಕೋಪಕ್ಕೆ ಕಾರಣವಾಗಿ ಪ್ರತ್ಯೇಕತಾವಾದ ಹುಟ್ಟಿಕೊಂಡಿರುವುದು. ಬರವಣಿಗೆಯಲ್ಲಿರುವ ಈ ಎಲ್ಲ ಕಡತಗಳನ್ನು ನಮ್ಮ ಹಿರಿಯ ನಾಯಕರು ಗಮನಿಸಿ ಕಾಶ್ಮೀರಿಗಳಿಗೆ ಒಪ್ಪಿಗೆಯಾಗುವಂತಹ ಕಾನೂನನ್ನು ರೂಪಿಸಿದಾಗಲೇ ಕಾಶ್ಮೀರದಲ್ಲಿ ಶಾಂತಿ ನೆಲೆಸುವುದು.

ಈ ಸಂಚಿಕೆಯ ವಿಶೇಷ ಸಂಪಾದಕೀಯ ಭಾಜಪ ಅಲ್ಲ ಯಡಿಯೂರಪ್ಪವೆಂದರೂ ಸರಿಯಾದೀತು. ದಕ್ಷಿಣ ಭಾರತದ ಪ್ರಪ್ರಥಮ ಭಾಜಪ ಸರಕಾರ ಪಕ್ಷೇತರರ ಬೆಂಬಲದಿಂದ ಸರಳ ಬಹುಮತವನ್ನು ಪಡೆದು ಸರಕಾರವನ್ನು ರಚಿಸಿ ಉತ್ತಮ ಆಡಳಿತವನ್ನು ನೀಡುತ್ತಾರೆ ಎಂದು ನಂಬಿದ ಕರ್ನಾಟಕದ ಪ್ರಜೆಗಳಿಗೆ ಯಡಿಯೂರಪ್ಪನವರ ಆಪರೇಷನ್ ಕಮಲದಿಂದ ಮೊದಲ ಆಘಾತವಾಯಿತು. ಸಂಪೂರ್ಣ ಬಹುಮತವಿದ್ದರೂ ಅಧಿಕಾರ ನಡೆಸಲು ಬಾರದ ಬಿಜೆಪಿ ಇತರ ಯಾವ ಪಕ್ಷಗಳಿಗಿಂತಲೂ ಭಿನ್ನ ಅಲ್ಲ. ನಿಜವಾಗಿ ಇತರೆಲ್ಲವುಗಳಿಗಿಂತ ಕಳಪೆ ಎನ್ನುವ ಸಂಪಾದಕರ ಅನಿಸಿಕೆ ಸರಿಯಾದುದೇ. ಗೊಹತ್ಯಾ ನಿಷೇಧ ತರುವುದು, ಲಕ್ಷಾಂತರ ಕೋಟ್ಯಾಂತರ ಆದಾಯ ಉಳ್ಳ ಮಠಗಳಿಗೆ ಹಣಕಾಸನ್ನು ಒದಗಿಸುವುದೇ ಅಧಿಕಾರವೆಂದು ತಿಳಿದ ಇವರಿಗೆ ಮುಂದಿನ ಸಾರಿ ಮತದಾರ ಬುದ್ಧಿ ಕಲಿಸುವುದರಲ್ಲಿ ಸಂಶಯವೇ ಇಲ್ಲ.

**ಅಬ್ದುಲ್ ವಹ್ಹಾಬ್ ಮುಲ್ಲಾ ಗಂಗಾವತಿ**

### ಪತ್ನಿಯ ಮನಗೆಲ್ಲಲು...

ಮಹಿಳಾ ವೇದಿಕೆಯಲ್ಲಿ ಮಿನಾರ್ಝ್ ತೊಕ್ಕೊಟ್ಟು ಅನುವಾದಿಸಿದ 'ಪತ್ನಿಯ ಮನಗೆಲ್ಲಲು...' ಲೇಖನ ಎರಡು ವಾರಗಳಲ್ಲಿ ಹರಿದು ಬಂದದ್ದನ್ನು ಓದಿದೆ. ಶಿರೋನಾಮೆಯಂತೆ ಪತ್ನಿಯು ತಂದೆ ತಾಯಿಯ ಮಗಳಾಗಿ, ಒಡ ಹುಟ್ಟಿದವರಿಗೆ ಸಹೋದರಿಯಾಗಿ, ಬೆಳೆದ ನಂತರ ಗಂಡ, ಅತ್ತೆ–ಮಾವ, ನಾದಿನಿ, ಮೈದುನರ ಮಧ್ಯೆ ಇದ್ದು ಜೀವನ ಸಾಗಿಸಿ, ಆದರ್ಶ ಸೊಸೆಯಾಗಿ, ಮಕ್ಕಳ ಲಾಲನೆಯ ತಾಯಿಯಾಗಿ, ನೆರೆಹೊರೆಯಲ್ಲಿ ಆತ್ಮೀಯತೆಯಿಂದ ಇರಬೇಕಾದ 'ಪತ್ನಿ'ಗೆ ಇಷ್ಟೆಲ್ಲಾ ಪುತೊ ಪುತೊ ಬೇಕೆ?

**ಕುಶಾ ಕಾರ್ಕಳ**

### ಮಾಡಿದ್ದುಣ್ಣೋ...

ಇತ್ತೀಚೆಗೆ ರಾಜ್ಯ ರಾಜಕೀಯ ಚಟುವಟಿಕೆಗಳು ದೇಶದ ಜನತೆಯೊಂದಿಗೆ ಪ್ರಾಣಿಗಳ ಪ್ರಪಂಚವನ್ನೂ ತಬ್ಬಿಬ್ಬಾಗಿಸುವಂತಿವೆ. ತಮ್ಮ ಮೂಲ ನೆಲೆಯನ್ನು ತೊರೆದು ರೆಸಾರ್ಟಗಳಲ್ಲಿ ಮೇಯುತ್ತಾ ಅಲೆಯುತ್ತಿರುವ 'ಕುರಿಮಂದೆಗಳು' ಗೋಮುಖ ವ್ಯಾಘ್ರಗಳಾಗಿರುವ ನಂಬಿಗಸ್ತ 'ಗೋವುಗಳು' ಅಧಿಕಾರದ ಆಸೆಗಾಗಿ ನಿಷ್ಠೆ ಬದಲಾಯಿಸುತ್ತಿರುವ ನಿಯತ್ತಿನ ಪ್ರಾಣಿಗಳು!

ಕೋಟಿ ಕೋಟಿಗಳಿಗೆ ಖರೀದಿಯಾಗುತ್ತಿರುವ 'ಕುದುರೆ+ಕತ್ತೆಗಳು', ಪಕ್ಷದಿಂದ ಪಕ್ಷಕ್ಕೆ ಲಾಂಗ್ ಜಂಪ್, ಹೈಜಂಪ್‌ನಲ್ಲಿ ದಾಖಲೆ ನಿರ್ಮಿಸುತ್ತಿರುವ ಕೋತಿ, ಮಂಗ, ಕಪ್ಪೆಗಳು, ಇವುಗಳೆಲ್ಲವುಗಳೊಂದಿಗೆ ಆಪರೇಷನ್ ಭೀತಿಯಲ್ಲಿರುವ 'ಮುಂದೆ ಬಂದರೆ ಹಾಯದ ಹಿಂದೆ ಒದೆಯದ' ಅಳಿದುಳಿದ 'ಜೀವ ಜಂತುಗಳು', ಕ್ಷಣಕ್ಷಣಕ್ಕೂ ಜನರನ್ನು ಬೆಪ್ಪು ತಕ್ಕಡಿಗಳನ್ನಾಗಿಸುತ್ತಿರುವ ಮಾಧ್ಯಮಗಳು ಇವೆಲ್ಲವುಗಳ ಮಧ್ಯೆ ಪ್ರಾಣಿಗಳಿಗೇನಾದರೂ ಮಾತು ಬರುತ್ತಿದ್ದರೆ 'ಇಟ್ಟರೆ ಸೆಗಣಿಯಾದೆ, ತಟ್ಟಿದರೆ ಕುರುಳಾದೆ, ಸುಟ್ಟರೆ ಗೊಬ್ಬರಕ್ಕೆ ಬೂದಿಯಾದೆ, ನೀನಾರಿಗಾದೆಯೋ ಎಲೈ ರಾಜಕಾರಣಿಯೇ' ಎಂದು ಖಂಡಿತವಾಗಿ ಕೇಳುತ್ತಿದ್ದವು.

ಹೌದು! ಇದಕ್ಕೆಲ್ಲಾ ಕಾರಣವೇನು? ಇಷ್ಟಪಟ್ಟು ಅಡುಗೆ (ಆಯ್ಕೆ) ಮಾಡಿದ ಮತದಾರ. ಅದಕ್ಕೆ 'ಮಾಡಿದುಣ್ಣೋ ಮಹರಾಯ' ಎನ್ನದೆ ಗತಿ ಇಲ್ಲ.

**ಎಂ. ಹಿಫ್‌ಝುರ್ರಹ್ಮಾನ್ ಸೂರಿ ಬಾದಾಮಿ**

### ದುಂದುವೆಚ್ಚ?

ಸನ್ಮಾರ್ಗದಲ್ಲಿ ಬರುವ ಇಸ್ಲಾಮಿ ಸಂದೇಶಗಳನ್ನು ಪಾಲಿಸಲು ಹಾಗೂ ಅನ್ಯರಿಗೆ ಅದರ ಬಗ್ಗೆ ತಿಳಿಸಲು ಆದಷ್ಟು ಪ್ರಯತ್ನ ಮಾಡುತ್ತೇನೆ. ಇತ್ತೀಚಿನ ದಿನಗಳಲ್ಲಿ ಮದುವೆಯೆಂಬುದು ಆಡಂಬರ ಹಾಗೂ ತೋರಿಕೆಯ ವಿಷಯವಾಗುತ್ತಿರುವಾಗ ಸನ್ಮಾರ್ಗವು ಅದನ್ನು ವಿರೋಧಿಸಿ ಸರಳ ಮದುವೆ ಸಮಾರಂಭಗಳಿಗೆ ಹೆಚ್ಚು ಆದ್ಯತೆ ಕೊಡುತ್ತಿರುವುದು ಪ್ರಶಂಸನೀಯ. ಆದರೆ ಅದ್ದೂರಿ ಸಮಾರಂಭಗಳನ್ನು ತ್ಯಜಿಸಿ ಸರಳ ಸಮಾರಂಭಗಳಿಗೆ ಪ್ರೋತ್ಸಾಹಿಸುವ ನಿಮ್ಮ ಧೋರಣೆಯ ವಿರುದ್ಧ ಮದುವೆ, ಸತ್ಕಾರ ಕೂಟಗಳ ಆತಿಥ್ಯದ ಜಾಹೀರಾತುಗಳೂ ಇತ್ತೀಚೆಗೆ ಪ್ರಕಟವಾಗುತ್ತಿವೆ. ಇಂತಹ ಆಡಂಬರಿಕೆಯ ಜಾಹೀರಾತುಗಳು ಇನ್ನಷ್ಟು ಅದ್ದೂರಿ ಸಮಾರಂಭಗಳಿಗೆ ಪ್ರೋತ್ಸಾಹ ನೀಡುವಂತಿದೆ ಎಂಬುದು ನನ್ನ ಅಭಿಪ್ರಾಯ. "ದುಂದು ವೆಚ್ಚ ಮಾಡುವವರು ಶೈತಾನನ ಸಹೋದರರು" ಎಂಬ ಹದೀಸನ್ನು ನಾವು ಇಂದು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗಿದೆ.

**ನಿದಾ ಮಂಗಳೂರು**

# ಹಗಲನ್ನು ಕತ್ತಲೆ ಅಂದ ಮಾತ್ರಕ್ಕೆ ಹಗಲೇನು ಕತ್ತಲಾಗುತ್ತಾ?

(ಮುಖಪುಟದಿಂದ)

ಫಲಿತಾಂಶವನ್ನು ಡಿ ಗಾಲ್ಲೆ ಗೌರವಿಸಿದರು. 1962 ಜುಲೈಯಲ್ಲಿ ಅಲ್ಜೀರಿಯ ಸ್ವಾತಂತ್ರ್ಯ ಘೋಷಿಸಿತು.

**ಆದರೆ...**

ಡಿ ಗಾಲ್ಲೆ ಫ್ರಾನ್ಸ್‌ನಾದ್ಯಂತ ಖಳರಾಗಿ, ದೇಶದ್ರೋಹಿಯಾಗಿ, ಮನೆಮುರುಕರಾಗಿ ಟೀಕೆಗೊಳಗಾದರು. ಎಲ್ಲೆಡೆ ಅವರನ್ನು ಜರೆಯುವ ಭಾಷಣಗಳು, ಲೇಖನಗಳು ಪ್ರಕಟವಾಗತೊಡಗಿದವು. ಹಲವಾರು ಹತ್ಯಾಪ್ರಯತ್ನಗಳು ನಡೆದುವು. ಟೀಕೆ, ಹಲ್ಲೆ, ನಿಂದನೆಯಿಂದ ಜರ್ಝರಿತಗೊಂಡ ಆತ ಸಾರ್ವಜನಿಕರ ಒತ್ತಡಕ್ಕೆ ಮಣಿದು ಅಧ್ಯಕ್ಷೀಯ ಚುನಾವಣೆ ಘೋಷಿಸಿದರು. ಮಾತ್ರವಲ್ಲ, ಹೀನಾಯವಾಗಿ ಸೋತರು. 1969 ಎಪ್ರಿಲ್ 29ರಂದು ಹುದ್ದೆಗೆ ರಾಜೀನಾಮೆ ಕೊಟ್ಟರಲ್ಲದೇ 1970 ನವೆಂಬರ್ 9ರಂದು ತೀವ್ರ ಹೃದಯಾಘಾತಕ್ಕೊಳಗಾಗಿ ಸಾವಿಗೀಡಾದರು. ಡಿ ಗಾಲ್ಲೆ ಸತ್ತರೂ ಜನರ ಆಕ್ರೋಶ ಮಾತ್ರ ತಣಿದಿರಲಿಲ್ಲ. ಅವರ ಶವ ದಫನ ಎಷ್ಟು ಗುಟ್ಟಾಗಿತ್ತೆಂದರೆ ಅಪರಿಚಿತ ಸ್ಥಳದಲ್ಲಿ, ಕೆಲವೇ ಕೆಲವು ಆಪ್ತ ಸಂಬಂಧಿಕರ ಉಪಸ್ಥಿತಿಯಲ್ಲಿ, ಅದೂ ಸರಕಾರದ ಯಾವೊಬ್ಬ ಸದಸ್ಯನ ಉಪಸ್ಥಿತಿಯೂ ಇಲ್ಲದೇ ನಡೆದು ಹೋಯಿತು. ಆದರೆ ಅದೇ ಫ್ರಾನ್ಸ್ ಇವತ್ತು ಡಿ ಗಾಲ್ಲೆಯನ್ನು, ಅವರ ದೂರದೃಷ್ಟಿಯ ನಿರ್ಧಾರವನ್ನು ಗೌರವದಿಂದ ಸ್ಮರಿಸುತ್ತಿದೆ. ಆತ ದೇಶದ್ರೋಹಿಯಲ್ಲ, ಹಿತಚಿಂತಕ ಎನ್ನುತ್ತಿದೆ. ಯಾಕೆಂದರೆ ಫ್ರಾನ್ಸ್ ಇವತ್ತು ಸೂಪರ್ ಪವರ್.

ಇಷ್ಟಕ್ಕೂ, Committee for Release of political prisoners ಎಂಬ ಸಂಘಟನೆ ದೆಹಲಿಯಲ್ಲಿ ಏರ್ಪಡಿಸಿದ ವಿಚಾರಗೋಷ್ಠಿಯಲ್ಲಿ ಅರುಂಧತಿ ರಾಯ್ ಹೇಳಿದ್ದೇನು ಹೊಸತೇ? ನಿಜವಾಗಿಯೂ ಕಾಶ್ಮೀರ ಭಾರತದ ಜೊತೆ ಕಾನೂನು ಸಮ್ಮತವಾಗಿ ಸೇರ್ಪಡೆಗೊಂಡಿದೆಯೇ?

ಜನಮತ ಸಂಗ್ರಹ ನಡೆಸಿ ಅಭಿಪ್ರಾಯ ಪಡಕೊಂಡ ಬಳಿಕವೇ ಜೋಧ್‌ಪುರ್, ಜುನಾಗಢ್, ಹೈದರಾಬಾದ್, ಕಾಶ್ಮೀರ ಮುಂತಾದ ಪ್ರದೇಶಗಳನ್ನು ಭಾರತದೊಂದಿಗೆ ಸೇರಿಸಿಕೊಳ್ಳಲಾಗುವುದು ಎಂದು ಅಕ್ಟೋಬರ್ 5, 1947ರಲ್ಲಿ ಕೇಂದ್ರ ಸರಕಾರ ಹೇಳಿದಾಗ, ಕಾಶ್ಮೀರದ ರಾಜ ಹರಿಸಿಂಗ್ ತೆಪ್ಪಗಿದ್ದ. ಭಾರತದೊಂದಿಗೆ ವಿಲೀನಗೊಳ್ಳುವ ಉಮೇದನ್ನಾಗಲಿ, ಸ್ಪಷ್ಟ ನಿರ್ಧಾರವನ್ನಾಗಲಿ ವ್ಯಕ್ತಪಡಿಸಲೇ ಇಲ್ಲ. ಹೀಗಿದ್ದಾಗಲೇ ಅಕ್ಟೋಬರ್ 26, 1947ರಂದು ಕಾಶ್ಮೀರದ ಮೇಲೆ ಪಾಕ್ ಆಕ್ರಮಣ ನಡೆಸಿತು. ಬೆದರಿದ ಹರಿಸಿಂಗ್ ಭಾರತದ ನೆರವು ಕೋರಿದ. ಭಾರತದೊಂದಿಗೆ ಸೇರ್ಪಡೆಗೊಳ್ಳುವುದಾದರೆ ಮಾತ್ರ ನೆರವು ನೀಡುವುದಾಗಿ ನೆಹರೂ ಷರತ್ತು ವಿಧಿಸಿದರು. ಬೇರೆ ದಾರಿಯಿಲ್ಲದೆ ಹರಿಸಿಂಗ್ ಷರತ್ತಿಗೆ ಒಪ್ಪಿದ. ತಕ್ಷಣ ಸೇನೆ ರವಾನಿಸಿದ ನೆಹರೂ ಪಾಕ್‌ನ ಆಕ್ರಮಣವನ್ನು ಹಿಮ್ಮೆಟ್ಟಿಸಿದರು. ದುರಂತ ಏನೆಂದರೆ, 20 ದಿನಗಳ ಹಿಂದಷ್ಟೇ ಜನಮತ ಸಂಗ್ರಹದ ವಾಗ್ದಾನ ನೀಡಿದ್ದ ನೆಹರೂ ಷರತ್ತಿನ ಮೂಲಕ ಅದನ್ನು ಮುರಿದುಬಿಟ್ಟರು. ರಾಜಾ ಹರಿಸಿಂಗ್ ಕಾಶ್ಮೀರ ಬಿಟ್ಟು ಓಡಿ ಹೋದ. ಹರಿಸಿಂಗ್‌ನ ಅಸಹಾಯಕತೆಯನ್ನು ಭಾರತ ಸರಕಾರ ದುರ್ಬಳಕೆ ಮಾಡಿಕೊಂಡಿದೆ ಎಂದು ಕಾಶ್ಮೀರಿಗಳು ಸಿಟ್ಟಾದಾಗ, ಜನಮತ ಸಂಗ್ರಹದ ವಾಗ್ದಾನವನ್ನು ಪೂರೈಸುವುದಾಗಿ ನೆಹರು ಮತ್ತೆ ಭರವಸೆ ಕೊಟ್ಟರು. ಪರಿಸ್ಥಿತಿ ಶಾಂತವಾಗಲಿ ನೋಡೋಣ ಎಂದು ಸಮಾಧಾನಿಸಿದರು.

**ವಿಷಯ ಅದಲ್ಲ**

ಇವತ್ತು ಎರಡು ಶೇಕಡಾ ಇರುವ ಕಾಶ್ಮೀರಿ ಪಂಡಿತರ (ಬ್ರಾಹ್ಮಣರು) ಪ್ರತಿನಿಧಿಯಂತಿದ್ದ ರಾಜಾ ಹರಿಸಿಂಗ್ ಎಂದೂ ಬಹುಸಂಖ್ಯಾತರ ಒಲವನ್ನು ಗಳಿಸಿಯೇ ಇರಲಿಲ್ಲ. ಕಾಶ್ಮೀರಕ್ಕೆ ಇಸ್ಲಾಮ್ ಪ್ರವೇಶಿಸುವುದಕ್ಕಿಂತ ಮೊದಲು ಬೌದ್ಧರು ಬಹುಸಂಖ್ಯಾತರಾಗಿದ್ದರು. ಭಾರತದ ಇತರೆಲ್ಲ ಭಾಗಗಳಿಂದ ಬೌದ್ಧಧರ್ಮವನ್ನು ಓಡಿಸುವುದರಲ್ಲಿ ತೊಡಗಿಸಿಕೊಂಡಿದ್ದವರು (ಪಂಡಿತರು) ಕಾಶ್ಮೀರಿ ಬೌದ್ಧರ ಮೇಲೆಯೂ ತೀವ್ರತರದ ಒತ್ತಡ, ಬಲಾತ್ಕಾರ ನಡೆಸತೊಡಗಿದರು. ಅಹಿಂಸೆಯನ್ನು ಮುಗ್ಧವಾಗಿ ಪಾಲಿಸುತ್ತಿದ್ದ ಬೌದ್ಧರು ಅಂತಿಮವಾಗಿ ಅಲ್ಪಸಂಖ್ಯಾತ ಪಂಡಿತರ ಗುಲಾಮರಂತೆ ಬದುಕತೊಡಗಿದರು. ಈ ಕಾರಣದಿಂದಲೇ ಬೌದ್ಧರನ್ನು ಇಸ್ಲಾಮ್ ಆಕರ್ಷಿಸಿತು. ಇದು ಎಷ್ಟು ದೊಡ್ಡ ಪ್ರಮಾಣದಲ್ಲಿ ಆಯಿತೆಂದರೆ, ಕಾಶ್ಮೀರದಲ್ಲಿ ಮುಸ್ಲಿಮರೇ ಬಹುಸಂಖ್ಯಾತರಾಗುವಷ್ಟು. ಬೌದ್ಧರು ಇಸ್ಲಾಮನ್ನು ವಿಮೋಚನೆಯ ಧರ್ಮವಾಗಿ ಕಂಡರು. ಆದರೂ ಅಲ್ಪಸಂಖ್ಯಾತ ಪಂಡಿತರ ಕೈಯಲ್ಲೇ ಅಧಿಕಾರ ಇತ್ತು. ಮುಘಲರ ಆಡಳಿತ ಕಾಲದಲ್ಲಿ




ಕೈತಪ್ಪಿ ಹೋಗಿದ್ದ ಅಧಿಕಾರವನ್ನು ಬ್ರಿಟಿಷರ ಜೊತೆ ಕೈಜೋಡಿಸಿ 1946ರಲ್ಲಿ ಗುಲಾಬ್ ಸಿಂಗ್ ಮರಳಿ ಗಳಿಸಿಕೊಂಡ.

**ಶೈಖ್ ಅಬ್ದುಲ್ಲಾರ ಪ್ರವೇಶವಾದದ್ದೇ ಆಗ.**

ಇದಾಗಿ ಸುಮಾರು 90 ವರ್ಷಗಳ ಬಳಿಕ, 1939ರಲ್ಲಿ ಶೈಖ್ ಅಬ್ದುಲ್ಲಾರ ನೇತೃತ್ವದಲ್ಲಿ ನ್ಯಾಶನಲ್ ಕಾನ್ಫರೆನ್ಸ್‌ನ ರಚನೆಯಾಯಿತು. ಕಾಶ್ಮೀರದಿಂದ ರಾಜಾಡಳಿತ ತೊಲಗಬೇಕು ಎಂದು ಆಗ್ರಹಿಸುತ್ತಿದ್ದ ಹಲವಾರು ಪಕ್ಷಗಳು ಅಬ್ದುಲ್ಲಾರೊಂದಿಗೆ ಸೇರಿಕೊಂಡು 1944ರಲ್ಲಿ ಸ್ವತಂತ್ರ ಕಾಶ್ಮೀರದ ಬೇಡಿಕೆ ಮುಂದಿಟ್ಟುವು. 1945ರಲ್ಲಿ 'ರಾಜರುಗಳೇ, ಕಾಶ್ಮೀರದಿಂದ ಹೊರಟುಹೋಗಿ' ಎನ್ನುವ ಚಳವಳಿ ಪ್ರಾರಂಭವಾಯಿತು. ನಿಜವಾಗಿ 1947ರಲ್ಲಿ ಭಾರತ ಸ್ವತಂತ್ರಗೊಳ್ಳುವಾಗ ಕಾಶ್ಮೀರ ಪ್ರತ್ಯೇಕ ರಾಷ್ಟ್ರದ ಚಳವಳಿಯೊಂದಿಗೆ ಸುದ್ದಿಯಲ್ಲಿತ್ತು ಎನ್ನುವುದಕ್ಕೆ ಇದು ಪುರಾವೆಯಲ್ಲವೇ? ಇಷ್ಟಕ್ಕೂ ಅರುಂಧತಿ ರಾಯ್‌ರ ಹೇಳಿಕೆಯನ್ನು ದೇಶದ್ರೋಹ ಎಂದು ಟೀಕಿಸುವವರು, ಎಂ.ಎಫ್. ಹುಸೇನ್‌ರಂತೆ ದೇಶದ ನೂರಾರು ನ್ಯಾಯಾಲಯಗಳಲ್ಲಿ ಕೇಸು ದಾಖಲಿಸುವುದಾಗಿ ಬೆದರಿಸುವವರು ನವೆಂಬರ್ 21, 1947ರಲ್ಲಿ ಭಾರತ ಸರಕಾರ ಕಾಶ್ಮೀರಿಗಳಿಗೆ ಕೊಟ್ಟ ಭರವಸೆಯ ಬಗ್ಗೆಯೇಕೆ ಮಾತಾಡುವುದಿಲ್ಲ? ಇತರೆಲ್ಲ ಪ್ರಾಂತಗಳಂತೆ ಯಾವೊಂದು ಪೂರ್ವ ಷರತ್ತೂ ಇಲ್ಲದೆ, ಭರವಸೆ, ವಾಗ್ದಾನಗಳನ್ನೂ ನೀಡದೆ ಕಾಶ್ಮೀರವನ್ನು ಭಾರತದೊಂದಿಗೆ ಸೇರಿಸಿದ್ದೇ ಆಗಿದ್ದರೆ, 1948ರಲ್ಲಿ 'ಕಾಶ್ಮೀರ ಸ್ವನಿರ್ಣಯ ಸಭಾ' ಎಂಬ ಮಂಡಳಿಯನ್ನು ಕೇಂದ್ರ ಸರಕಾರ ರಚಿಸುವ ಅಗತ್ಯವಾದರೂ ಏನಿತ್ತು? "ಸಂವಿಧಾನ ರಚಿಸುವಾಗ ಕಾಶ್ಮೀರಿಗಳಿಗೆ ಸೂಕ್ತ ಪ್ರಾತಿನಿಧ್ಯ ಸಿಗಬೇಕೆಂಬ ಉದ್ದೇಶದಿಂದ ಈ ಕ್ರಮ (ಸ್ವನಿರ್ಣಯ ಸಭಾ) ಕೈಗೊಳ್ಳುತ್ತಿದ್ದೇವೆ. ಇದು ಬಿಟ್ಟು ಕಾಶ್ಮೀರಿಗಳಿಗೆ ಸ್ವತಂತ್ರರಾಗುವ ಇಚ್ಛೆಯಿದೆಯೆಂದಾದರೆ ಅದನ್ನು ಖಂಡಿತ ಈಡೇರಿಸುತ್ತೇವೆ. ಅದಕ್ಕೆ ಭಾರತದ ಸಂವಿಧಾನ ಖಂಡಿತ ಅಡ್ಡಿಯಾಗದು" ಎಂದು ಭರವಸೆ ಕೊಟ್ಟದ್ದೇಕೆ? ಅಂದ ಹಾಗೆ ಇವನ್ನೆಲ್ಲಾ ಕೊಟ್ಟದ್ದು ಅರುಂಧತಿ ರಾಯ್ ಅಲ್ಲವಲ್ಲ. ಆಕೆಯನ್ನು ಪ್ರಚಾರದ ಗೀಳು ಅಂಟಿಸಿಕೊಂಡವಳು ಎಂದು ಜರೆಯುವ ಮಂದಿ ಇತಿಹಾಸವನ್ನೊಮ್ಮೆ ಓದಬಾರದೇ? ಇಷ್ಟಕ್ಕೂ ಇವತ್ತು ಕಾಶ್ಮೀರ ಪ್ರತ್ಯೇಕವಾಗುವುದು, ಸ್ವತಂತ್ರ ರಾಷ್ಟ್ರದ ಸ್ಥಾನಮಾನ ಗಿಟ್ಟಿಸಿಕೊಳ್ಳುವುದು ಕಾಶ್ಮೀರಿಗಳ ಪಾಲಿಗೆ ಒಳಿತೋ ಕೆಡುಕೋ ಎನ್ನುವುದು ಬೇರೆ ವಿಷಯ. ಐತಿಹಾಸಿಕ ಸತ್ಯವೊಂದನ್ನು ಮತ್ತು ಆಡಳಿತಗಾರರ ಪ್ರಮಾದಗಳನ್ನು ಒಪ್ಪಿಕೊಳ್ಳದಷ್ಟು, ಕನಿಷ್ಠ ಆ ಬಗ್ಗೆ ಮಾತಾಡುವುದೇ ದೇಶದ್ರೋಹ ಎನ್ನುವಷ್ಟು ನಾವು ಸಂಕುಚಿತವಾದಿಗಳಾಗುವುದಾದರೂ ಯಾಕೆ? ಐತಿಹಾಸಿಕ ಮತ್ತು ಪ್ರಸಕ್ತ ಆಧಾರಗಳನ್ನು ಮುಂದಿಟ್ಟು, ಒಬ್ಬಾಕೆ ವ್ಯಕ್ತಪಡಿಸುವ ಅಭಿಪ್ರಾಯವನ್ನು ಆಕೆಯ ಜಾತಿಗೆ, ವೈಯಕ್ತಿಕ ಬದುಕಿಗೆ ಸೀಮಿತಗೊಳಿಸಿ ನೋಡುವುದು ಎಷ್ಟು ಸರಿ? ಕಾಶ್ಮೀರ ಭಾರತದ ಜೊತೆಗೇ ಇರಲಿ ಎಂದು ಆಗ್ರಹಿಸುವುದಕ್ಕೆ ಅವಕಾಶ ಇರುವಂತೆಯೇ ಅದಕ್ಕೆ ಭಿನ್ನವಾದ ಆಗ್ರಹಕ್ಕೂ ಅವಕಾಶ ಇಲ್ಲವೇ, ಇರಬೇಡವೇ?

2010 ಅಕ್ಟೋಬರ್ 27ರಂದು Sedition v/s free speech (ದೇಶದ್ರೋಹ v/s ಸ್ವತಂತ್ರ ಮಾತು) ಎಂಬ ಶೀರ್ಷಿಕೆಯಲ್ಲಿ ದಿ ಹಿಂದೂ ಪತ್ರಿಕೆ ಸಂಪಾದಕೀಯ ಬರೆಯಿತು. 150 ವರ್ಷಗಳ ಇತಿಹಾಸವಿರುವ ದಿ ಹಿಂದೂ, ಅರುಂಧತಿ ರಾಯ್‌ರ ವಾಕ್‌ಸ್ವಾತಂತ್ರ್ಯ ಮತ್ತು ಮಾತಿನ ಧಾಟಿಯನ್ನು ಬಲವಾಗಿ ಬೆಂಬಲಿಸಿತು. ಇದೇ ವಿಷಯಕ್ಕೆ ಸಂಬಂಧಿಸಿ ಪತ್ರಿಕೆಯಲ್ಲಿ ಪ್ರಕಟವಾದ 26 ಪತ್ರಗಳಲ್ಲಿ 22 ಪತ್ರಗಳೂ ಅರುಂಧತಿಗೆ ಬೆಂಬಲ ಸಾರಿದುವು. ಇಷ್ಟಕ್ಕೂ ಇವೆಲ್ಲವನ್ನೂ ದೇಶದ್ರೋಹ ಎನ್ನುತ್ತೀರಾ? ವ್ಯವಸ್ಥೆಯನ್ನು ಟೀಕಿಸಿದ್ದಕ್ಕಾಗಿ ಅಂಗ್ ಸ್ಯಾನ್ ಸೂಕಿಯನ್ನು ಜೈಲಲ್ಲಿಟ್ಟು ಕೊಳೆಯಿಸುತ್ತಿರುವ ಮ್ಯಾನ್ಮಾರ್‌ನ 'ಜುಂತಾ'ವನ್ನು 'ಸರ್ವಾಧಿಕಾರಿ ಪ್ರಭುತ್ವ' ಎಂದು ಜರೆಯುವ ನಾವು, ಅದೇ ನಾಲಗೆಯಲ್ಲಿ ಅರುಂಧತಿಯನ್ನು ದೂರುವುದು ಯಾವ ಬಗೆಯ ನೈತಿಕತೆ? ವ್ಯವಸ್ಥೆಯ ತಪ್ಪುಗಳನ್ನು, ಅಸಮರ್ಪಕ ಯೋಜನೆಗಳನ್ನು ಅರುಂಧತಿ ಆಗಾಗ ವಿಮರ್ಶೆಗೊಡ್ಡುತ್ತಲೇ ಇದ್ದಾರೆ. ಅವರ ಮಾತಿನ ಏಟಿಗೆ ಬಂಡವಾಳಶಾಹಿ ಚಿಂತನೆಗಳು, ಸೆಝ್, ಮಾಲ್‌ಗಳು ಗುರಿಯಾಗುತ್ತಲೂ ಇವೆ. ನಿಜವಾಗಿ ಇಂಥ ಭಿನ್ನ ಧ್ವನಿಗಳೇ ವ್ಯವಸ್ಥೆಯನ್ನು ಜನವಿರೋಧಿಯಾಗಂತೆ, ತಪ್ಪು ನಿರ್ಧಾರ ಕೈಗೊಳ್ಳದಂತೆ ತಡೆಯುತ್ತದೆ. ಕೆಲವೊಮ್ಮೆ ಆ ಚಿಂತನೆಗಳು ನಮ್ಮ ನಿಲುವು, ಅಭಿಪ್ರಾಯಗಳಿಗೆ ಸರಿ ಹೊಂದದೇ ಇರಬಹುದು. ಹಾಗಂತ ಅದು ದೇಶದ್ರೋಹಿಯಾಗುವುದಾದರೂ ಯಾಕೆ?

ಅಂದಹಾಗೆ, ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆನ್ನುತ್ತಿರುವ ನಾವೇ 1948 ಜನವರಿಯಲ್ಲಿ ಕಾಶ್ಮೀರ ವಿವಾದವನ್ನು ವಿಶ್ವಸಂಸ್ಥೆಗೆ ಒಯ್ದದ್ದಲ್ಲವೇ?

ಆ ದೂರನ್ನು ಪರಿಗಣಿಸಿ 1948 ಜನವರಿ 20ರಂದು ವಿಶ್ವಸಂಸ್ಥೆಯ ಭದ್ರತಾ ಸಮಿತಿ ಒಂದು ಸತ್ಯಶೋಧನಾ ತಂಡವನ್ನು ಭಾರತಕ್ಕೆ ಕಳುಹಿಸಿಕೊಟ್ಟಿತು. ಮಾತ್ರವಲ್ಲ, ಭಾರತ-ಪಾಕ್‌ಗಳ ನಡುವಿನ ಸಮರ ನಿಲ್ಲಿಸುವುದಕ್ಕಾಗಿ ಆಗಸ್ಟ್ 13ರಂದು ತಾತ್ಕಾಲಿಕ ಸೂತ್ರಗಳನ್ನೂ ಮುಂದಿಟ್ಟಿತು.

1. ಯುದ್ಧ ವಿರಾಮ, 2. ಸೇನೆಯನ್ನು ಹಿಂತೆಗೆಯುವುದು, 3. ಕಾಶ್ಮೀರದಲ್ಲಿ ಜನಮತ ಸಂಗ್ರಹಣೆ.

ಆದರೆ ಜನಮತ ಸಂಗ್ರಹದ ಬೇಡಿಕೆಯನ್ನು ಕೇಂದ್ರ ಸರಕಾರ ಈಡೇರಿಸಲೇ ಇಲ್ಲ. ಅದಕ್ಕೆ ಬದಲಾಗಿ ವಿದೇಶಾಂಗ, ಪ್ರತಿರೋಧ, ವಾರ್ತಾ ವಿನಿಮಯ ಮುಂತಾದುವುಗಳನ್ನು ಬಿಟ್ಟು ಉಳಿದ ವಿಷಯಗಳಲ್ಲಿ ಕಾಶ್ಮೀರಿಗಳಿಗೆ ಸ್ವಯಮಾಧಿಕಾರವನ್ನು ನೀಡುವ 370ನೇ ವಿಧಿಯನ್ನು ರಚಿಸಿ, ಕಾಶ್ಮೀರವನ್ನು ಭಾರತದ ಭಾಗವಾಗಿ ಮಾಡಿಕೊಳ್ಳಲಾಯಿತು. 1953ರಲ್ಲಿ ಶೈಖ್ ಅಬ್ದುಲ್ಲಾರನ್ನು ದೇಶವಿರೋಧಿ ಚಟುವಟಿಕೆಯ ಆರೋಪ ಹೊರಿಸಿ 22 ವರ್ಷಗಳ ಕಾಲ ನೆಹರೂ ಜೈಲಿಗಟ್ಟಿದರು. 1957ರಲ್ಲಿ ಜನಮತ ಸಂಗ್ರಹವೇ ನಡೆಸುವುದಿಲ್ಲ ಎಂದು ನೆಹರು ಘೋಷಿಸಿ ಬಿಟ್ಟರು. ಆ ಬಳಿಕ ವಿವಿಧ ನೆಪಗಳನ್ನು ಮುಂದಿಡುತ್ತಾ ಕಾಶ್ಮೀರಕ್ಕೆ 370ನೇ ವಿಧಿಯ ಮೂಲಕ ಒದಗಿಸಬೇಕಾಗಿದ್ದ ಒಂದೊಂದೇ ಹಕ್ಕನ್ನು ಕೇಂದ್ರ ಸರಕಾರ ಮೊಟಕುಗೊಳಿಸುತ್ತಾ ಹೋಯಿತು. ಕಾಶ್ಮೀರಿಗಳು ದಿನೇ ದಿನೇ ತಮಗಾದ ವಂಚನೆ, ವಿಶ್ವಾಸ ಘಾತುಕತನಕ್ಕೆ ಕ್ರುದ್ಧರಾಗುತ್ತಾ ಹೋದರು. ಇವತ್ತು ಕಾಶ್ಮೀರದ ಸ್ಥಿತಿ ಯಾವ ಹಂತಕ್ಕೆ ತಲುಪಿದೆಯೆಂದರೆ ಪ್ರತಿ 7 ಕಾಶ್ಮೀರಿಗೆ ಓರ್ವ ಸೈನಿಕ ಅಲ್ಲಿದ್ದಾನೆ. ಇಷ್ಟಕ್ಕೂ ಈ ಯಾವ ಐತಿಹಾಸಿಕ ಹಿನ್ನೆಲೆಯನ್ನೂ ತಿಳಿಯದೇ ಕಾಶ್ಮೀರದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು, ದೇಶದ್ರೋಹಿ, ದೇಶಪ್ರೇಮಿಗಳ ಪಟ್ಟ ತಯಾರಿಸುವುದಕ್ಕೆ ಏನೆನ್ನಬೇಕು? ಬಿಡಿ, ಫ್ರಾನ್ಸ್‌ನಲ್ಲಿ ಡಿ ಗಾಲ್ಲೆ ತೋರಿದ ಎದೆಗಾರಿಕೆಯನ್ನು ನಮ್ಮ ಮನ್‌ಮೋಹನ್ ಸಿಂಗ್ ಪ್ರದರ್ಶಿಸುವುದು ಸುಲಭವಲ್ಲ ನಿಜ. ಅದರ ಅಗತ್ಯವೂ ಇಲ್ಲ ಎಂದೇ ಹೇಳೋಣ. ಹಾಗಂತ ಸತ್ಯ ಹೇಳುವುದನ್ನೂ ಅಪರಾಧ ಎಂದರೆ ಹೇಗೆ? ನೀವೇ ಹೇಳಿ.

ಏ.ಕೆ. ಕುಕ್ಕಿಲ
akkukkila@gmail.com

## ಸ್ವಾರ್ಥ

ಬೆಳ್ಳಂಬೆಳಗಾಗುವುದರೊಳಗೆ
ಜೀವನೋಪಯೋಗಿ ವಸ್ತುಗಳ
ಬೆಲೆಗಳೆಲ್ಲ ಗಗನಕ್ಕೆ ಏರಿ
ನೆಮ್ಮದಿ ಇಲ್ಲದಂತಾಗಿ ಬದುಕು ಬರಡಾಗಿದೆ

ಹಾಲು ಮೊಸರು ಬೆಣ್ಣೆ
ಒಮ್ಮೊಮ್ಮೆ ದೊರೆಯುವುದು ಕನಸಿನೊಳಗೆ
ಹಪಹಪಿಸುತ್ತಿವೆ ಕಂದಮ್ಮಗಳು
ಜೀವನ ಅಸ್ತವ್ಯಸ್ತ

ಮನೆಗೆ ಆಗಮಿಸಿದ ಅತಿಥಿ
ನೆಂಟರಿಗೆ ಕಾಫಿ ಚಹಾ
ಕೊಡದೇ ಜಲಪಾನ ನೀಡಿ ಔಪಚಾರಿಕವಾಗಿ
ವಿಚಾರಿಸಿ ಕಳುಹಿಸುವ ಹಂತಕ್ಕೆ ತಲುಪಿದ್ದೇವೆ.

ಹಾಲು ಕುಡಿದು ಕುಸ್ತಿ ಕಸರತ್ತು
ಮಾಡುವ ಗಟ್ಟಿಮುಟ್ಟ ಜಟ್ಟಿಗಳು
ಹೇಳ ಹೆಸರಿಲ್ಲದಂತಾಗಿದ್ದಾರೆ, ಪಾನ ಪರಾಗ
ಗುಟಕಾ ಸೇವಿಸಿ ಹಾರುವ ಹಕ್ಕಿಗಳಂತಾಗಿದ್ದಾರೆ

ಪೌಷ್ಟಿಕತೆ ಇಲ್ಲದಂತಾಗಿ
ಬೆಲೆಗಳೆಲ್ಲ ಬಡವನ ಕೈಗೆ
ನಿಲುಕದಂತಾಗಿ ಎಲ್ಲವೂ
ವ್ಯಾವಹಾರಿಕ ಎಲ್ಲೆಲ್ಲೂ ಸ್ವಾರ್ಥ ತುಂಬಿಕೊಂಡಿದೆ

ಉಮರ್ ಶರೀಫ್ ಎನ್. ಕುಂಟೋಜಿ

# ವಿಕಿಲೀಕ್ಸ್ ಅಮೇರಿಕವನ್ನು ಕಟಕಟೆಗೆ ಒಯ್ಯುವುದೇ?

ವಿದೇಶರಂಗ

ಎ.ಆರ್. ಫಾರೂಕ್




ಅಮೇರಿಕಾದ ಯುದ್ಧಾಪರಾಧಗಳ ತನಿಖೆಯಾಗಬೇಕೆಂದು ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಬಾನ್ ಕಿ ಮೂನ್‌ರಿಗೆ ಅನ್ನಿಸಿದ್ದು ವಿಕಿಲೀಕ್ಸ್ ಮ್ಯಾಗಸಿನ್‌ಗೆ ಸಂದ ಗೌರವವೆಂದೇ ಹೇಳಬೇಕಾಗುತ್ತದೆ. ವಿಕಿಲೀಕ್ಸ್‌ನಲ್ಲಿ ಹೊಸದಾಗಿ ಬಹಿರಂಗವಾದ ಅಮೇರಿಕನ್ ಸೈನಿಕರ ಕ್ರೌರ್ಯದ ದಾಖಲೆಗಳು ಇರಾಕಿನ ನರಸಂಹಾರದ ಕತೆಯನ್ನು ವಿವರಿಸಿದೆ. ಅಮೇರಿಕದ ಹಿಡಿತದಲ್ಲಿರುವ ವಿಶ್ವಸಂಸ್ಥೆಯ ಕಾರ್ಯದರ್ಶಿಯ ಮಾತು ಒಂದು ವೇಳೆ ಅಂತಾರಾಷ್ಟ್ರೀಯ ನ್ಯಾಯಾಲಯದ ಕಟಕಟೆಯಲ್ಲಿ ಅಮೇರಿಕವನ್ನು ತಂದು ನಿಲ್ಲಿಸಲು ಸಮರ್ಥವಾಗದಿದ್ದರೂ ಬುಶ್ ಪಾತಕಕ್ಕೆ ದೇವ ಪ್ರಾತಿನಿಧಿತ್ವವನ್ನು ಆರೋಪಿಸುವುದಕ್ಕಂತೂ ಖಂಡಿತಾ ಹಿನ್ನಡೆಯಾಗಿದೆ. ಬುಶ್‌ರ ಅಮೇರಿಕವು ಇರಾಕ್ ಮತ್ತು ಅಫಘಾನಿಸ್ತಾನಕ್ಕೆ ಸ್ವಾತಂತ್ರ್ಯ ಕೊಡಿಸಲು ಹೊರಟಿತ್ತಷ್ಟೇ. ಆದರೆ ಅಮೇರಿಕ ಈ ಸ್ವಾತಂತ್ರ್ಯವನ್ನು ಅನುಭವಿಸಬೇಕಾಗಿದ್ದ ನಾಗರಿಕರನ್ನೇ ಕೊಂದುಹಾಕಿತ್ತು. ಅವರ ಜೀವಕ್ಕೆ ಕುತ್ತು ತಂದಿತ್ತೆಂದು ವಿಕಿಲೀಕ್ಸ್ ಹೇಳಿದೆ. ವಿಕಿಲೀಕ್ಸ್‌ಗೆ ಸಿಕ್ಕಿರುವುದು 2004ರ ಮೇಯಿಂದ 2009 ಮಾರ್ಚ್‌ವರೆಗಿನ ದಾಖಲೆಗಳು ಮಾತ್ರವಾಗಿದೆ. ಒಟ್ಟಾರೆ ಈ ಅವಧಿಯಲ್ಲಿ 1 ಲಕ್ಷ ಮಂದಿಯ ಕಗ್ಗೊಲೆ ನಡೆದಿದೆ. ಅದರಲ್ಲಿ ಶೇ. 60ರಷ್ಟು ಸಾಮಾನ್ಯ ನಾಗರಿಕರನ್ನು ಕಗ್ಗೊಲೆ ನಡೆಸಲಾಗಿದೆ. ಅಂದರೆ ಪ್ರತಿದಿವಸಕ್ಕೆ 31 ಮಂದಿಯಂತೆ ಅಮೇರಿಕನ್ ಸೈನಿಕರು ನಾಗರಿಕರನ್ನು ಕೊಂದು ಹಾಕಿದ್ದಾರೆ. ಮಕ್ಕಳು, ಮಹಿಳೆಯರು ಕೂಡಾ ಇದರಲ್ಲೊಳಗೊಂಡಿದ್ದಾರೆ. ಬುಶ್‌ರ ರಾಕ್ಷಸೀಯತೆಗೆ ವಿಕಿಲೀಕ್ಸ್ ಕೊಟ್ಟದ್ದು ಬಹಳ ಪ್ರಬಲ ಪುರಾವೆಯಾಗಿದೆ. ಈಗಿನ ಅಧ್ಯಕ್ಷ ಒಬಾಮಾರಿಂದ ಹಿಡಿದು ಅಮೇರಿಕದ ಎಲ್ಲ ನಾಗರಿಕರು ತಲೆ ತಗ್ಗಿಸಬೇಕಾದ ವಿಚಾರವಿದು. ಇವು ಬುಶ್‌ರ ಯುದ್ಧಾಪರಾಧಕ್ಕೆ, ನಾಗರಿಕ ಹತ್ಯೆಗಳಿಗಾಗಿ ದಂಡಿಸಲು ಸಾಕಾಗುವಷ್ಟು ಆಧಾರ ಪ್ರಮಾಣಗಳು. ಬಾನ್‌ಕಿ ಮೂನ್‌ರಂತೂ ಅಮೇರಿಕದ ಯುದ್ಧಾಪರಾಧದ ತನಿಖೆಯಾಗಬೇಕೆಂದು ಹೇಳಿದ್ದಾರೆ. ಬಹುಶಃ ವಿಶ್ವಸಂಸ್ಥೆಯೆಂಬುದು ಒಂದು ಸಂಭಾವಿತ ಸಂಸ್ಥೆ ಎನ್ನಿಸಿಕೊಳ್ಳುವ ಜರೂರತ್ತು ಅವರಿಗಿರುವುದು ಅವರ ಹೇಳಿಕೆಯ ಅಗತ್ಯವಾಗಿತ್ತು ಎಂದು ಎಲ್ಲರೂ ಬಲ್ಲರು. ಅನ್ನಾನ್‌ರ ನಂತರ ಅಮೇರಿಕವನ್ನು ಯುದ್ಧಾಪರಾಧಕ್ಕಾಗಿ ಶಿಕ್ಷಿಸಬೇಕಾಗಿದೆಯೆಂದು ಬೇರೆ ಯಾವ ರಾಷ್ಟ್ರವೂ ಹೇಳಿಲ್ಲ. ಬಲಾಢ್ಯ ರಾಷ್ಟ್ರಗಳು ತುಟಿ ಬಿಚ್ಚಿಲ್ಲ. ತಮ್ಮ ನೆಲೆಯಲ್ಲಿ ತಮ್ಮದೇ ಜನ ಹತ್ಯೆಯಾಗಿರುವುದಕ್ಕೂ ಅರಬ್ ರಾಷ್ಟ್ರಗಳು ಪ್ರತಿಕ್ರಿಯಿಸುವುದಿಲ್ಲ. ಅಂದರೆ ಇವರೆಲ್ಲರೂ ಅಮೇರಿಕಕ್ಕೆ ಒಂದೋ ದೇವರ ಪಟ್ಟ ಅಥವಾ ನಂತರದ ಸ್ಥಾನವನ್ನು ನೀಡಿದ್ದಾರೆ ಎಂಬ ಸಂದೇಹ ಮೂಡುತ್ತದೆ. ಯಾಕೆಂದರೆ ತನ್ನವರೇ ಅಕ್ರಮವೆಸಗಿದರೂ ಶಿಕ್ಷೆಗೊಳಗಾಗಬೇಕೆಂಬ ಇಸ್ಲಾಮೀ ಆದರ್ಶಕ್ಕೆ ವಿರುದ್ಧದ ನಡೆಗಳಿವು. ತನ್ನವರನ್ನು ಚಿಂದಿಚಿಂದಿ ಮಾಡಿ ಎಸೆದವರ ಪಾತಕದ ಪಕ್ಷ ವಹಿಸುವುದೆಂದರೇನು? ಒಂದೊಮ್ಮೆ ಅಮೇರಿಕಾವಾಗಲಿ, ಇಂತಹ ಅರಬ್ ಆಡಳಿತಗಾರರಾಗಲಿ ಅಂತಾರಾಷ್ಟ್ರೀಯ ಕೋರ್ಟಿನ ವಿಚಾರಣೆಯನ್ನು ತಪ್ಪಿಸಿಕೊಳ್ಳಬಹುದು. ಆದರೆ ಅದಕ್ಕೂ ಮೀರಿದ ದೇವನ ಕೋರ್ಟನ್ನು ಅವರು ಎದುರಿಸಲೇಬೇಕಲ್ಲವೇ?

ವಿಕಿಲೀಕ್ಸ್ ಇದೇ ವರ್ಷದಲ್ಲಿ ಅಫಘಾನ್‌ನ ಕುರಿತು ದಾಖಲೆಯನ್ನು ಬಹಿರಂಗಪಡಿಸಿತ್ತು. ಅಲ್ಲಿ ಒಟ್ಟಾರೆ 20,000 ನಾಗರಿಕರನ್ನು ಅಮೇರಿಕ ಮತ್ತು ಅದರ ಮಿತ್ರ ಸೇನೆ ಕೊಂದು ಮುಗಿಸಿತ್ತು. ವ್ಯಾಪಕ ಕಗ್ಗೊಲೆ, ಮನೆಗಳ ಮೇಲೆ ವಿಮಾನದ ಮೇಲಿಂದ ಬಾಂಬು ಸುರಿಸಲಾಗಿತ್ತು. ಕೂಲಿ ಪಡೆಗಳನ್ನು ಬಳಸಿ ಅವರಿಗೆ ಏನು ಬೇಕಾದರೂ ಮಾಡುವ ಸ್ವಾತಂತ್ರ್ಯ ನೀಡಿರುವುದು ಮಾನವ ಹಕ್ಕುಗಳ ವಕ್ತಾರನೆಂಬ ಅಮೇರಿಕದ ನಾಟಕವನ್ನು ಬಹಿರಂಗಗೊಳಿಸಿತ್ತು. ಅಮೇರಿಕ ಮತ್ತು ಬ್ರಿಟನ್‌ಗಳು ಮಾನವ ರಕ್ತಕ್ಕೆ ಹಸಿದಿದೆ ಎಂಬುದನ್ನು ವಿಕಿಲೀಕ್ಸ್ ಜಗತ್ತಿಗೆ ತೋರಿಸಿಕೊಟ್ಟಿದೆ. ತನ್ನ ಸೈನಿಕರ ಮೇಲೆ ರಿವಾಲ್ವರ್ ತೋರಿಸಿದರೆಂದು ಪಾಕಿಸ್ತಾನದ ವಿಜ್ಞಾನಿ ಆಫಿಯಾ ಎಂಬ ಮಹಿಳೆಗೆ 80 ವರ್ಷಗಳ ಶಿಕ್ಷೆ ವಿಧಿಸುವ ಅಮೇರಿಕ, ಲಕ್ಷಾಂತರ ಮಂದಿಯನ್ನು ಕೊಂದುದಕ್ಕೆ ಯಾವ ಶಿಕ್ಷೆಗೆ ಈಡಾಗಬೇಕು?

ಇರಾಕ್ ಸಂದರ್ಶನದ ವೇಳೆ ಝೈದಿ ಎಂಬ ಪತ್ರಕರ್ತ ಬುಶ್‌ರಿಗೆ ಶೂ ಎಸೆದಾಗ ಗುರ್‌ಗುಟ್ಟಿದ ಇರಾಕಿನ ಆಡಳಿತಗಾರರು ತಮ್ಮ ಲಕ್ಷಾಂತರ ನಾಗರಿಕರನ್ನು ಕಗ್ಗೊಲೆ ನಡೆಸಿದರೂ ಸಹಿಸಿಕೊಳ್ಳುವುದಕ್ಕಷ್ಟೇ ಸಾಧ್ಯವಾಗಿದೆ. ಇರಾಕ್‌ಗೆ ಸ್ವಾತಂತ್ರ್ಯ ಕೊಟ್ಟಿದ್ದೇವೆಂದು ಅಲ್ಲಿ ಅಮೇರಿಕ ಕೈಗೊಂಬೆ ಸರಕಾರ ಸ್ಥಾಪಿಸಿ ಸದ್ದಾಮ್‌ರನ್ನು, ಕೆಮಿಕಲ್ ಅಲಿಯನ್ನು ಇತ್ಯಾದಿ ಇರಾಕಿನ ಹಿಂದಿನ ಸರಕಾರದ ವರಿಷ್ಠರನ್ನು ಗಲ್ಲಿಗೇರಿ ಸಿತ್ತು. ಇಂದಿನ ಪರಿಸ್ಥಿತಿಯನ್ನು ಅಲ್ಲಿನ ಜನ ರೋಷಭರಿತವಾಗಿ ಸ್ವೀಕರಿಸಿದರೆ, ಅಫಘಾನಿಸ್ತಾನದ ರಷ್ಯನ್ ಕೈಗೊಂಬೆ ಸರಕಾರದ ಅಧ್ಯಕ್ಷ ನಜೀಬುಲ್ಲಾ ರನ್ನು ಜನತೆ ಸಾರ್ವಜನಿಕವಾಗಿ ಗಲ್ಲಿಗೇರಿಸಿದ ಸ್ಥಿತಿ ಇವರಿಗೂ ಒಂದಲ್ಲ ಒಂದು ದಿನ ಬರಬಹುದು ಎಂದೇ ಅಂದಾಜಿಸಬೇಕಾಗುತ್ತದೆ. ಬುಶ್ ಕೈಗೆ ಸಿಗದಿದ್ದರೆ ಬುಶ್‌ರ ಕೂಲಿಯಾಳು ನೂರ್ ಮಾಲಿಕ್ ಮತ್ತು ಸಂಪುಟ ಸಚಿವರ ಮೇಲೆ ತಮ್ಮ ದ್ವೇಷ ಸಾಧಿಸುವ ಅಪಾಯವಿದೆ.

ಸದ್ದಾಮ್‌ಗೆ ಆದ ಗತಿ ಈ ಆಡಳಿತಗಾರರಿಗೆ ಆಗದಿರಬೇಕಾದರೆ ಬುಶ್ ಮತ್ತು ಅವರಿಂದ ಪ್ರಾಯೋಜಿಸಲ್ಪಟ್ಟ ಸೇನೆಯ ಯುದ್ಧಾಪರಾಧವನ್ನು ಅಂತಾರಾಷ್ಟ್ರೀಯ ಕ್ರಿಮಿನಲ್ ಕೋರ್ಟು ತನಿಖೆ ನಡೆಸಬೇಕು. ಯಾಕೆಂದರೆ ಇರಾಕ್ ಆಕ್ರಮಣಕ್ಕೆ ಬುಶ್ ಹೇಳಿರುವ ಸಬೂಬುಗಳೆಲ್ಲ ಸುಳ್ಳೆಂದು ಸಾಬೀತಾಗಿದೆ. ಸಾಮೂಹಿಕ ನಾಶದ ಅಸ್ತ್ರಗಳಾಗಲಿ, ತನಗೆ ದೇವಪ್ರೇರಣೆ ಸಿಕ್ಕಿದೆ ಎಂಬ ಬುಶ್‌ರ ವಾದವಾಗಲಿ, ನಾಗರಿಕರಿಗೆ ಸ್ವಾತಂತ್ರ್ಯ ಕೊಡಿಸುತ್ತಿದ್ದೇವೆಂಬುದಾಗಲಿ, ಸ್ವತಂತ್ರ ಚುನಾವಣೆಗೆ ಅವಕಾಶ ಕೊಡುತ್ತಿದ್ದೇವೆಂಬ ಕುರುಡು ನೀತಿಯಾಗಲಿ ಎಲ್ಲವೂ ಈಗಾಗಲೇ ಬಿದ್ದುಹೋಗಿವೆ. ಇದೀಗ ವಿಕಿಲೀಕ್ಸ್ ಅಲ್ಲಿ ಅಮೇರಿಕ ನಡೆಸಿರುವ ಮಾರಣ ಹೋಮವನ್ನು ಕೂಡಾ ಬಹಿರಂಗಪಡಿಸಿದೆ. ಆದುದರಿಂದ ಇರಾಕ್ ಮತ್ತು ಅಫಘಾನಿಸ್ತಾನದ ನಾಗರಿಕ ಹತ್ಯೆಗಾಗಿ ಅಮೇರಿಕದ ಮಾಜಿ ಅಧ್ಯಕ್ಷರನ್ನು ಅಂತಾರಾಷ್ಟ್ರೀಯ ಕೋರ್ಟಿಗೆಳೆಯಲು ಜಾಗತಿಕ ರಾಷ್ಟ್ರಗಳು ಮುಂದಾಗಬೇಕು.

ಇಂದು ಅಂತಾರಾಷ್ಟ್ರೀಯ ಯುದ್ಧಾಪರಾಧ ಕೋರ್ಟಿನಲ್ಲಿ ಹಲವು ದೂರುಗಳಿವೆ. ಇರಾಕ್‌ನ ಮೇಲೆ ಆಕ್ರಮಣ ನಡೆಸಿದ್ದು (14ನೇ ಪುಟಕ್ಕೆ)

## ಟೋನಿ ಬ್ಲೇರ್ ನಾದಿನಿ ಇಸ್ಲಾಮ್‌ಗೆ



ಬ್ರಿಟನ್ನಿನ ಮಾಜಿ ಪ್ರಧಾನಿ ಟೋನಿ ಬ್ಲೇರ್‌ರ ನಾದಿನಿ ಇಸ್ಲಾಮಿಗೆ ಮತಾಂತರಗೊಂಡಿದ್ದಾರೆ. ಮಾನವ ಹಕ್ಕುಗಳ ಕಾರ್ಯಕರ್ತೆಯೂ, ಪತ್ರಕರ್ತೆಯೂ ಆಗಿರುವ 43ರ ಹರೆಯದ ಲಾರೆನ್ ಬೂತ್ ಇರಾನ್ ಭೇಟಿಯ ನಂತರ ಈ ನಿರ್ಧಾರ ಕೈಗೊಂಡಿದ್ದಾರೆ.

“ಈಗ ನಾನು ಮನೆಯಿಂದ ಹೊರಹೋಗುವಾಗ ಹಿಜಾಬ್ ಧರಿಸುತ್ತಿದ್ದೇನೆ. ದಿನದಲ್ಲಿ ಐದು ಹೊತ್ತಿನ ನಮಾಝ್ ನಿರ್ವಹಿಸುತ್ತಿದ್ದೇನೆ. ಸಾಧ್ಯವಾದಾಗ ಸಮೀಪದ ಮಸೀದಿಗೂ ಹೋಗುತ್ತಿದ್ದೇನೆ” ಎಂದು ಅವರು ನುಡಿದಿದ್ದಾರೆ.

“ನಾನು ಈಗ ಹಂದಿ ಮಾಂಸವನ್ನು ತಿನ್ನುವುದಿಲ್ಲ. ಎಲ್ಲಾ ದಿವಸವೂ ಕುರ್‌ಆನ್ ಪಾರಾಯಣ ಮಾಡುತ್ತೇನೆ. 45 ದಿವಸಗಳಿಂದ ಮದ್ಯಪಾನವನ್ನು ಸೇವಿಸುತ್ತಿಲ್ಲ. ಇದು ನನ್ನ 25 ವರ್ಷಗಳ ಬದುಕಿನಲ್ಲಿ ಸುದೀರ್ಘ ಕಾಲಾವಧಿಯಾಗಿದೆ. ಮೊದಲು ನಾನು ದಿನಕ್ಕೆ ಒಂದೋ ಎರಡೋ ಗ್ಲಾಸ್ ಮದ್ಯಪಾನ ಮಾಡುತ್ತಿದ್ದೆ.” ವಿಚಿತ್ರ ಎಂದರೆ ನಾನು ಇಸ್ಲಾಮ್ ಸ್ವೀಕಾರದ ನಿರ್ಧಾರ ಕೈಗೊಂಡಂದಿನಿಂದ ಮದ್ಯಪಾನ ಮುಟ್ಟಲು ಕೂಡ ಆಗಲಿಲ್ಲ” ಎಂದು ಅಭಿಮಾನದಿಂದ ಹೇಳುತ್ತಾರೆ.

ಇರಾನಿಗೆ ಹೋಗುವುದಕ್ಕಿಂತ ಮೊದಲು ಇಸ್ಲಾಮಿನ ಕುರಿತು ಬೂತ್ ಸಹಾನುಭೂತಿಯುಳ್ಳವರಾಗಿದ್ದರು. ಅವರು ತಮ್ಮ ಮಹತ್ವದ ಕ್ಷಣಗಳನ್ನು ಫೆಲೆಸ್ತೀನಿನಲ್ಲಿ ಕಳೆದಿದ್ದಾರೆ. ಇರಾನ್ ಮೂಲದ ಇಂಗ್ಲೀಷ್ ಟಿ.ವಿ. ಚಾನೆಲ್ ‘ಪ್ರೆಸ್ ಟಿ.ವಿ.’ಗಾಗಿ ಕೆಲಸ ಮಾಡುತ್ತಿರುವ ಲಾರೆನ್ ಬೂತ್, ಇರಾಕ್ ಯುದ್ಧದ ವಿರುದ್ಧ ಕಟುವಾದ ಧೋರಣೆಯುಳ್ಳವರು.

2008 ಆಗಸ್ಟ್‌ನಲ್ಲಿ ಅವರು ಸೈಪ್ರಸ್‌ನಿಂದ ಗಾಝಾಕ್ಕೆ ಇತರ 46 ಮಂದಿಯೊಂದಿಗೆ ನೌಕೆಯಲ್ಲಿ ಯಾತ್ರೆ ಕೈಗೊಂಡರು. ಈ ಯಾತ್ರೆಯ ಉದ್ದೇಶ ಇಸ್ರೇಲಿನ ಕೃತ್ಯಗಳನ್ನು ಬೆಳಕಿಗೆ ತರುವುದಾಗಿತ್ತು. ತದನಂತರ ಇಸ್ರೇಲ್ ಮತ್ತು ಈಜಿಪ್ಟ್ ಪ್ರವೇಶಿಸದಂತೆ ಅವರ ಮೇಲೆ ನಿರ್ಬಂಧ ಹೇರಲಾಯಿತು.

2006ರಲ್ಲಿ ಅವರು ಟಿ.ವಿ.ಯ ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದರು. ಅದರಿಂದ ಬಂದ ಹಣವನ್ನು ಫೆಲೆಸ್ತೀನಿ ನಿರಾಶ್ರಿತರಿಗೆ ನೀಡಿದ್ದರು. ತನ್ನ ಈ ಮತಾಂತರವು ಇಸ್ಲಾಮಿನ ಕುರಿತಾದ ಬ್ಲೇರ್‌ರ ಭಾವನೆಯನ್ನು ಬದಲಾಯಿಸಲಿ ಎಂದು ಅವರು ಆಶಿಸುತ್ತಾರೆ.

ಕಳೆದ ತಿಂಗಳು ಇರಾನ್ ಸಂದರ್ಶಿಸಿದ್ದಾಗ ಇಸ್ರೇಲಿನ ವಶದಲ್ಲಿರುವ ಫೆಲೆಸ್ತೀನ್‌ನ ಅಲ್ ಕುದ್ಸ್‌ನ ಕಡೆಗೆ ಗಮನಹರಿಸಲು ಟೋನಿ ಬ್ಲೇರ್‌ರಿಗೆ ಒಂದು ಬಹಿರಂಗ ಪತ್ರ ಬರೆದಿದ್ದರು.

“ನನ್ನ ಸುತ್ತಮುತ್ತ ಇರುವ ಪುರುಷರು, ಮಹಿಳೆಯರು ಹಾಗೂ ಮಕ್ಕಳು ದಿನವಿಡೀ ಆಹಾರ ಮತ್ತು ನೀರಿಲ್ಲದೆ ಬದುಕುತ್ತಿದ್ದಾರೆ. (ಇದನ್ನು ರಮದಾನ್ ಎಂದು ಕರೆಯಲಾಗುತ್ತದೆ. ಟೋನಿ, ಇದು ಉಪವಾಸವಾಗಿದೆ) ಎಷ್ಟೇ ತಾಪಮಾನವಿದ್ದರೂ ದೈನಂದಿನ ಜೀವನದಂತೆ ಅವರು ಹಸಿವನ್ನೂ, ಬಾಯಾರಿಕೆಯನ್ನೂ ಸಹಿಸುತ್ತಾ ಅದನ್ನು ಆಚರಿಸುತ್ತಿದ್ದಾರೆ. ಇದರಿಂದಾಗಿ ಮುಸ್ಲಿಮ್ ಜಗತ್ತಿನಲ್ಲಿರುವ ಭ್ರಷ್ಟತೆಯನ್ನು ಎದುರಿಸಲು ಅವರಿಗೆ ಸಾಧ್ಯವಾಗುತ್ತದೆ. ಅವರು ಫೆಲೆಸ್ತೀನ್ ಜನತೆಯೊಂದಿಗೆ ಐಕ್ಯತೆ ಹೊಂದುವುದರಲ್ಲಿ ಅಭಿಮಾನಗೊಳ್ಳುತ್ತಾರೆ. ಸಾವಿರಾರು ನಾಗರಿಕರನ್ನು ಕೊಂದ ಅಮೇರಿಕದೊಂದಿಗೆ ಐಕ್ಯತೆ ಹೊಂದುವಂತೆ ನೀವು ಮುಸಲ್ಮಾನರೊಂದಿಗೆ ಕೆಟ್ಟ, ಅಪಾಯಕಾರಿಯಾದ, ಹುಚ್ಚುತನದಿಂದ ಕೂಡಿದ ಅಭಿಪ್ರಾಯವನ್ನು ಹೊಂದಿದ್ದೀರಿ. ನೀವು ಈ ಸೋಂಕಿಗೆ ಒಳಗಾಗಿದ್ದೀರಿ.

ನಮಗೆ ಇಸ್ಲಾಮಿನ ವಿರುದ್ಧ ಧರ್ಮ ವಿರೋಧಿ ಹೋರಾಟದ ಅಗತ್ಯವಿದೆ ಎಂದು ನೀವು ನಿಮ್ಮ ಆತ್ಮಚರಿತ್ರೆಯ ಕೊನೆಯ ಭಾಗದಲ್ಲಿ ಹೇಳಿದ್ದೀರಿ ಎಂದು ಬೂತ್ ತಮ್ಮ ಪತ್ರದಲ್ಲಿ ತಿಳಿಸಿದ್ದರು.

ಬೂತ್ 2004ರಲ್ಲಿ ತಮ್ಮ ಪತಿ ಕ್ರೇಂಗ್ ಡಾರ್ಬಿ ಮತ್ತು ಮಕ್ಕಳಾದ ಅಲೆಗ್ಸಾಂಡರ್ ಹಾಗೂ ಹೊಲ್ಲಿಯರೊಂದಿಗೆ ಫ್ರಾನ್ಸಿಗೆ ಪ್ರಯಾಣ ಬೆಳೆಸಿದ್ದರು.

2009ರಲ್ಲಿ ಅವರ ಪತಿ ಪಾನಮತ್ತನಾಗಿ ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಿದ್ದಾಗ ಅಪಘಾತಕ್ಕೀಡಾದರು. ಅವರ ಮೆದುಳು, ಕುತ್ತಿಗೆ ಮತ್ತು ಪಕ್ಕೆಲುಬಿಗೆ ತೀವ್ರತರದ ಗಾಯವಾಗಿ ಎರಡು ವಾರ ಕೋಮಾ ಸ್ಥಿತಿಯಲ್ಲಿದ್ದರು. 42ರ ಹರೆಯದ ಇವರಿಗೆ ಹೇಗೆ ನಡೆಯುವುದು ಮತ್ತು ಮಾತನಾಡುವುದು ಎಂದು ಪುನಃ ಕಲಿಯಬೇಕಾಗಿತ್ತು. ಅವರು ಹಿಂದಿನದ್ದೆಲ್ಲವನ್ನೂ ಮರೆತಿದ್ದಾರೆ ಮತ್ತು ದೃಷ್ಟಿದೋಷದಿಂದಾಗಿ ಯಾವುದೇ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ.

ನಂತರ ಈ ಜೋಡಿಯು ಬ್ರಿಟನಿಗೆ ಮರಳಿತು. ಬೂತ್ ನೌಕರಿ ಮಾಡಿ ಪತಿಯ ಚಿಕಿತ್ಸೆಗೆ ನೆರವಾದರು.

ತನ್ನ ಮತಾಂತರದ ತೀರ್ಮಾನವು ವಿವಾದವೊಂದನ್ನು ಸೃಷ್ಟಿಸಿರುವುದನ್ನು ಒಪ್ಪಿಕೊಂಡಿರುವ ಲಾರೆನ್ ಬೂತ್, ಪ್ರತಿಯೊಂದು ಕ್ರಿಯೆಗೂ ಸಹಜವಾಗಿಯೇ ಪ್ರತಿಕ್ರಿಯೆಗಳು ಬರುತ್ತವೆ ಎಂದು ಹೇಳಿದ್ದಾರೆ.

# ಪೇಜಾವರ ಶ್ರೀಗಳಿಗೆ ಈ ಸಹನೆ ಇದೆಯಾ?

ಅರಫಾ ಮಂಚಿ

ವಿಶ್ವ ಹಿಂದೂ ಪರಿಷತ್‌ನ ಪ್ರಮುಖ ಪೇಜಾವರ ಶ್ರೀಗಳು ಅಯೋಧ್ಯೆ ವಿಚಾರದಲ್ಲಿ ತ್ಯಾಗಮನೋಭಾವ ತೋರಿ ಎಂದು ಮುಸ್ಲಿಮರಿಗೆ ಆಶೀರ್ವಚನ ನೀಡಿದ್ದಾರೆ. ಅಲ್ಲಿ ದೇವಾಲಯ ಇತ್ತು ಎನ್ನುವುದನ್ನು ಕೋರ್ಟು ಒಪ್ಪಿಕೊಂಡಿದೆ ಯಾದ್ದರಿಂದ ಮುಸ್ಲಿಮರಿಗೆ ಕೋರ್ಟ್ ಕೊಟ್ಟಿರುವ ಮೂರನೇ ಒಂದು ಭಾಗದಲ್ಲಿ ಬಾಬರಿ ಮಸೀದಿ ಕಟ್ಟಿದರೆ ಸಾಮರಸ್ಯಕ್ಕೆ ಧಕ್ಕೆ ಆಗಬಹುದಂತೆ. ದೇಶದ ಸೌಹಾರ್ದಕ್ಕಿಂತ ಬೇರೆ ಯಾವುದೂ ಮೇಲಲ್ಲ ಎಂಬ ಅವರ ಉಪದೇಶ ಖಂಡಿತ ವಾಗಿಯೂ ಮೆಚ್ಚಬೇಕಾದದ್ದೇ. ವಿಶ್ವ ಹಿಂದೂ ಪರಿಷತ್‌ಗೂ ಈ ಉಪದೇಶವನ್ನು ಅವರಿಗೆ ನೀಡ ಬಹುದಿತ್ತಲ್ಲ. ಪೇಜಾವರ ಶ್ರೀಗಳು ಹಾಗೆ ಮಾಡಲಾರರೆಂದು ನಮಗೆ ಗೊತ್ತಿದೆ. ಆದುದರಿಂದ ಅವರ ಕಳಕಳಿಯನ್ನು ಪ್ರಾಮಾಣಿಕ ಎನ್ನುವುದಕ್ಕಿಂತ ತಣ್ಣಗಿನ ಬೆದರಿಕೆಯೆಂದು ಭಾವಿಸಬೇಕಾಗುತ್ತದೆ.

ತ್ಯಾಗ ಎಂದರೇನು ಶ್ರೀಗಳೇ? ವಿಹಿಂಪದ ಹಠಮಾರಿತನಕ್ಕೆ ತಲೆ ಬಾಗುವುದೆಂದೇ? ಅದು ಬಾಬರಿ ಮಸೀದಿಯ ಒಂದು ತುಂಡೂ ಭೂಮಿಯನ್ನು ಮುಸ್ಲಿಮರಿಗೆ ನೀಡುವುದಿಲ್ಲವೆಂದು ಹೇಳಿ ಸುಪ್ರೀಮ್‌ಕೋರ್ಟಿಗೆ ಪ್ರವೇಶಿಸಿದೆ. ನೀವು ಹಠ ತೊಟ್ಟು ಜಂಗಿಕುಸ್ತಿಗಿಳಿಯಬಹುದು. ನಾವು ಹೆದರಿ ನಮ್ಮ ಭೂಮಿಯನ್ನು ನಿಮಗೆ ಒಪ್ಪಿಸಿ ಪಲಾಯನ ಮಾಡುವುದು ತ್ಯಾಗವೇನು? ಶ್ರೀಗಳೇ ತ್ಯಾಗ ಎಂದರೆ ಯಾರಾದರೂ ತನ್ನ ಪಾಲಿಗೆ ಸಿಕ್ಕಿದ, ತನಗೆ ಅವಶ್ಯಕವಿರುವ ವಸ್ತುವನ್ನು ಇದೋ ನನಗಿಂತ ನಿನಗೆ ಹೆಚ್ಚು ಅವಶ್ಯವಾಗಿದೆ ಎಂದು ಅವನಾಗಿಯೇ ಮುಂದೆ ಬಂದು



ಕೊಡುವುದು. ಇಲ್ಲಿ ಅಂತಹದ್ದೇನು ಸಂಭವಿಸಿಲ್ಲ ವಲ್ಲ. ವಿಶ್ವ ಹಿಂದೂ ಪರಿಷತ್‌ನಂತೆ ಬಾಬರಿ ಮಸೀದಿಯ ಭೂಮಿಯ ಹಕ್ಕನ್ನು ಕೇಳಿ ಮುಸ್ಲಿಮರು ಸುಪ್ರೀಮ್ ಕೋರ್ಟಿಗೆ ಹೋಗಿದ್ದಾರೆ. ಅಲ್ಲಿ ನೆಟ್ಟಗೆ ನಿಂತಿದ್ದ ಬಾಬರಿ ಮಸೀದಿಯನ್ನು ಕೆಡವಿ ಹಾಕಿ ಭಾರತದಲ್ಲಿ ಕ್ಷೋಭೆ ಎಬ್ಬಿಸಿ ಸಾಮರಸ್ಯ ಕೆಡಿಸಿದ್ದು ಯಾರೆಂದು ಇಂದು ವಿವರಿಸಬೇಕಾಗಿಲ್ಲ. ಮಸೀದಿ ಕಟ್ಟಿದರೆ ಸೌಹಾರ್ದ ಕೆಡುವುದಾದರೆ ಯಾರ ಕಡೆಯಿಂದ ಕೆಡಬೇಕೆಂದು ಇಂದು ನಾವು ಯಾರಿಗೂ ವಿವರಿಸಬೇಕಾಗಿಲ್ಲ. ಈ ಹಿನ್ನಲೆಯನ್ನು ನೋಡಿ ಪೇಜಾವರ ಶ್ರೀಗಳು, ಕೋರ್ಟು ಕೊಟ್ಟಿರುವ ಭೂಮಿಯನ್ನು ಮುಸ್ಲಿಮ ರಿಂದ ಕೇಳುತ್ತಿದ್ದಾರೆ ಎನ್ನಬೇಕಾಗುತ್ತದೆ. ಆದರೆ ಪೇಜಾವರ ಶ್ರೀಗಳು ವಿಹಿಂಪದ ನಾಯಕರಾಗಿರುವುದರಿಂದ ಅದಕ್ಕೂ ಅವರಿಗೆ ಅರ್ಹತೆಯಿಲ್ಲ.

ವಿಶ್ವಹಿಂದೂ ಪರಿಷತ್‌ಗೆ ಹೆದರಿ ಪೇಜಾವರ ಶ್ರೀಗಳು ಹೇಳಿದಂತೆ ಮಾಡಲು ಅಲ್ಲಿ ಕೆಡವಲ್ಪಟ್ಟಿರುವುದು ಬಾಬರಿ ಮಸೀದಿ. ಶ್ರೀರಾಮ ದೇಗುಲವಲ್ಲ. ಈ ಮಾತನ್ನು ಬರೇ ಮುಸ್ಲಿಮರು ಆಡುವುದಲ್ಲ. ಮುಂದಿನ ಇತಿಹಾಸ ಹಾಗೆಂದೇ ಗುರುತಿಸುತ್ತದೆ ಎಂಬುದು ಸ್ಪಷ್ಟವಿಚಾರ. ಪುರಾತತ್ವ ಇಲಾಖೆಯ ಪ್ರಕಾರ ಅಲ್ಲಿ ದೇವಾಲಯವಿತ್ತು. ವಿಎಚ್‌ಪಿ ಪ್ರಕಾರ ಅಲ್ಲಿ ರಾಮಂದಿರ ನಿರ್ಮಾಣವಾಗಬೇಕು ಎಂಬ ಎರಡು ವಾದವನ್ನು ಗಿಳಿಪಾಠದಂತೆ ಮುಸ್ಲಿಮರ ಮುಂದೆ ಹೇಳಿ ಯಾವ ಪ್ರಯೋಜನವೂ ಇಲ್ಲ.

ಅಲ್ಲ, ವಿಹಿಂಪದ ಕಬಳಿಕೆಯವಾದವನ್ನು ಮುಸ್ಲಿಮರು ಯಾಕೆ ಒಪ್ಪಿಕೊಳ್ಳಬೇಕಾಗಿದೆ? ಆರೆಸ್ಸೆಸ್ ಸದಸ್ಯರಾದ ಡಾ| ಎಸ್.ಪಿ.ಗುಪ್ತ ಮತ್ತು ಬಿ.ಬಿ. ಲಾಲ್ ಎಂಬವರು ಅರ್ಕಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾದ ನಿರ್ದೇಶಕರಾಗಿ ಅಲ್ಲಿ ಉತ್ಖನನ ನಡೆಸಿದರೆ ಸಿಗುವ ಪುರಾವೆಗಳು ಮಸೀದಿಯದ್ದಾಗಿರುವುದಿಲ್ಲ ಎಂದು ಮುಸ್ಲಿಮರಿಗೆ ಗೊತ್ತಿದೆ. ಹಾಗಾಗಿ ಇವರ ಇಲಾಖೆ ಭೂಮಿ ಅಗೆದು, ಅದನ್ನು ಕೋರ್ಟು ಸಾಕ್ಷ್ಯವನ್ನಾಗಿ ಪರಿಗಣಿಸಿದರೆ ಕೋರ್ಟು ತಳೆಯುವ ನಿರ್ಧಾರವೇನಾಗಿರ ಬಹುದು? ಎಲ್ಲೆಲ್ಲಿಯ ಪ್ರಾಚೀನ ಮರದ ತುಂಡುಗಳು, ಕಲ್ಲು, ವಿಗ್ರಹಗಳನ್ನು ತಂದು ವಿವಾದಾಸ್ಪದ ಭೂಮಿಯೊಳಗೆ ಮುಚ್ಚುವುದು. ಆನಂತರ ಆ ಭೂಮಿಯನ್ನು ಕೃಷಿಗಾಗಿ ಟ್ರಾಕ್ಟರ್‌ನಲ್ಲಿ ಉಳುವುದು, ಆಗ ನೋಡಿ ದೇವಸ್ಥಾನದ ಅವಶೇಷಗಳು ಹೊರಬರುತ್ತವೆ... ಹೀಗೆ ಕೃತಕವಾಗಿ ಅವಶೇಷಗಳನ್ನು ಸೃಷ್ಟಿಸಿ ದಾಖಲೆಗಳನ್ನು ಹುಟ್ಟು ಹಾಕುವುದಕ್ಕೆ 'ಟ್ರಾಕ್ಟರ್ ನಿರ್ಮಿತ ಆರ್ಕಿಯಾಲಜಿ' ಎನ್ನುವುದು.

ಪೇಜಾವರ ಶ್ರೀಗಳೇ, ಅಯೋಧ್ಯೆಯಲ್ಲಿ ಪ್ರಪ್ರಥಮವಾಗಿ ಸರ್ವೇ ಮಾಡಿದ್ದು ಫ್ರಾನ್ಸಿಸ್ ಹ್ಯಾಮಿಲ್ಟನ್ ಬುಕಾನನ್. 1813ರಲ್ಲಿ ಅಂದು ಅವರೊಂದಿಗೆ ಮಂದಿರವನ್ನು ಕೆಡವಿ ಮಸೀದಿಯನ್ನು ಕಟ್ಟಲಾಗಿದೆ ಎಂದು ಯಾರೂ ಹೇಳಿಲ್ಲ. 1913ರ ನಂತರ ಅಯೋಧ್ಯೆಯ ಪಾಂಡಾ ವಿಭಾಗವು ಮಂದಿರವನ್ನು ಕೆಡವಿ ಮಸೀದಿ ಕಟ್ಟಲಾಗಿದೆ ಎಂದು ಪ್ರಚಾರ ಪ್ರಾರಂಭಿಸಿತ್ತು ಎಂದು ತಿಳಿದುಬರು ತ್ತದೆ. ವಿಶ್ವ ಹಿಂದೂ ಪರಿಷತ್‌ನ ರಾಮ ಜನ್ಮ ಭೂಮಿ ವಿವಾದಕ್ಕೆ ಈ ಪಾಂಡಾಗಳ ಪಾತ್ರ ನಿರ್ಣಾಯಕ ವಾಗಿತ್ತು. ಬುಕಾನನ್ ಕಂಡುಕೊಂಡ ಸತ್ಯದಂತೆ ಬಾಬರಿ ಮಸೀದಿಯನ್ನು ಬಾಬರ್ ಕಟ್ಟಿದ್ದಲ್ಲ. ಅದಕ್ಕಿಂತಲೂ ಮುಂಚೆ ಜಾನ್‌ಪುರ್‌ನ ಶರ್ಕಿ ಅರಸ ನಿರ್ಮಿಸಿದ್ದರು. ನಂತರ ಅದಕ್ಕೆ ಬಾಬರಿ ಮಸೀದಿ ಯೆಂಬ ಹೆಸರು ಬಂದಿತ್ತು. ಹೀಗೆಲ್ಲ ಇತಿಹಾಸ ವಿರುತ್ತಾ ಆರೆಸೆಸ್ ಪ್ರೇರಿತ ಪುರಾತತ್ವ ಇಲಾಖೆ ಕಂಡು ಹಿಡಿದ ದಾಖಲೆಗಳನ್ನು ಮುಸ್ಲಿಮರು ಒಪ್ಪಿಕೊಳ್ಳುವುದೆಂದರೆ ಆತ್ಮಹತ್ಯೆಗೆ ಸಮಾನವಾಗು ತ್ತದೆ. ಬಾಬರಿ ಮಸೀದಿಯನ್ನು ಕಬಳಿಸುವ ಹುನ್ನಾರವೊಂದೆಡೆ, ಕೋರ್ಟು ನೀಡಿದ ಭೂಮಿ ಯನ್ನು ತ್ಯಾಗ ಮಾಡಿ ಎಂಬ ಒಂದು ದಿನ ತಾನು ತಲುಪುವ (12ನೇ ಪುಟಕ್ಕೆ)

# ವಾರದ ಖುತ್ಬಾ

ಮುಹಮ್ಮದ್ ಕುಂಞಿ

## ತೊಕ್ಕೊಟ್ಟು ಮಸ್ಜಿದುಲ್ ಹುದಾದಲ್ಲಿ 2010 ಅಕ್ಟೋಬರ್ 22ರಂದು ನೀಡಿದ ಜುಮಾ ಖುತ್ಬಾದ ಸಾರಾಂಶ

ಆತ್ಮೀಯ ಸಹೋದರ, ಸಹೋದರಿಯರೇ... ಮಸೀದಿಗಳು ಅಲ್ಲಾಹನ ಭವನಗಳಾಗಿವೆ. ಮಸೀದಿಗಳು ಇಸ್ಲಾಮಿನ ನಾಗರಿಕತೆಯನ್ನು, ಇಸ್ಲಾಮೀ ಸಂಸ್ಕೃತಿಯನ್ನು, ಇಸ್ಲಾಮೀ ಸಂದೇಶವನ್ನು ಸಮಾಜದಲ್ಲಿ ಪ್ರತಿನಿಧಿಸುವಂತಹ ಕೇಂದ್ರಗಳಾಗಿವೆ. ಇಸ್ಲಾಮೀ ಸಾಮಾಜಿಕ ವ್ಯವಸ್ಥೆ ಯಲ್ಲಿ ಅಲ್ಲಾಹನ ಮಸೀದಿಗಳಿಗೆ ಬಹಳ ದೊಡ್ಡ ಪ್ರಾಮುಖ್ಯತೆ ಇದೆ. ಪ್ರವಾದಿವರ್ಯರು(ಸ) ಬದುಕಿದ್ದ ಕಾಲದಲ್ಲಿ, ಅವರ ವಿದಾಯದ ನಂತರ ಖಲೀಫರು ಆ ಹೊಣೆಗಾರಿಕೆಯನ್ನು ನಿರ್ವಹಿಸಿ ಸಮುದಾಯಕ್ಕೆ ನಾಯಕತ್ವ ಕೊಟ್ಟಿದ್ದಂತಹ ಕಾಲದಲ್ಲಿ, ಆ ನಂತರ ಖಿಲಾಫತ್‌ನ ವ್ಯವಸ್ಥೆಯಲ್ಲಿ, ಬಳಿಕ ಕರ್ಮಶಾಸ್ತ್ರದ ಇಮಾಮರುಗಳು, ವಿದ್ವಾಂಸರು ಇವರೆಲ್ಲ ಈ ಸಮುದಾಯಕ್ಕೆ ನಾಯಕತ್ವವನ್ನು ಕೊಟ್ಟು, ಸಮುದಾಯ ವನ್ನು ಮುನ್ನಡೆಸಿದ್ದಂತಹ ಕಾಲದಲ್ಲಿ ಮಸೀದಿಗಳು ಬಹಳ ದೊಡ್ಡ ಹೊಣೆಗಾರಿಕೆಯನ್ನು ನಿರ್ವಹಿಸಿದ್ದುವು ಎಂದು ಇಸ್ಲಾಮೀ ಇತಿಹಾಸದ ಪುಟಗಳಿಂದ ನಮಗೆ ತಿಳಿಯಬಹುದಾಗಿದೆ.

ಅಂದು ಮಸೀದಿಗಳು ಮುಸ್ಲಿಮ್ ಸಮುದಾಯದ ಕೇಂದ್ರಗಳಾಗಿದ್ದುವು. ಪ್ರವಾದಿ ಮುಹಮ್ಮದ್‌ರು(ಸ) ಮದೀನದಲ್ಲಿ ಸ್ಥಾಪಿಸಿದ ಮಸ್ಜಿದುನ್ನಬವಿಯನ್ನು ಅವರು ಹೇಗೆ ಬೆಳೆಸಿದ್ದರು ಎಂಬುದು ಸಮುದಾಯಕ್ಕೆ ಅತ್ಯಂತ ದೊಡ್ಡ ಮಾದರಿಯಾಗಿದೆ. ಆದರೆ ಮುಸ್ಲಿಮ್ ಸಮುದಾಯವು ಒಂದು ಆದರ್ಶ ಸಮುದಾಯ ಎಂಬ ಪದವಿಯಿಂದ ಕೆಳಗಿಳಿದಾಗ ಮತ್ತು ಕೇವಲ ಒಂದು ಜಾತಿ ಮುಸ್ಲಿಮ್ ಆಗಿ ಸಮುದಾ ಯವು ಅಧಃಪತನ ಹೊಂದಿದಾಗ, ಸಮಾಜದಲ್ಲಿ ಮಸೀದಿಗಳಿಗೆ ನಿರ್ವಹಿಸ ಲಿಕ್ಕೆ ಯಾವ ಕೆಲಸವೂ ಇಲ್ಲವಾಯಿತು.

ಭೂಮಿಯಲ್ಲಿ ಅಲ್ಲಾಹನಿಗೆ ಅತಿ ಹೆಚ್ಚು ಪ್ರೀತಿ ಇರುವುದು ಮಸೀದಿಗಳಲ್ಲಾಗಿದೆ ಎಂದು ತರ್ಕಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ಪ್ರವಾದಿವರ್ಯರು(ಸ) ತಿಳಿಸಿದ್ದಾರೆ. ಹಾಗಾಗಿ ಮಸೀದಿಗಳ ಮೂಲಭೂತ ಕಾರ್ಯಭಾರದ ಬಗ್ಗೆ ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಒಂದನೆಯ ದಾಗಿ ಮಸೀದಿಗಳು ಆರಾಧನೆಯ ಕೇಂದ್ರಗಳಾಗಿವೆ. ಈ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. "ಮಸೀದಿಗಳು ಅಲ್ಲಾಹನ ಸ್ಮರಣೆಗೆ, ನಮಾಝ್‌ಗೆ, ಪವಿತ್ರ ಕುರ್‌ಆನಿನ ಪಾರಾಯಣಕ್ಕೆ ನಿಶ್ಚಯಿಸಲ್ಪಟ್ಟ ಸ್ಥಳಗಳಾಗಿವೆ" ಎಂದು ಪ್ರವಾದಿವರ್ಯರು(ಸ) ಹೇಳಿದ್ದಾರೆ.

ಎರಡನೆಯದಾಗಿ, ಮಸೀದಿಗಳು ಸಮುದಾಯದ ಅಧ್ಯಯನ ಕೇಂದ್ರಗಳಾಗಿವೆ. ಸಮುದಾಯದ ಶೈಕ್ಷಣಿಕ ಕೇಂದ್ರ, ಸಮುದಾಯದ ಸಾಕ್ಷರತೆಯ ಕೇಂದ್ರ. ನಮ್ಮ ಪೂರ್ವಿಕರ ಕಾಲದಲ್ಲಿ ಮುಸ್ಲಿಮ್ ಸಮುದಾಯಕ್ಕೆ ಶಿಕ್ಷಣ ಲಭಿಸಿದ್ದು ಮಸೀದಿಯಿಂದ. ಇಸ್ಲಾಮಿನ ಅತ್ಯಂತ ಪ್ರಮುಖವಾದ ವಿಶ್ವವಿದ್ಯಾಲಯಗಳಿವೆಯಲ್ಲ, ಅವು ಕಟ್ಟಲ್ಪಟ್ಟದ್ದು ಮಸೀದಿಯನ್ನು ವಿಸ್ತಾರಗೊಳಿಸುವ ಮೂಲಕ. ಪ್ರವಾದಿವರ್ಯರು(ಸ) ತಮಗೆ ಬರುತ್ತಿದ್ದ ವಹೀಯನ್ನು (ದಿವ್ಯ ಸಂದೇಶವನ್ನು) ಸಹಾಬಿಗಳಿಗೆ ಕಲಿಸಿದ್ದು, ಅದು ದಾಖಲಿಸಲ್ಪಟ್ಟಿದ್ದು ಮಸೀದಿಗಳಲ್ಲಿ.

ಇಸ್ಲಾಮೀ ಆಡಳಿತ ಇದ್ದ ಕಾಲದಲ್ಲಿ ಮುಸ್ಲಿಮ್ ದೇಶಗಳನ್ನು ಸಂದರ್ಶಿಸಿದ ಇತಿಹಾಸಕಾರರು ದಾಖಲಿಸಿದಂತಹ ವಿಚಾರಗಳಿವೆ. ನಾಗರಿಕತೆಗಳ ಕತೆ (History of Civilizations) ಎಂಬ ಒಂದು ಗ್ರಂಥವಿದೆ. ಅದರಲ್ಲಿ ಒಬ್ಬ ಇತಿಹಾಸಗಾರ ಹೀಗೆ ಬರೆದಿದ್ದ: ಇಸ್ಲಾಮೀ ಆಡಳಿತ ಇದ್ದಂತಹ ಆ ಕಾಲದಲ್ಲಿ ಮುಸ್ಲಿಮ್ ಸಮುದಾ ಯದ ಯಾವುದೇ ಕೇಂದ್ರ ಮಸೀದಿಯಲ್ಲಿ ಹಗಲಿಡೀ ಯಾವುದಾದರೂ ಚರ್ಚೆ ನಡೆಯುತ್ತಾ ಇತ್ತು.

ಅಷ್ಟೇ ಅಲ್ಲ, ಮಸೀದಿಯಲ್ಲಿ ಅಂದು ಚರ್ಚಿಸ ಲ್ಪಡುತ್ತಿದ್ದುದು ಕೇವಲ ಧಾರ್ಮಿಕ ವಿಚಾರಗಳಾಗಿದ್ದುದಲ್ಲ. ಬದಲಾಗಿ ಎಲ್ಲ ವಿಚಾರಗಳ ಬಗ್ಗೆ ಅಲ್ಲಿ ಚರ್ಚೆ ನಡೆಯುತ್ತಿತ್ತು, ಸಂವಾದ, ಪ್ರಶ್ನೋತ್ತರಗಳು ನಡೆಯುತ್ತಿದ್ದುವು. ಅಂದು ಮಸೀದಿಗಳಲ್ಲಿ ದೊಡ್ಡ ದೊಡ್ಡ ವಾಚನಾಲಯ ಗಳಿದ್ದುವು ಎಂದು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಅಂದು ಮಸೀದಿಗಳು ಉನ್ನತ ಶಿಕ್ಷಣದ ಕೇಂದ್ರಗಳಾಗಿದ್ದುವು. ಎಲ್ಲ ವಿಚಾರಗಳನ್ನು ಅಂದು ಮಸೀದಿಗಳಲ್ಲಿ ಕಲಿಯಬಹುದಾಗಿತ್ತು. ಒಟ್ಟಿನಲ್ಲಿ ಮಸೀದಿಗಳು ಮುಸ್ಲಿಮ್ ಸಮಾಜದ ಅಧ್ಯಯನ ಕೇಂದ್ರಗಳಾಗಿದ್ದುವು.

ಮೂರನೆಯದಾಗಿ, ಮಸೀದಿಯು ಇಸ್ಲಾಮಿನ ಆಡಳಿತ ವ್ಯವಸ್ಥೆಯ



ಶಕ್ತಿ ಕೇಂದ್ರವಾಗಿತ್ತು. ಆಡಳಿತ ವ್ಯವಸ್ಥೆಯ ಸಮಾಲೋಚನೆಗಳು ಮಸೀದಿಗಳಲ್ಲಿ ನಡೆಯುತ್ತಿದ್ದುವು. ಸೈನಿಕರ ತರಬೇತಿ, ಸೈನ್ಯ ಸಿದ್ಧತೆ, ಮಾರ್ಗದರ್ಶನ, ಸೈನಿಕ ಅವಲೋಕನ ನಡೆಯುತ್ತಿದ್ದುದು ಮಸೀದಿಗಳಲ್ಲಾಗಿತ್ತು. ಮಸೀದಿಗಳಲ್ಲಿ ಅಂದು ರಿಮ್ಯಾಂಡ್ ಸೆಲ್‌ಗಳಿದ್ದುವು. ಪ್ರವಾದಿ ಮುಹಮ್ಮದ್‌ರ(ಸ) ಕಾಲದಲ್ಲಿ ಕೈದಿಗಳನ್ನು ಬಂಧಿಸಿಡುತ್ತಿದ್ದುದು ಮಸೀದಿಗಳಲ್ಲಾಗಿತ್ತು ಎಂಬುದನ್ನು ನಮಗೆ ಇಂದು ಊಹಿಸಲಿಕ್ಕೆ ಸಾಧ್ಯವೇ? ಅದೇ ರೀತಿ ಮಸೀದಿಗಳು ವಿದೇಶಿ ಸಚಿವಾಲಯಗಳಾಗಿದ್ದುವು. ಬೇರೆ ಬೇರೆ ದೇಶಗಳೊಂದಿಗೆ ಯಾವ ವಿಚಾರವಾಗಿ ಚರ್ಚೆ ನಡೆಸಬೇಕು, ವಿದೇಶಿ ರಾಯಭಾರಿಗಳೊಂದಿಗೆ ನಡೆಸಬೇಕಾದ ಮಾತುಕತೆಗಳ ಬಗ್ಗೆ, ವಿದೇಶಿ ಸಂಬಂಧಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು.

ಸಮುದಾಯಕ್ಕೆ ದೈವಿಕ ಮಾರ್ಗದರ್ಶನ ನೀಡುವ, ದೈಹಿಕ ವ್ಯಾಯಾಮವನ್ನು ಕಲಿಸಿಕೊಡುವ, ದೈಹಿಕ ಪರಿಶೀಲನೆ ನಡೆಸುವ ಒಂದು ಕೇಂದ್ರವಾಗಿತ್ತು ಮಸೀದಿ. ಅಷ್ಟು ಮಾತ್ರ ಅಲ್ಲ, ಪ್ರವಾದಿಯವರ ಕಾಲ ದಲ್ಲಿ, ಖಲೀಫರ ಕಾಲದಲ್ಲಿ ಆಡಳಿತ ವ್ಯವಸ್ಥೆ, ನೀತಿ-ನಿಯಮಗಳನ್ನು, ಸೂತ್ರಗಳನ್ನು ಘೋಷಣೆ ಮಾಡುತ್ತಿದ್ದುದು ಮಸೀದಿಯ ಮಿಂಬರ್ ಗಳಲ್ಲಾಗಿತ್ತು.

ಮಸೀದಿಯಲ್ಲಿ ಅಂದು ನ್ಯಾಯಾಲಯವಿತ್ತು. ಖಲೀಫರ ಕಾಲದಲ್ಲಿ ಮಸೀದಿಯೇ ನ್ಯಾಯಾಲಯವಾಗಿತ್ತು. ಅಲ್ಲಾಹನ ಪ್ರವಾದಿಯ ಎಷ್ಟೋ ತೀರ್ಮಾನಗಳು ಮಸೀದಿಯಲ್ಲಿ ಕುಳಿತುಕೊಂಡು ನೀಡಲ್ಪಟ್ಟಿದ್ದುವು. ಮಸೀದಿಯಲ್ಲಿ ಬಂಧಿಸಿಡಲ್ಪಟ್ಟಿದ್ದ ಸುಮಾಮರು ಬಳಿಕ ಬಿಡುಗಡೆಗೊಂಡಾದ, ಖರ್ಜೂರದ ತೋಟಕ್ಕೆ ಹೋಗಿ ಒಂದಿಷ್ಟು ಸಮಯ ಕಳೆದು ಸ್ನಾನ ಮಾಡಿ ಮರಳಿ ಅದೇ ಮಸೀದಿಗೆ ಬಂದು ಇಸ್ಲಾಮ್ ಸ್ವೀಕರಿಸಿದ್ದರು ಎಂದು ಹದೀಸ್ ಗ್ರಂಥಗಳಲ್ಲಿದೆ. ಹೀಗೆ ಮುಸ್ಲಿಮೇತರ ಕೈದಿಗಳನ್ನು ಅಲ್ಲಾಹನ ಮಸೀದಿಯಲ್ಲಿ ಬಂಧಿಸಿಡಲಾಗಿತ್ತು. ಆದರೆ ಇವತ್ತು ಮುಸ್ಲಿಮೇತರರು ಮಸೀದಿಗೆ ಬರಬಹುದೋ (6ನೇ ಪುಟಕ್ಕೆ)

# ವಿಶ್ವಾಸ ಮತ್ತು ವಿನಯ



ಸತ್ಯವಿಶ್ವಾಸಿಗಳು ದಿನಂಪ್ರತೀ ಅತೀ ಹೆಚ್ಚು ಉಚ್ಚರಿಸುವ ವಾಕ್ಯ 'ಅಲ್ಲಾಹು ಅಕ್ಬರ್'. ಐದು ಹೊತ್ತಿನ ನಮಾಝಿನಲ್ಲಿ ಕನಿಷ್ಠ ಪಕ್ಷ ತೊಂಬತ್ತ ನಾಲ್ಕು ಸಲ ಇದನ್ನು ಆವರ್ತಿಸುತ್ತಾರೆ. ಸುನ್ನತ್ (ನಫಿಲ್) ನಮಾಝಿನಲ್ಲಿ ಹಾಗೂ ಆಝಾನ್ ಮತ್ತು ಇಕಾಮತ್ ಸೇರಿ ಇದರ ಸಂಖ್ಯೆ ಸುಮಾರು ಮುನ್ನೂರು ದಾಟುತ್ತದೆ. ಹೀಗೆ ಒಂದೇ ವಾಕ್ಯ ನಿರಂತರವಾಗಿ ಆವರ್ತಿಸುವುದು ಯಾಕೆ?

ಅಲ್ಲಾಹನು ದೊಡ್ಡವನು, ಮಹಾನ್ ಎಂಬುದಾಗಿದೆ ಇದರ ಅರ್ಥ. ಅತ್ಯಂತ ವಿನಯಾನೀತನಾಗಿ, ತಾನು ಚಿಕ್ಕವನು, ದುರ್ಬಲನು, ನಿಸ್ಸಹಾಯಕನು ಎಂದು ಅಂಗೀಕರಿಸುವುದಲ್ಲದರ ಹೊರತು ಅದನ್ನು ಉಚ್ಚರಿಸಲು ಸಾಧ್ಯವಿಲ್ಲ ಅಥವಾ ಅಲ್ಲಾಹು ಅಕ್ಬರ್ ಎಂಬುದು ನಿರಂತರ ಪುನರಾವರ್ತಿಸುವುದು ಒಬ್ಬ ವಿಶ್ವಾಸಿಯನ್ನು ಅತ್ಯಂತ ವಿನವಂತನಾಗಿ ಮಾರ್ಪಡಿಸುತ್ತದೆ.

ಮಸೀದಿಯಲ್ಲಿ ನಮಾಝಿಗೆ ಮೊದಲು ತಲುಪುವುದು ಕಚೇರಿಯಲ್ಲಿ ಕೆಲಸ ಮಾಡುವ ಟೀ ತಯಾರಿಸುವವನೋ, ಕಾವಲುಗಾರನೋ ಆಗಿದ್ದಲ್ಲಿ ಅವರ ಕಾಲಿನ ಪಕ್ಕದಲ್ಲಿ ತಲೆ ಇಡದೆ ಹಿಂದಿನಿಂದ ಬರುವ ಪ್ರಧಾನ ಮಂತ್ರಿಗೋ ಅಥವಾ ರಾಜ್ಯಪಾಲರಿಗೋ ನಮಾಝ್ ಮಾಡಲು ಸಾಧ್ಯವಿಲ್ಲ. ತನ್ನ ಅಧೀನದಲ್ಲಿ ಕೆಲಸ ಮಾಡುವ ಚಪ್ರಾಸಿಯ ಕಾಲಿನ ಪಕ್ಕದಲ್ಲಿ ತಲೆ ಇಟ್ಟು ನಮಾಝ್ ಮಾಡುವುದಿಲ್ಲ ಎಂದು ಯಾರಾದರೂ ತೀರ್ಮಾನಿಸಿದರೆ ಅವರ ನಮಾಝ್ ಅಸಿಂಧು ವಾಗುತ್ತದೆ. ಅತ್ಯಂತ ಧರಿದ್ರನು ಅನುಭವಿಸುವ ಹಾಗೇ ಬಾಯಾರಿಕೆ ಮತ್ತು ಹಸಿವು ಸಹಿಸದೆ ಯಾರಿಗೂ ಉಪವಾಸ ಆಚರಿಸಲು ಸಾಧ್ಯವಿಲ್ಲ. ನಾಲ್ಕು ಸಾವಿರದ ಒಂದು ನೂರು ವರ್ಷಕ್ಕೆ ಮೊದಲು ಹಾಜರಾ ಎಂಬ ಗುಲಾಮ ಸ್ತ್ರೀಯು ಹತ್ತಿ ನಿಲ್ಲುವ ಮೂಲಕ ಅಲ್ಲಾಹನ ಚಿಹ್ನೆಗಳಾಗಿ ಗುರುತಿಸಲ್ಪಟ್ಟ ಸಫಾ ಹಾಗೂ ಮರ್ವಗಳಲ್ಲಿ ಹತ್ತಿಳಿಯದೆ, ಅವರು ನಡೆದ ದಾರಿಯಲ್ಲಿ ನಡೆಯದೆ ಯಾವುದೆ ಶ್ರೀಮಂತನಿಗೂ ಅಥವಾ ಪ್ರಮುಖನಿಗೂ ಹಜ್ಜ್ ಅಥವಾ ಉಮ್ರ ನಿರ್ವಹಿಸಲು ಸಾಧ್ಯವಿಲ್ಲ.

ವಿನಯವಿಲ್ಲದವನಿಗೆ ವಿಶ್ವಾಸಿಯಾಗಲು ಸಾಧ್ಯವಿಲ್ಲ. ನಮಾಝಿನ ರಕಅತ್‌ಗಳ ಸಂಖ್ಯೆ, ಸುಜೂದ್ (ಸಾಷ್ಟಾಂಗ) ಹಾಗೂ ರುಕೂಅ್‌ಗಳ (ಬಾಗುವುದು) ರೂಪರೇಷಗಳು ಹಾಗೂ ಇನ್ನಿತರ ಆರಾಧನಾ ಕರ್ಮಗಳ ನಿಯಮ ನಿರ್ದೇಶಗಳನ್ನು ವಿವರಿಸದ ಪವಿತ್ರ ಕುರ್‌ಆನ್, ಮಾನವನ ನಡತೆಯ ಇತಿಮಿತಿಗಳು ಹಾಗೂ ವಿನಯತೆ ಪಾಲಿಸಲು ವಿವಿಧ ಭಾಗಗಳಲ್ಲಿ ಹೇಳಿರುವುದು ಇದರ ಪ್ರಾಮುಖ್ಯತೆಗೆ ಅತ್ಯಂತ ದೊಡ್ಡ ನಿದರ್ಶನವಾಗಿದೆ.

ನಡೆತೆಯಲ್ಲಿ ಅಹಂಕಾರ ಪ್ರಕಟಿಸುವವರನ್ನು ಕುರ್‌ಆನ್ ಅತ್ಯಂತ ಕಠಿಣ ಭಾಷೆಯಲ್ಲಿ ವಿಮರ್ಶಿಸುತ್ತದೆ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡಿರಿ. ನೀವು ಭೂಮಿಯನ್ನು ಸೀಳಲಾರಿರಿ ಮತ್ತು ಪರ್ವತಗಳ ಶಿಖರಕ್ಕೂ ತಲುಪಲಾರಿರಿ. (ಕುರ್‌ಆನ್– 17:37)

**ಬಿ.ಕೆ. ಅಬ್ದುಸ್ಸಲಾಮ್, ದೇರಳಕಟ್ಟೆ**

ಪ್ರವಾದಿ ಮುಹಮ್ಮದ್(ಸ) ಅಲ್ಲಾಹನ ಅಂತ್ಯ ಪ್ರವಾದಿಯೂ ಸಮೂಹದ ನಾಯಕನೂ, ಆಡಳಿತಾಧಿಕಾರಿಯೂ, ಸೈನ್ಯದ ಮುಖ್ಯಸ್ಥನೂ, ನ್ಯಾಯಾಧಿಪತಿಯೂ ಆಗಿದ್ದರು. ಇವೆಲ್ಲದರ ಹೊರತೂ ಅವರ ಜೀವನದುದ್ದಕ್ಕೂ ಅಸಾಧಾರಣವಾದ ವಿನಯತೆ ತುಂಬಿ ತುಳುಕುತ್ತಿತ್ತು. ತಾನು ಬರುವಾಗ ಎದ್ದು ನಿಲ್ಲಬಾರದು ಎಂದು ಆದೇಶಿಸಿದ ಏಕೈಕ ನೇತಾರ ಪ್ರವಾದಿ(ಸ). ಹೆಚ್ಚಿನ ಧಾರ್ಮಿಕ ನೇತಾರರು ತಮ್ಮ ಅನುಯಾಯಿಗಳಿಂದ ದೂರ ಸರಿದು ಜೀವಿಸುವುದು ನಮಗೆ ಗೊತ್ತಿದೆ. ಸಾಮಾನ್ಯವಾಗಿ ಜನರು ಮಾಡುವಂತಹ ಶಾರೀರಿಕ ಪರಿಶ್ರಮಗಳಿಗೆ ನೇತಾರರು ಅಥವಾ ಧರ್ಮಗುರುಗಳಾರೂ ತಯಾರಾಗುವುದಿಲ್ಲ. ಪ್ರವಾದಿಯವರ(ಸ) ಮನೋಭಾವ ಇದಕ್ಕಿಂತ ವ್ಯತ್ಯಾಸವಿರುವುದು ನಮಗೆ ಕಾಣಬಹುದಾಗಿದೆ. ಹಿಜರಿ ಐದರಲ್ಲಿ ಉಂಟಾದ ಅಹ್‌ಝಾಬ್ ಯುದ್ಧದ ಸಮಯದಲ್ಲಿ ಮೂರು ಸಾವಿರ ಶಿಷ್ಯರೊಡನೆ ಸೇರಿ ಕಂದಕ ನಿರ್ಮಿಸುವುದರಲ್ಲಿ ಇಪ್ಪತ್ತು ದಿವಸ ಪ್ರವಾದಿಯವರು ತಲ್ಲೀನರಾಗಿದ್ದರು.

ಮತ್ತೊಮ್ಮೆ ಅಲ್ಲಿಂದ ಅನುಯಾಯಿಗಳೊಂದಿಗೆ ಯಾತ್ರೆಯಲ್ಲಿರುವಾಗ ವಿಶ್ರಾಂತಿ ಹಾಗೂ ಅನ್ನ ಪಾನೀಯಗಳಿಗಾಗಿ ಒಂದು ಸ್ಥಳದಲ್ಲಿ ಠಿಕಾಣಿ ಹೂಡಿದರು. ಎಲ್ಲರ ಒಮ್ಮತಾಭಿಪ್ರಾಯದ ನಂತರ ಅವರು ಒಂದು ಆಡನ್ನು ಕೊಯ್ದು ಪಾಕ ಮಾಡಲು ತೀರ್ಮಾನಿಸಿದರು. ಆಗ ಅವರಲ್ಲಿ ಒಬ್ಬರು ಹೇಳಿದರು, 'ಕೊಯ್ಯುವುದನ್ನು ನಾನು ನೆರವೇರಿಸುವೆನು'. ಇನ್ನೊಬ್ಬರು ಹೇಳಿದರು, ಚರ್ಮವನ್ನು ಸೀಳುವುದು ನಾನು. ಮತ್ತೊಬ್ಬರು ಹೇಳಿದರು, ಪಾಕ ತಯಾರು ಮಾಡುವ ಕೆಲಸ ನನಗಿರಲಿ. ಹಾಗೆ ಅವರು ಒಂದೊಂದೇ ಕೆಲಸವನ್ನು ತನ್ನದಾಗಿಸಿದಾಗ, ಪ್ರವಾದಿಯವರು(ಸ) ಹೇಳಿದರು, 'ಕಟ್ಟಿಗೆ ತರುವ ಕೆಲಸ ನನಗಿರಲಿ'. ಆಗ, ಬೇಡ ಅದೂ ನಮಗೇ ಬಿಟ್ಟು ಕೊಡಿರಿ ಎಂದು ಅನುಯಾಯಿಗಳು ಹೇಳಿದಾಗ ಪ್ರವಾದಿಯವರು ಹೇಳಿದರು, ನಿಮಗೆ ಅದು ಮಾಡಲು ಸಾಧ್ಯವಿದೆಯೆಂದು ನನಗೆ ತಿಳಿದಿದೆ. ಆದರೆ ನಾನು ನನ್ನನ್ನು ನಿಮಗಿಂತ ಬೇರೆಯಾಗಿದ್ದೇನೆಂದು ಭಾವಿಸುವುದಿಲ್ಲ. ನೀವು ನನ್ನನ್ನು ಹಾಗೆ ಭಾವಿಸಲೂಬಾರದು ಎಂದರು.

ಅಬೂಬಕ್ಕರ್ ಸಿದ್ದೀಕ್‌ರವರ(ರ) ಆಡಳಿತಾವಧಿಯಲ್ಲಿ ಮದೀನಾದಲ್ಲಿ ವೃದ್ಧೆಯಾದ ಓರ್ವ ಅಂಧಳಿಗೆ ಎಲ್ಲಾ ಸೇವೆಗಳನ್ನು ನೆರವೇರಿಸಿ ಕೊಡುತ್ತಿದ್ದುದು (12ನೇ ಪುಟಕ್ಕೆ)

## ವಾರದ ಖುತ್ಬಾ

(6ನೇ ಪುಟದಿಂದ)

ಎಂಬುದರ ಬಗ್ಗೆ ನಾವು ಚರ್ಚೆ ಮಾಡುತ್ತಾ ಇದ್ದೇವೆ. ಬೇರೆ ಬೇರೆ ದೇಶಗಳಿಂದ ಬರುವಂತಹ ಅತಿಥಿಗಳನ್ನು, ಅಲ್ಲಿನ ಪ್ರತಿನಿಧಿಗಳನ್ನು ಪ್ರವಾದಿ ಮತ್ತು ಖಲೀಫರು ಸ್ವಾಗತಿಸುತ್ತಿದ್ದುದು ಮಸೀದಿಗಳಲ್ಲಿ. ಅವರು ಮುಸ್ಲಿಮರೋ ಮುಸ್ಲಿಮೇ ತರರೋ ಎಂಬ ಭೇದ ಅಂದು ಇದ್ದಿರಲಿಲ್ಲ.

ನಾಲ್ಕನೆಯದಾಗಿ, ಮಸೀದಿಗಳು ಧನ ಸಂಗ್ರಹ ಮತ್ತು ವಿತರಣೆಯ ಕೇಂದ್ರಗಳಾಗಿದ್ದುವು. ಝಕಾತ್, ಸದಕಾ ಮತ್ತು ಫಿತ್ರ್ ಝಕಾತ್‌ಗಳನ್ನು ಶೇಖರಿಸಿಡುತ್ತಿದ್ದುದು ಮಸೀದಿಯಲ್ಲಿ. ಸಮಾಜದ ಸಮಸ್ಯೆಗಳಿಗೆ ಪರಿಹಾರ ಕಾರ್ಯವನ್ನು ಘೋಷಿಸುತ್ತಿದ್ದುದು ಮಸೀದಿಗಳಿಂದಾಗಿತ್ತು. ಸಮಾಜ ಸೇವೆಗೆ ಬೇಕಾದ ನಿಧಿಯನ್ನು ಸಂಗ್ರಹಿಸುವ, ವಿತರಿಸುವ ಕೇಂದ್ರವೂ ಮಸೀದಿಯಾಗಿತ್ತು ಅಂದಿನ ಕಾಲದಲ್ಲಿ. ಇಸ್ಲಾಮೀ ಆಡಳಿತ ವ್ಯವಸ್ಥೆಯ ಖಜಾನೆ ಮದೀನದ ಮಸ್ಜಿದುನ್ನಬವಿ ಆಗಿತ್ತು.

ಮಸೀದಿಗಳು ಸಮಾಜಕ್ಕೆ, ಸಮುದಾಯಕ್ಕೆ ಸಾಂತ್ವನದ ಕೇಂದ್ರಗಳಾಗಿದ್ದುವು. ಹಸಿದು ಬರುವವರಿಗೆ ಅನ್ನದ ವ್ಯವಸ್ಥೆ ಇತ್ತು ಮಸೀದಿಗಳಲ್ಲಿ. ಕುರ್‌ಆನಿನ ನಂತರ ಮುಸ್ಲಿಮ್ ಸಮುದಾಯವು ಅತ್ಯಧಿಕವಾಗಿ ವಿಶ್ವಾಸವಿಡುವ ಹದೀಸ್ ಗ್ರಂಥವಾದ ಬುಖಾರಿಯಲ್ಲಿ ಒಂದು ಅಧ್ಯಾಯವಿದೆ. ಮಸೀದಿಯಲ್ಲಿ ಖರ್ಜೂರದ ಗೊನೆಯನ್ನು ತೂಗು ಹಾಕುವ ವಿಚಾರದ ಬಗ್ಗೆ. (ಅಂದು ಖರ್ಜೂರವು ಜನರ ನಿತ್ಯದ ಆಹಾರವಾಗಿತ್ತು) ಹಸಿದು ಬರುವವರಿಗೆ ಅದರಿಂದ ಉಪಕಾರವಾಗುತ್ತಿತ್ತು. ಇವತ್ತಿಗೂ ಅರೇಬಿಯಾದ ಮಸೀದಿಗಳಲ್ಲಿ ಖರ್ಜೂರದ ಗೊಂಚಲುಗಳಿರುತ್ತವೆ ಎಂದು ಅಲ್ಲಿಗೆ ಸಂದರ್ಶಿಸಿದವರು ಹೇಳುತ್ತಾರೆ.

ಅಲ್ಲಾಹನ ಪ್ರವಾದಿಯವರು ಮಸೀದಿಯಲ್ಲಿ ಆಸ್ಪತ್ರೆಯನ್ನು ಕೂಡ ಮಾಡಿದ್ದರು. ಮಸೀದಿಯ ಒಂದು ಭಾಗವನ್ನು, ಯುದ್ಧದಲ್ಲಿ ಗಾಯಗೊಂಡು ಬರುವ ಸಹಾಬಿಗಳಿಗೆ ಚಿಕಿತ್ಸೆ ಕೊಡಿಸಲು ಬಳಸಲಾಗುತ್ತಿತ್ತು.

ಐದನೆಯದಾಗಿ, ಮಸೀದಿಗಳು ಮುಸ್ಲಿಮ್ ಸಮುದಾಯದ ಸಾಂಸ್ಕೃತಿಕ ಕೇಂದ್ರಗಳಾಗಿದ್ದುವು. ಜನರು ಮಸೀದಿಗೆ ಕೇವಲ ನಮಾಝ್‌ಗಾಗಿ ಹೋಗು ತ್ತಿದ್ದುದಲ್ಲ. ಮಸೀದಿಗಳಲ್ಲಿ ಇಸ್ಲಾಮೀ ಸಮ್ಮೇಳನಗಳು ನಡೆಯುತ್ತಿದ್ದುವು. ಕೆಲವು ವಿದ್ವಾಂಸರು ಹೇಳುವ ಪ್ರಕಾರ ಮಸೀದಿಗಳು ಬಾಲ ಭವನವಾಗಿದ್ದುವು. ಅಂದರೆ ಅಂಗನವಾಡಿಗಳಾಗಿದ್ದುವು. ಯಾವಾಗಲೂ ಮಸೀದಿಗಳಲ್ಲಿ ಮಕ್ಕಳ ಉಪಸ್ಥಿತಿ ಇರುತ್ತಿತ್ತು. ಮಕ್ಕಳು ದಫ್ ಮತ್ತು ಹಾಡುಗಳನ್ನು ಅಭ್ಯಾಸ ಮಾಡುತ್ತಿದ್ದುದು ಮಸೀದಿಗಳಲ್ಲಾಗಿತ್ತು.

ಮದುವೆಯ ಸಂಭ್ರಮವನ್ನು ಸಮುದಾಯ ಆಚರಿಸುತ್ತಿದ್ದುದು ಮಸೀದಿಯಲ್ಲಿ. ಅವರು ನಮಾಝಿಗೆ ಮತ್ತು ಜನಾಝಕ್ಕೆ ಮಾತ್ರ ಮಸೀದಿಗೆ ಬರುತ್ತಾ ಇದ್ದುದಲ್ಲ. ಇಸ್ಲಾಮಿನ, ಸಮಾಜದ, ಸಮುದಾಯದ ನಾಳೆಯ ಭವಿಷ್ಯವಾದ ಮಕ್ಕಳನ್ನು ನಾವೆಲ್ಲ ಕಳುಹಿಸುವುದು ಮೈದಾನಕ್ಕೆ ಆಡಲು, ದೊಡ್ಡದೊಡ್ಡ ಮಾಲ್‌ಗಳಿಗೆ. ಆದರೆ ನಮ್ಮ ಹಿರಿಯರು ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದುದು ಮಸೀದಿಗಳಿಗೆ. ಅವರು ಮಸೀದಿಯ ಸಹವಾಸದಲ್ಲಿ ಬೆಳೆಯಬೇಕು. ಮಹಿಳೆಯರು ಸಣ್ಣ ಸಣ್ಣ ಮಕ್ಕಳೊಂದಿಗೆ ಮಸೀದಿಗೆ ಬರುತ್ತಾ ಇದ್ದರು. ಪ್ರವಾದಿ ವರ್ಯರು(ಸ) ನಮಾಝ್ ಮಾಡುವಾಗ ಮಕ್ಕಳ ಅಳುವಿನ ಶಬ್ದ ಕೇಳಿದರೆ, ನಮಾಝನ್ನು ಸಂಕ್ಷಿಪ್ತಗೊಳಿಸುತ್ತಾ ಇದ್ದರು. ಸಣ್ಣ ಸೂರಗಳನ್ನು ಓದುವ ಮೂಲಕ, ಮಗು ಅಳುವಾಗ ಅದರ ತಾಯಿಯ ಮನಸ್ಸಿಗೆ ನೋವಾಗಬಾರದೆಂಬ ಕಾರಣಕ್ಕಾಗಿ. ಆದರೆ ಇವತ್ತು ಮಸೀದಿಯಲ್ಲಿ ಮಕ್ಕಳನ್ನು ಕಾಣುವಾಗ ಅಸಹನೆ ತೋರಿಸುವ ವಿದ್ವಾಂಸರು, ನಾಯಕರು ನಮ್ಮ ಸಮುದಾಯದಲ್ಲಿದ್ದಾರೆ. "ನಿಮ್ಮ ಮದುವೆಯ ಘೋಷಣೆಯನ್ನು ಮಸೀದಿಯಲ್ಲಿ ಮಾಡಿ" ಎಂದು ಪ್ರವಾದಿವರ್ಯರು ಹೇಳಿದ್ದಾರೆ.

ಇಷ್ಟೆಲ್ಲ ಕಾರ್ಯಕ್ರಮಗಳು ನಡೆಯುತ್ತಿದ್ದ ಮಸೀದಿಗಳ ಬಾಗಿಲುಗಳನ್ನು ಮುಚ್ಚಿ ಹಾಕಿದ್ದು ಯಾರು ಎಂಬುದಕ್ಕೆ ನಾವೆಲ್ಲ ಉತ್ತರ ಕಂಡುಕೊಳ್ಳಬೇಕು. ಕೇವಲ 5 ಹೊತ್ತಿನ ನಮಾಝ್ ನಿರ್ವಹಿಸಿ ಮಸೀದಿಗಳನ್ನು ಬಂದ್ ಮಾಡಿ ಬಿಡುವ ಸಂಸ್ಕೃತಿ ಈ ಸಮುದಾಯಕ್ಕೆ ಎಲ್ಲಿಂದ ಬಂತು?

ಆರನೆಯದಾಗಿ, ಮಸೀದಿಗಳು ಮಹಿಳೆಯರ ಸಬಲೀಕರಣದ ಕೇಂದ್ರಗಳಾಗಿದ್ದುವು. ಇವತ್ತು ಮಹಿಳೆಯರು ಮಸೀದಿಗೆ ಹೋಗಬೇಕೋ, ಬೇಡವೋ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಾ ಇದೆ. ಪ್ರವಾದಿ ವರ್ಯರ(ಸ) ಕಾಲದಲ್ಲಿ ಮಹಿಳೆಯರು ಜಮಾಅತ್‌ಗೆ ಬರುತ್ತಾ ಇದ್ದರು. ಮಹಿಳೆಯರು ಜುಮ್‌ಆಗಳಲ್ಲಿ ಭಾಗವಹಿಸುತ್ತಾ ಇದ್ದರು. ಅಂದರೆ ನೀವು ಬಲಾತ್ಕಾರವಾಗಿ ಮಹಿಳೆಯರನ್ನು ಮಸೀದಿಗೆ ಕರೆದುಕೊಂಡು ಹೋಗಬೇಕು, ಅಲ್ಲಿ ನೀವು ಪೊಲೀಸರಂತೆ ರಕ್ಷಣೆ ಕೊಟ್ಟು ಮಹಿಳೆಯರಿಂದ ಜುಮಾ ನಮಾಝ್ ಮಾಡಿಸಬೇಕು ಅಂತ ಅರ್ಥ ಅಲ್ಲ. ಸ್ಥಳಾವಕಾಶವಿದ್ದರೆ, ವ್ಯವಸ್ಥೆ ಇದ್ದರೆ ಅವರು ಜುಮ್‌ಆಗಳಿಗೆ ಹೋಗಬೇಕು.

ಉಮರುಲ್ ಫಾರೂಕ್‌ರ ಪತ್ನಿಯ ಬಗ್ಗೆ ಒಂದು ದೊಡ್ಡ ಇತಿಹಾಸವಿದೆ. ಅವರು ಫಜ್ರ್ ನಮಾಝ್‌ಗೆ ಕೂಡ ಜಮಾಅತ್‌ಗೆ ಹೋಗ್ತಾ ಇದ್ದರು. ಯಾರೋ ಒಬ್ಬರು ಕೇಳುತ್ತಾರೆ, ಅಮೀರುಲ್ ಮೂಮಿನೀನ್! ಹೀಗೆ ಮಹಿಳೆಯರು ಫಜ್ರ್ ನಮಾಝ್‌ಗೆ ಹೋದರೆ ಕಷ್ಟವಲ್ಲವೇ? ಉಮರ್ ಹೇಳಿದರು, "ಸಹೋದರಾ! ಇದನ್ನು ತಡೆಯಲು ನನಗೆ ಸಾಧ್ಯವೇ? ಅಲ್ಲಾಹನ ದಾಸಿಯರನ್ನು ಮಸೀದಿಗೆ ಹೋಗುವುದರಿಂದ ತಡೆಯಬಾರದು ಎಂದು ಪ್ರವಾದಿವರ್ಯರು ಹೇಳಿದ್ದಾರಲ್ಲವೇ! ಅದನ್ನು ನಿರಾಕರಿಸಲು ಸಾಧ್ಯವೇ? ಮಸೀದಿಗೆ ಹೋಗುವುದು ಹೋಗದಿರುವುದು ಮಹಿಳೆಯರ ತೀರ್ಮಾನಕ್ಕೆ ಬಿಟ್ಟದ್ದು."

ಮಸೀದಿಗಳು ಸಂದೇಶ ಪ್ರಚಾರದ ಕೇಂದ್ರಗಳಾಗಿದ್ದುವು. ಆದರೆ ಇಂದು ಮಸೀದಿಗಳಿಗೆ ಬಾಗಿಲು ಬಿದ್ದಿವೆ, ಜನರ ಮನಸ್ಸುಗಳಿಗೂ ಬಾಗಿಲು ಬಿದ್ದಿವೆ. ಇಸ್ಲಾಮನ್ನು ಕಲಿಸಿಕೊಡುವುದಕ್ಕಾಗಿ ಪ್ರವಾದಿ ವರ್ಯರು(ಸ) ಮುಸ್ಲಿಮೇತರರನ್ನು ಮಸೀದಿಗೆ ಕರೆಸುತ್ತಿದ್ದರು. ಅದಕ್ಕಾಗಿ ದಿನಗಟ್ಟಲೆ ಅವರಿಗೆ ವಾಸ ಮಾಡುವ ವ್ಯವಸ್ಥೆಯನ್ನೂ ಮಾಡಿಕೊಡುತ್ತಿ ದ್ದರು. ಆದರೆ ನಮ್ಮ ಮಸೀದಿಗಳು ಇಂದು ಸಂಕುಚಿತಗೊಂಡಿವೆ. ವಿಮರ್ಶೆ ಮಾಡುವುದೇ ಇಸ್ಲಾಮ್ ಎಂದು ತಿಳಿದುಕೊಂಡಿರುವ ವರ್ಗ ನಮ್ಮ ಮಧ್ಯೆ ಇದೆ. ವಿಮರ್ಶೆ ಮಾಡುವುದೇ ತೌಹೀದ್ ಎಂದು ತಿಳಿದಿರುವವರು ಅವರು. ಅವರ ಪ್ರಕಾರ ಮುಸ್ಲಿಮೇತರರೊಬ್ಬರು ಮಸೀದಿಗೆ ಬಂದರೆ ಅದು ಅಪರಾಧ. ಇನ್ನು ಮುಸ್ಲಿಮರು ಎಲ್ಲಿಯಾದರೂ ದೇವಸ್ಥಾನ, ಮಠಕ್ಕೆ ಹೋಗಿ ಇಸ್ಲಾಮಿನ ಸಂದೇಶ ನೀಡಿದರೆ ಅದೂ ಅಪರಾಧ! ಯಾವ ಜಗತ್ತಿನಲ್ಲಿ ಈ ಸಮುದಾಯ ಬದುಕುತ್ತಾ ಇದೆ? ಮೂರ್ಖರ ಜಗತ್ತಿನಲ್ಲಲ್ಲವೇ? ವಿಮರ್ಶೆಯನ್ನು ಮಾಡುವುದು ಮಾತ್ರ ದೀನ್ ಎಂದು ತಿಳಿದಿರುವ ಮತ್ತು ಅದಕ್ಕಾಗಿ ಪೇಜ್‌ಗಳನ್ನೂ ಸ್ಟೇಜ್‌ಗಳನ್ನೂ ಮಿಂಬರ್‌ಗಳನ್ನೂ ದುರುಪಯೋಗ ಮಾಡುತ್ತಿರುವ, ಸಂಕುಚಿತತೆಯ, ಮಾಲಿನ್ಯದ ರೋಗ ಹಿಡಿದವರಿಗೆ ಇದನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಸಾಧ್ಯವೇ?

ಆದ್ದರಿಂದ ಪ್ರವಾದಿಯವರ ಕಾಲದಲ್ಲಿ, ಖಲೀಫರ ಕಾಲದಲ್ಲಿ, ಇಮಾಮರುಗಳ ಕಾಲದಲ್ಲಿ, ಮುಸ್ಲಿಮ್ ಸಮುದಾಯವು ಗೌರವದಲ್ಲಿ ಬದುಕುತ್ತಿದ್ದ ಕಾಲದಲ್ಲಿ ಮಸೀದಿಗಳು ಅವರ ಕೇಂದ್ರಗಳಾಗಿದ್ದರೆ; ಇವತ್ತಿಗೂ ಮಸೀದಿಯನ್ನು ಹಾಗೆ ಬದಲಾಯಿಸಲು ನಮಗೆ ಸಾಧ್ಯವಾಗಬೇಕು. ಅಲ್ಲಾಹ್ ನಮ್ಮ ಮಸೀದಿಗಳನ್ನು ಹೀಗೆ ಇಸ್ಲಾಮಿನ ಕೇಂದ್ರಗಳಾಗಿ ಬದಲಾಯಿಸಲು ಸದ್ಬುದ್ಧಿಯನ್ನು ದಯಪಾಲಿಸಲಿ.

# ಹಾಗೇ ಯಾಕೆ?

**ಶೇಖ್ ಅಮಾನುಲ್ಲಾ ಖಾನ್, ಮಂಗಳೂರು**

● **ಮುಸ್ಲಿಮೇತರ ಬಂಧುವೊಬ್ಬರು ನನ್ನಲ್ಲಿ "ಮುಸ್ಲಿಮರು ನಮಾಝ್‌ಗಾಗಿ ಐದು ಹೊತ್ತನ್ನು ಯಾಕೆ ನಿಶ್ಚಯಿಸಿದ್ದಾರೆ? ಅದನ್ನು ಹೆಚ್ಚು ಅಥವಾ ಕಡಿಮೆಗೊಳಿಸಬಹುದಿತ್ತಲ್ಲವೇ? ಅಲ್ಲದೆ ನಿರ್ದಿಷ್ಟ ಸಮಯದಲ್ಲೇ ಏಕೆ ನಮಾಝ್ ನಿರ್ವಹಿಸುವುದು. ಅದಕ್ಕಾಗಿ ಅದಾನ್‌ನ ಅಗತ್ಯವಿದೆಯೇ? ಆರಾಧನೆಗೆ ನಮಾಝ್‌ನ ಕ್ರಮವೇ ಯಾಕೆ? ಬೇರೆ ಕ್ರಮವಿರಲಿಲ್ಲವೆ ಎಂದು ಮುಂತಾಗಿ ಪ್ರಶ್ನಿಸಿದರು. ಇದಕ್ಕೆ ಏನೆಂದು ಉತ್ತರಿಸಲಿ? 'ಮುಜೀಬ್' ತಿಳಿಸಬೇಕಾಗಿ ವಿನಂತಿ.**

❍ ಇಸ್ಲಾಮ್ ಎಂದರೆ ಸಂಪೂರ್ಣ ಶರಣಾಗತಿ, ಶಾಂತಿ ಎಂದಾಗಿದೆ. ಒಬ್ಬನು ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲವೆಂದೂ ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರೆಂದೂ ಸಾಕ್ಷ್ಯ ವಚನ ನುಡಿದ ಕೂಡಲೇ ಅವನು ಮುಸ್ಲಿಮನಾಗುತ್ತಾನೆ. ಅನಂತರ ಅಲ್ಲಾಹನ ಆಜ್ಞೆ ಆದೇಶಗಳನ್ನು, ವಿಧಿ-ನಿಷೇಧಗಳನ್ನು ತನ್ನ ಇಡೀ ಬದುಕಿನಲ್ಲಿ ಪಾಲಿಸುವುದು ಅವನ ಮೇಲೆ ಕಡ್ಡಾಯವಾಗುತ್ತದೆ. ಅಲ್ಲಾಹನ ಸಂದೇಶಗಳನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟವರೇ ಪ್ರವಾದಿ ಮುಹಮ್ಮದ್(ಸ). ಆದ್ದರಿಂದ ಪ್ರವಾದಿಯವರನ್ನು ನಿಶ್ಶರ್ತವಾಗಿ ಅನುಸರಿಸುವುದೂ ಒಬ್ಬ ಮುಸ್ಲಿಮನ ಮೇಲೆ ಕಡ್ಡಾಯವಾಗುತ್ತದೆ. ಸತ್ಯವಿಶ್ವಾಸ ಸ್ವೀಕರಿಸಿ ಒಬ್ಬನು ಮುಸ್ಲಿಮನಾದ ನಂತರ ಪ್ರಥಮವಾಗಿ ಅವನ ಮೇಲೆ ಬೀಳುವ ಹೊಣೆಗಾರಿಕೆ ಐದು ಹೊತ್ತಿನ ನಮಾಝನ್ನು ನಿರ್ವಹಿಸುವುದು, ಅದನ್ನು ಹೆಚ್ಚು ಕಡಿಮೆ ಮಾಡುವ, ಅದರ ಸಮಯವನ್ನು ಆಚೀಚೆ ಮಾಡುವ ಹಾಗೂ ಅದರ ಕ್ರಮವನ್ನು ಬದಲಾಯಿಸುವ ಅಧಿಕಾರ ಯಾರಿಗೂ ಇಲ್ಲ.

ಇದೆಲ್ಲ ಮುಸ್ಲಿಮರು ತಾವಾಗಿ ನಿಶ್ಚಯಿಸಿಕೊಂಡದ್ದಲ್ಲ. ಅಲ್ಲಾಹನ ಆದೇಶದ ಪ್ರಕಾರ ಪ್ರವಾದಿಯವರು ತೋರಿಸಿ ಕೊಟ್ಟ ಕ್ರಮಗಳು ಅಲ್ಲಾಹನನ್ನೂ ಆತನ ಪ್ರವಾದಿಯನ್ನೂ ಅನುಸರಿಸುತ್ತೇವೆಂದು ಪ್ರತಿಜ್ಞೆ ಮಾಡಿದ ಬಳಿಕ ಅವರ ಆಜ್ಞೆಗಳು ಏನಿವೆಯೋ ಹಾಗೆಯೇ ನಡೆಯಬೇಕಾದುದು ಸತ್ಯವಿಶ್ವಾಸಿಯ ಕರ್ತವ್ಯ. ಅವರ ಆಜ್ಞೆಗಳೆಂಬ ನೆಲೆಯಲ್ಲೇ ಆಯಾ ಸಮಯದಲ್ಲಿ, ಆಯಾ ಕ್ರಮದಂತೆ, ಹೆಚ್ಚು ಕಡಿಮೆಗೊಳಿಸದೆ ಮುಸ್ಲಿಮರು ನಮಾಝ್ ಮಾಡುತ್ತಾರೆ. ನಮಾಝ್ ಮಾಡಲಿಕ್ಕಾಗಿ ಜನರನ್ನು ಕರೆಯುವ ಕ್ರಮವೇ ಅದಾನ್. ಅದು ಕೂಡಾ ಅಗತ್ಯವಾಗಿದೆ. ಜನರು ತಂತಮ್ಮ ಕೆಲಸ ಕಾರ್ಯಗಳಲ್ಲಿ ನಿರತರಾಗಿರುವಾಗ ಅದಾನ್ ಅವರಿಗೆ ನಮಾಝನ್ನು ನೆನಪಿಸುತ್ತದೆ. ಅದರಲ್ಲಿ 'ಹಯ್ಯ ಅಲಸ್ಸಲಾತ್' ಮತ್ತು 'ಹಯ್ಯ ಅಲಲ್ ಫಲಾಹ್' ಎಂಬ ವಾಕ್ಯಗಳು ಅದನ್ನೇ ಸೂಚಿಸುತ್ತವೆ. 'ಬನ್ನಿ ನಮಾಝ್‌ಗೆ' 'ಬನ್ನಿ ವಿಜಯದೆಡೆಗೆ' ಎಂಬುದು ಅದರ ಅರ್ಥ. ನಮಾಝ್‌ನ ಕುರಿತು ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ.

1. ಖಂಡಿತವಾಗಿಯೂ ನಮಾಝ್ ಸತ್ಯವಿಶ್ವಾಸಿಗಳ ಮೇಲೆ ಸಮಯ ನಿಶ್ಚಯದೊಂದಿಗೆ ಕಡ್ಡಾಯಗೊಳಿಸಲಾಗಿದೆ.

2. ನನ್ನ ಸ್ಮರಣೆಯಾಗಿ ನಮಾಝ್ ಸಂಸ್ಥಾಪಿಸಿರಿ. (20:45)

3. ನಿಶ್ಚಯವಾಗಿಯೂ ನಮಾಝ್ ಅಶ್ಲೀಲ ಹಾಗೂ ದುಷ್ಕೃತ್ಯಗಳಿಂದ ತಡೆಯುತ್ತದೆ. (29:45)

ಮೊದಲ ಸೂಕ್ತದಲ್ಲಿ ನಮಾಝಿಗೆ ಸಮಯ ನಿಶ್ಚಯಿಸಲಾಗಿದೆಯೆಂದು ಹೇಳಲಾಗಿದೆ. ಅದನ್ನು ಪ್ರವಾದಿಯವರು ಆಯಾ ಸಮಯದಲ್ಲಿ ನಮಾಝ್ ಮಾಡಿ ತೋರಿಸಿದ್ದಾರೆ.

ಎರಡನೇ ಸೂಕ್ತದಲ್ಲಿ ನಮಾಝ್‌ನ ಉದ್ದೇಶವನ್ನು ಹೇಳಲಾಗಿದೆ. ಸದಾ ದೇವಸ್ಮರಣೆ ಮನಸ್ಸಿನಲ್ಲಿ ಸ್ಥಿರವಾಗಿರಲು ಅದು ಅತೀ ಅಗತ್ಯ.

ಮೂರನೇ ಸೂಕ್ತದಲ್ಲಿ ನಮಾಝ್‌ನ ಪ್ರಯೋಜನಗಳನ್ನು ಹೇಳಲಾಗಿದೆ. ಪದೇ ಪದೇ ಅಲ್ಲಾಹನ ಮುಂದೆ 'ನಿನ್ನನ್ನು ಮಾತ್ರ ಆರಾಧಿಸುತ್ತೇವೆ. ನಿನ್ನಿಂದ ಮಾತ್ರ ಸಹಾಯ ಬೇಡುತ್ತೇವೆ. ನಮಗೆ ಸನ್ಮಾರ್ಗ ತೋರಿಸು' ಎಂದು ಪ್ರತಿಜ್ಞೆ ಮಾಡುವ ಒಬ್ಬ ವ್ಯಕ್ತಿ ದುಷ್ಕರ್ಮಿಯಾಗಲು, ಅವನಿಂದ ದುಷ್ಕೃತ್ಯಗಳು ಪ್ರಕಟವಾಗಲು ಸಾಧ್ಯವಿಲ್ಲ. ನಮಾಝ್ ಅದರಿಂದ ವಿಶ್ವಾಸಿಯನ್ನು ತಡೆಯುತ್ತದೆ.

**ಕೇಳಿದಿರಾ? ಕೇಳಿ**
**ಮುಜೀಬ್**

## ಮುಂಜಿ ಮಾಡಿಸಲೇ ಬೇಕೇ?

**ಜಲೀಲುದ್ದೀನ್ ಕೊಪ್ಪಳ, ನವಲಗುಂದ**

● **ಒಬ್ಬನು ಇಸ್ಲಾಮ್ ಸ್ವೀಕರಿಸಿದ ನಂತರ ಅವನಿಗೆ ಸುನ್ನತೆ ಇಬ್ರಾಹೀಮ್ (ಖತ್ನ=ಮುಂಜಿ) ಮಾಡಿಸುವುದು ಕಡ್ಡಾಯವೇ? ಉತ್ತರಿಸಿ.**

❍ ಮುಂಜಿ ಮಾಡಿಸುವುದು ನೈರ್ಮಲ್ಯವನ್ನು ಕಾಪಾಡಲಿಕ್ಕಾಗಿರುತ್ತದೆ. ಪುರುಷ ಜನನಾಂಗದ ಹೊದಿಕೆಯ ಚರ್ಮವನ್ನು ನೀಗಿಸುವುದೇ ಮುಂಜಿಯಾಗಿದೆ. ಅದನ್ನು ನೀಗಿಸದೆ ಇದ್ದರೆ ಚರ್ಮದೊಳಗೆ ಮೂತ್ರದ ಹನಿಗಳು, ಇನ್ನಿತರ ಕಲ್ಮಶಗಳು ಸೇರಿಕೊಳ್ಳುವ ಸಾಧ್ಯತೆಯಿದೆ. ಹಾಗಿದ್ದರೆ ಅದರಿಂದ ವುಝೂ, ಸ್ನಾನಗಳಿಗೆ ತೊಂದರೆಯಾಗುತ್ತದೆ. ಹಾಗೆ ಪೂರ್ಣ ಶುದ್ಧಿಯಾಯಿತೆಂದು ಹೇಳಲು ಸಾಧ್ಯವಿಲ್ಲ. ವುಝೂ ಸ್ನಾನಗಳು ಸರಿಯಾಗದಿದ್ದರೆ ಅದು ನಮಾಝ್‌ಗೂ ಅಡ್ಡಿಯಾಗುತ್ತದೆ. ಆದ್ದರಿಂದ ಮುಂಜಿ ಮಾಡಿಸುವುದು ಉತ್ತಮವಾಗಿದೆ. ಚಿಕ್ಕ ಪ್ರಾಯದಲ್ಲಿ ಅದಕ್ಕಾಗಿಯೇ ಮುಂಜಿ ಮಾಡಿಕೊಳ್ಳಲಾಗುತ್ತದೆ.

ಆದರೆ ಮುಂಜಿ ಮಾಡುವುದೇನೂ ಕಡ್ಡಾಯವಲ್ಲ. ಮುಂಜಿ ಮಾಡಿಸದೆ ಇದ್ದರೆ ಅವನು ಇಸ್ಲಾಮಿನಿಂದ ಹೊರಗೆ ಅಥವಾ ಅವನ ಇಸ್ಲಾಮ್ ಪರಿಪೂರ್ಣವಲ್ಲ ಎಂದು ಹೇಳುವಂತಿಲ್ಲ. ಆದ್ದರಿಂದ ಒಬ್ಬನು ಇಸ್ಲಾಮ್ ಸ್ವೀಕಾರ ಮಾಡಿದ್ದರೆ ಅವನ ನೈರ್ಮಲ್ಯದ ದೃಷ್ಟಿಯಿಂದ ಮುಂಜಿ ಮಾಡಿಸುವುದು ಒಳ್ಳೆಯದು. ಶುದ್ಧಿಯ ಬಗ್ಗೆ ಒಬ್ಬನಿಗೆ ಖಾತ್ರಿಯಿದ್ದರೆ ಅಥವಾ ಅವನಿಗೆ ಆ ಬಗ್ಗೆ ಸಂದೇಹ ವಿಲ್ಲವೆಂದಾದರೆ ಮುಂಜಿ ಮಾಡಿಸದಿದ್ದರೂ ಅದು ಅವನ ಇಸ್ಲಾಮಿಗೆ ಬಾಧಕವಾಗುವುದಿಲ್ಲ.

ಮುಂಜಿ ಮಾಡಿಸುವುದಕ್ಕೆ ಹೆದರಬೇಕಾಗಿಲ್ಲ. ಇಂದು ಮುಂಜಿ ಕರ್ಮವು ಬಹಳ ಸುಲಭವಾಗಿದೆ. ಮುಂಜಿ ಇಸ್ಲಾಮಿನ ಶಿಷ್ಟಾಚಾರಗಳಲ್ಲಿ ಸೇರಿದೆ.

## ಮಯ್ಯಿತ್ ದಫನದ ತಸ್‌ಬೀತ್

**ಅಬೂ ಮಶ್‌ಹುದಾ, ಪಾಣೆಮಂಗಳೂರು**

● **ಮಯ್ಯಿತ್ ಕಬರ್‌ನಲ್ಲಿ ಇಟ್ಟು ಮರೆ ಮಾಡುವ ಸಮಯದಲ್ಲಿ ಹೇಳುವ ತಸ್‌ಬೀಹ್ ಬಗ್ಗೆ. ಇಲ್ಲಿನ ಮುದರ್ರಿಸ್‌ರವರು ತಸ್‌ಬೀಹ್ ಹೇಳಿ ಕೊಡುವಾಗ 'ಅಲ್ಲಾಹುಮ್ಮ ಜಾಫಿಲ್ ಕಬ್‌ರ ಅನ್ ಜಂಬೈ' ಎನ್ನುವ ಬದಲು ಅಲ್ಲಾಹುಮ್ಮ ಜಾಫಿಲ್ ಅರ್‌ಲ ಅನ್ ಜಂಬೈಹಿ' ಎಂದು ಹೇಳಿಕೊಡುತ್ತಾರೆ. ಇದರಲ್ಲಿ ಯಾವುದು ಸರಿ ಯಾವುದು ತಪ್ಪು ಎಂದು ಮುಜೀಬ್‌ರವರು ಆಧಾರ ಸಹಿತ ಉತ್ತರಿಸಬೇಕಾಗಿ ಅಪೇಕ್ಷೆ.**

❍ ಮಯ್ಯಿತ್ ದಫನ ಮಾಡುವ ಸಂದರ್ಭದಲ್ಲಿ ಇದೇ ರೀತಿ ಹೇಳಬೇಕೆಂದು ಸೂಚಿಸುವ ಯಾವುದೇ ಹದೀಸ್ ಇಲ್ಲ. ದಫನ ಮಾಡುವ ಸಂದರ್ಭದಲ್ಲಿ ಪ್ರವಾದಿ(ಸ) ತಮ್ಮ ಸಂಗಾತಿಗಳೊಂದಿಗೆ ಹೇಳಿದರು, "ನಿಮ್ಮ ಸಹೋದರನಿಗಾಗಿ ಪ್ರಾರ್ಥಿಸಿರಿ. ಏಕೆಂದರೆ ಈಗ ಅವರನ್ನು ಪ್ರಶ್ನಿಸಲಾಗುತ್ತದೆ." ಆದರೆ ಹೇಗೆ ಪ್ರಾರ್ಥಿಸಬೇಕೆಂದು ಪ್ರವಾದಿ(ಸ) ಕಲಿಸಿಕೊಡಲಿಲ್ಲ. ಆದ್ದರಿಂದ ದಫನ ಮಾಡುವ ಸಂದರ್ಭದಲ್ಲಿ ತಸ್‌ಬೀತ್ (ತಸ್ಬೀಹ್ ಅಲ್ಲ) ಎಂಬ ಪ್ರಾರ್ಥನೆಯನ್ನು ಸಾಮಾನ್ಯವಾಗಿ ಮಾಡಲಾಗುತ್ತದೆ. ತಸ್‌ಬೀತ್‌ನಲ್ಲಿ 'ಜಾಫಿಲ್ ಕಬ್ರಿ ಅನ್ ಜಂಬೈಹಿ' ಎಂದು ಹೇಳಲಾಗುತ್ತದೆ. ಅದರರ್ಥ 'ಅಲ್ಲಾಹನೇ ಕಬರಿನ ಎರಡು ಪಾರ್ಶ್ವಗಳನ್ನು ವಿಶಾಲಗೊಳಿಸು.' ಇನ್ನು ಯಾರಾದರೂ 'ಜಾಫಿಲ್ ಅರ್ದ್' ಎಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ಏಕೆಂದರೆ ಕಬರ್ ಇರುವುದು ಭೂಮಿಯಲ್ಲೇ ತಾನೇ? ಕಬರ್‌ಗೆ ಮಣ್ಣು ಹಾಕುವಾಗ ಕುರ್‌ಆನಿನ ಒಂದು ಆಯತ್ ಪಠಿಸಲಾಗುತ್ತದೆ. "ಮಿನ್‌ಹಾ ಖಲಕ್‌ನಾಕುಮ್..." ನಿಮ್ಮನ್ನು ಇದರಿಂದ (ಈ ಮಣ್ಣಿನಿಂದ) ಸೃಷ್ಟಿಸಲಾಗಿದೆ. ಅದಕ್ಕೇ ಮರಳಿಸಲಾಗುತ್ತದೆ ಮತ್ತು ಅದರಿಂದಲೇ ಪುನಃ ಎಬ್ಬಿಸಲಾಗುತ್ತದೆ." ಇಲ್ಲಿ 'ಮಣ್ಣಿಗೆ ಮರಳಿಸಲಾಗುತ್ತದೆ' ಎಂದು ಹೇಳಲಾಗಿದೆಯಷ್ಟೆ. ಮಣ್ಣೆಂದರೆ ಭೂಮಿಯೆಂದರ್ಥವಲ್ಲವೇ? ಆದ್ದರಿಂದ 'ಜಾಫಿಲ್ ಅರ್ದ್' ಎಂದರೆ ತಪ್ಪಾಗದು ಎಂದು 'ಮುಜೀಬ್'ನ ಅಭಿಪ್ರಾಯ. ಪ್ರವಾದಿವರ್ಯರಿಂದ(ಸ) ಅಥವಾ ಸಹಾಬಿಗಳಿಂದ ಆ ಸಂದರ್ಭದಲ್ಲಿ ಪಠಿಸುವ ತಸ್ಬೀಹ್ ಆಗಲಿ, ತಸ್‌ಬೀತ್‌ನ ಪದಗಳಾಗಲಿ ಉದ್ಧರಿಸಲಾಗಿಲ್ಲ.

# ಮೌಲಾನಾ ಕಾಲಮ್

## ಅದಾನ್‌ನ ಪ್ರಾರಂಭ– 02



ಮೌಲಾನ ಯಹ್ಯಾ ತಂಙಳ್ ಮದನಿ

ಅದಾನ್‌ನಲ್ಲಿ ಪ್ರಾಮುಖ್ಯವಾದ ನಾಲ್ಕು ವಿಚಾರಗಳು ಅಡಕವಾಗಿದೆಯೆಂದು ಹಿರಿಯ ವಿದ್ವಾಂಸರುಗಳು ತಿಳಿಸಿರುವುದಾಗಿ ಇಮಾಮ್ ನವವಿ(ರ) ಉಲ್ಲೇಖಿಸಿರುತ್ತಾರೆ.

1. ಅದಾನ್ ಎಂಬುದು ಇಸ್ಲಾಮನ್ನು ಜಗತ್ತಿಗೆ ಸಾರುವ ಚಿಹ್ನೆಯಾಗಿದೆ.

2. ಕಲಿಮತುತ್ತೌಹೀದ್‌ನ ವಚನವನ್ನು ಪಸರಿಸುತ್ತದೆ.

3. ನಮಾಝ್‌ನ ಸಮಯವಾಗಿದೆಯೆಂದು ಆಹ್ವಾನ ನೀಡುವುದು. (ಶರಹ್, ಮುಸ್ಲಿಮ್)

4. ಸಾಮೂಹಿಕ ನಮಾಝ್‌ಗೆ ಪ್ರೇರೇಪಿಸಿ ಆಹ್ವಾನ ನೀಡುವುದು.

ಜಗತ್ತಿನ ಅಷ್ಟ ದಿಕ್ಕುಗಳಿಂದಲೂ ಕೇಳಿಬರುತ್ತಿರುವ ಈ ಅದಾನ್‌ನ ವಚನಗಳ ಕುರಿತು ಅಧ್ಯಯನ ನಡೆಸಿದಾಗ ಇದರ ಪ್ರಾಧಾನ್ಯತೆಯ ಕುರಿತು ಇಮಾಮ್ ಬುಖಾರಿಯವರಿಂದ ಮೊದಲ್ಗೊಂಡು ಎಲ್ಲಾ ಹದೀಸ್ ವರದಿಗಾರರು ಈ ಕುರಿತು ಸವಿವರವಾಗಿ ವರದಿ ಮಾಡಿರುವುದನ್ನು ಕಾಣಬಹುದು. ಆ ಬಗ್ಗೆ ವಿವರಿಸುವ ಮೊದಲು ಜಿಬ್ರೀಲ್(ಅ) ಕಲಿಸಿದ ಅದಾನ್‌ನ ಕುರಿತು ಸ್ವಲ್ಪ ವಿವರಿಸುತ್ತೇನೆ.

ಮೊದಲನೆಯದಾಗಿ ನಾವು ನಾಲ್ಕು ಸಲ ಅಲ್ಲಾಹು ಅಕ್ಬರ್ (ಅಲ್ಲಾಹನು ಮಹಾನನು) ಅಂದರೆ ತನ್ನ ಸೊತ್ತು, ವಿತ್ತ, ಸಂತಾನ ಇವೆಲ್ಲವುಗಳಿಗಿಂತಲೂ ದೇವನು ಉನ್ನತ ಎಂದು ತೀರ್ಮಾನಿಸಿ, ನಾವು ಕೆಲಸ ಕಾರ್ಯಗಳಲ್ಲಿ ನಿಭಿಡರಾಗಿದ್ದರೂ ಅದನ್ನು ತಕ್ಷಣ ಮೊಟಕುಗೊಳಿಸಿ ಮಸೀದಿಯತ್ತ ಧಾವಿಸಬೇಕು. (ರೋಗಿಗಳು ಮತ್ತಿತರ ಅನುಮತಿಸಲ್ಪಟ್ಟ ಕಾರಣಗಳನ್ನು ಹೊಂದಿದವರ ಹೊರತು)

ಅಶ್ಹದು ಅಲ್ಲಾ ಇಲಾಹ ಇಲ್ಲಲ್ಲಾಹ್ (ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲವೆಂದು ನಾನು ಸಾಕ್ಷ್ಯ ವಹಿಸುತ್ತೇನೆ) ಎಂದು ಎರಡು ಬಾರಿ ಹೇಳಿದಾಗ ನಿಜವಾಗಿಯೂ ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲವೆಂದು ಸಾಕ್ಷ್ಯ ವಹಿಸುವುದಾಗಿದೆ. ಅಂದರೆ ನನ್ನ ಜೀವನದ ಸಕಲ ರಂಗವೂ ದೇವನ ಅಧೀನದಲ್ಲಿದೆಯೆಂದು ಮನಃಪೂರ್ವಕ ಒಪ್ಪಿಕೊಳ್ಳುವುದು. ಜೀವನದ ಎಲ್ಲ ರಂಗಗಳಲ್ಲೂ ಅದು ಪ್ರತಿಫಲಿಸುತ್ತಿರಬೇಕೇ ಹೊರತು ಬಾಯಿ ಮಾತಿನಲ್ಲಿ ಹೇಳಿದರೆ ಸಾಲದು.

ಅಶ್ಹದು ಅನ್ನ ಮುಹಮ್ಮದರ್‌ರಸೂಲುಲ್ಲಾಹ್ (ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರೆಂದು ನಾನು ಸಾಕ್ಷ್ಯವಹಿಸುತ್ತೇನೆ) ಇಲ್ಲಿ ಕೂಡಾ ಪ್ರವಾದಿವರ್ಯರ(ಸ) ಚರ್ಯೆಯನ್ನು ಜೀವನದಲ್ಲಿ ಅಳವಡಿಸುತ್ತೇನೆಂದು ಸಾಕ್ಷ್ಯ ವಹಿಸುವುದಾಗಿದೆ. ಇಲ್ಲಿಯ ತನಕ ಮುಅದ್ದಿನ್ ಅದಾನ್‌ನಲ್ಲಿ ಏನು ಹೇಳುತ್ತಾರೋ ಅದೇ ರೀತಿ ನಾವು ಹೇಳುತ್ತಾ ಅದಾನ್‌ಗೆ ಉತ್ತರಿಸಬೇಕು ಎಂದು ಪ್ರವಾದಿವರ್ಯರು ಕಲಿಸಿರುತ್ತಾರೆ. ಅದೇ ರೀತಿ ಹಯ್ಯ ಅಲಲ್ ಸ್ವಲಾತ್ (ಬನ್ನಿ ನಮಾಝ್‌ಗಾಗಿ) ಎಂದು ಎರಡು ಸಲ ಹೇಳಿದಾಗ ಮತ್ತು ಹಯ್ಯ ಅಲಲ್ ಫಲಾಹ್ (ಬನ್ನಿ ವಿಜಯದ ಕಡೆಗೆ) ಎಂದು ಎರಡು ಸಲ ಹೇಳಿದಾಗ ಲಾಹೌಲ ವಲಾಕುವ್ವತ ಇಲ್ಲಾ ಬಿಲ್ಲಾಹಿಲ್ ಅಲಿಯ್ಯುಲ್ ಅಲೀಮ್ (ಅತ್ಯುನ್ನತನೂ ಮಹಾನನೂ ಆದ ಅಲ್ಲಾಹನ ಹೊರತು ಇನ್ನಾರಲ್ಲಿಯೂ ಶಕ್ತಿ ಸಾಮರ್ಥ್ಯಗಳಿಲ್ಲ) ಎಂದು ಉತ್ತರಿಸಬೇಕು. ನಂತರ ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಲಾಇಲಾಹ ಇಲ್ಲಲ್ಲಾಹ್ ಎನ್ನಬೇಕು.

**ನಿರೂಪಣೆ: ಸಲೀಮ್ ಬೋಳಂಗಡಿ**

ಪ್ರವಾದಿವರ್ಯರು ತಮ್ಮ ವಚನಗಳಲ್ಲಿ ಉದ್ಧರಿಸಿರುವಂತೆ ಅದಾನ್ ನೀಡುವಾತನು ತನ್ನ ತೋರು ಬೆರಳನ್ನು ಕಿವಿಯಲ್ಲಿಟ್ಟು ಉಚ್ಚ ಸ್ವರದಲ್ಲಿ ನೀಡುವುದು ಉತ್ತಮವಾಗಿದೆ. ಕಿವಿಯಲ್ಲಿ ತೋರು ಬೆರಳನ್ನಿಡುವ ಕಾರಣದಿಂದ ಸಾಧ್ಯವಾದಷ್ಟು ಜೋರಾಗಿ ಶಬ್ದವು ಹೊರಡುತ್ತದೆ.

ಕೆಲವು ಮುಅದ್ದಿನ್‌ಗಳು ಅದಾನ್ ನೀಡುವಾಗ ಉಚ್ಚಸ್ವರದಲ್ಲಿ ಅಲ್ಲಾಹು ಅಕ್ಬರ್ ಎಂದು ನಾಲ್ಕು ಸಲ ಹೇಳಿದ ಬಳಿಕ ಮೆಲುದನಿಯಲ್ಲಿ ಅಶ್ಹದು ಅಲ್ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿದ ನಂತರ ಉಚ್ಚಸ್ವರದಲ್ಲಿ ಅದನ್ನೇ ಪುನರಾವರ್ತಿಸುವುದನ್ನು ನೋಡುತ್ತೇವೆ. ಈ ವಿಚಾರದಲ್ಲಿ ಹದೀಸ್ ವರದಿಗಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಫಿಕ್‌ಹ್‌ನಲ್ಲಿ ಇದನ್ನು 'ತರ್‌ಜೀಅ್' ಎನ್ನುತ್ತಾರೆ. ಹೀಗೆ ಹೇಳಲೂಬಹುದು. ಹೇಳದೇ ಇದ್ದರೆ ಏನೂ ತೊಂದರೆಯಾಗದು. ಫಝ್ರ್‌ನ ಅದಾನ್‌ನಲ್ಲಿ 'ಅಸ್ಸಲಾತು ಖೈರುಮ್ಮಿನನ್ನೌಮ್' (ನಮಾಝ್ ನಿದ್ರೆಗಿಂತ ಶ್ರೇಷ್ಠ) ಎಂಬ ವಾಕ್ಯವನ್ನು ಸೇರಿಸಬೇಕು. ಅದಕ್ಕೆ ಉತ್ತರವಾಗಿ ಅಬೂಹುರೈರಾ(ರ) ವರದಿಯಂತೆ ಒಳಿತಿನೆಡೆಗೆ ಬನ್ನಿ ಎಂದು ಉತ್ತರಿಸುತ್ತಿದ್ದರು. ನಂತರ ಪ್ರವಾದಿವರ್ಯರು(ಸ) ಅದನ್ನು ಬದಲಾಯಿಸಿ ಸದಕ್ತ ವಬರಿರ್ತ (ನೀವು ಸತ್ಯ ಹೇಳಿದಿರಿ ಒಳಿತು ನುಡಿದಿರಿ) ಎಂದು ಉತ್ತರಿಸಲು ಕಲಿಸಿದರು.

## ಕುರ್‌ಆನ್ ಅಧ್ಯಯನ 537

## ಅಧ್ಯಾಯ: 4

# ಅನ್ನಿಸಾ

### ವಚನ: 83

ವಇದಾ ಜಾಅಹುಮ್= ಅವರಿಗೆ ಬಂದರೆ (ಲಭಿಸಿದರೆ) ಅಮ್ರುನ್= ಒಂದು ವಿಷಯ (ಏನಾದರೂ ಸುದ್ದಿ), ಮಿನಲ್ ಅಮ್ನಿ= ಶಾಂತಿ (ಆಶಾದಾಯಕ), ಅವಿಲ್ ಕೌಫಿ= ಅಥವಾ ಭಯದ (ಕಳವಳಕಾರಿಯಾದ), ಅದಾವೂಬಿಹಿ= ಅವರು ಅದನ್ನು ಪ್ರಚಾರ ಮಾಡುತ್ತಾರೆ (ಡಂಗುರ ಸಾರುತ್ತಾರೆ), ವಲವ್ ರದ್ದೂಹು= ಅವರು ಅದನ್ನು ತಲಪಿಸುತ್ತಿದ್ದರೆ, ಇಲರ್‍ರಸೂಲಿ= ಸಂದೇಶವಾಹಕರಿಗೆ, ವಇಲಾ ಉಲಿಲ್ ಅಮ್ರಿ= ಅಥವಾ ಮುಂದಾಳುಗಳಿಗೆ (ಹೊಣೆಗಾರರಿಗೆ), ಮಿನ್‌ಹುಮ್= ಅವರಲ್ಲಿರುವ (ಸಮುದಾಯದ), ಲ ಅಲಿಮಹು= ಅವರು (ನಿಜಸ್ಥಿತಿ) ತಿಳಿಯುತ್ತಿದ್ದರು. ಅಲ್ಲದೀನ ಯಸ್ತಂಬಿತೂನಹು= ವಿಷಯವನ್ನು ಗ್ರಹಿಸಬಲ್ಲವರು, ಮಿನ್‌ಹುಮ್= ಅವರಲ್ಲಿರುವ, ವಲವ್‌ಲಾ= ಇಲ್ಲದಿರುತ್ತಿದ್ದರೆ ಫದ್ಲುಲ್ಲಾಹಿ= ಅಲ್ಲಾಹನ ಅನುಗ್ರಹ, ಅಲೈಕುಮ್= ನಿಮ್ಮ ಮೇಲೆ, ವರಹ್ಮತುಹು= ಆತನ ಕರುಣೆಯೂ, ಲತ್ತಬಅ್‌ತುಮ್= ನಿಶ್ಚಯವಾಗಿ ನೀವು ಅನುಗಮಿಸುವಿರಿ, ಅಶ್ಶೈತಾನ= ಶೈತಾನನನ್ನು, ಇಲ್ಲಾ ಕಲೀಲನ್= ಸ್ವಲ್ಪ ಮಂದಿಯ ಹೊರತು,

**83: ಆಶಾದಾಯಕ ಅಥವಾ ಕಳವಳಕಾರಿಯಾದ ಏನಾದರೂ ಸುದ್ದಿ ದೊರೆತರೆ ಈ ಮಂದಿ ಅದನ್ನು ಡಂಗುರ ಸಾರುತ್ತಾರೆ. ಅವರು ಅದನ್ನು ದೇವಸಂದೇಶವಾಹಕ ಅಥವಾ ಸಮುದಾಯದ ಹೊಣೆಗಾರರಿಗೆ ತಿಳಿಸುತ್ತಿದ್ದರೆ ವಿಷಯಗಳನ್ನು ಗ್ರಹಿಸಬಲ್ಲವರು ನಿಜಸ್ಥಿತಿಯನ್ನು ಅರಿತುಕೊಳ್ಳುತ್ತಿದ್ದರು. ಅಲ್ಲಾಹನ ಅನುಗ್ರಹ ಮತ್ತು ಕರುಣೆ ನಿಮ್ಮ ಮೇಲಿರುತ್ತಿದ್ದರೆ ನಿಮ್ಮ ಪೈಕಿ ಕೆಲವೇ ಮಂದಿಯ ಹೊರತು ಎಲ್ಲರೂ ಶೈತಾನನನ್ನು ಅನುಗಮಿಸುತ್ತಿದ್ದರು.**

83: ಜನರಲ್ಲಿ ಸಾಮಾನ್ಯವಾಗಿ ಗೋಚರಿಸುವಂಥ ಒಂದು ದುರ್ಗುಣದ ಬಗ್ಗೆ ಈ ವಚನದಲ್ಲಿ ಎಚ್ಚರಿಸಲಾಗಿದೆ. ಊಹಾಪೋಹ ಮತ್ತು ವದಂತಿಯ ಪ್ರಚಾರವೇ ಆ ದುರ್ಗುಣ. ಸಮಾಜಕ್ಕೆ ಆಸಕ್ತಿಯಿರುವ ಒಳ್ಳೆಯ ಅಥವಾ ಕೆಟ್ಟ ಸುದ್ದಿಗಳು ಕಾಳ್ಗಿಚ್ಚಿನಂತೆ ಹಬ್ಬುತ್ತದೆ. ಬೆಂಕಿಯು ವ್ಯಾಪಿಸಿದಂತೆಯೇ ಅದರ ಜ್ವಾಲೆಗಳು ಹೆಚ್ಚು ಭುಗಿಲೆದ್ದು ಮಾರಕವಾಗುತ್ತದೆ. ವದಂತಿಗಳೂ ಅಷ್ಟೇ. ಒಂದು ಸಣ್ಣ ಸುದ್ದಿಯನ್ನು ಆಲಿಸಿದವರು ತಮ್ಮ ವತಿಯಿಂದ ಅದಕ್ಕೆ ಊಹೆಗಳನ್ನು ಸೇರಿಸಿ ಮತ್ತಷ್ಟು ದಿಗ್ಭ್ರಾಂತಕಾರಿಯಾಗಿ ಮಾಡುತ್ತಾರೆ. ಅದು ಶಾಂತಿ ನೆಮ್ಮದಿ ನೆಲೆಸಿರುವ ಸಾಮಾಜಿಕ ವಾತಾವರಣವನ್ನೂ ಕೆಡಿಸುತ್ತದೆ.

ಸಮಾಜದಲ್ಲಿ ಅಶಾಂತಿ ಮತ್ತು ಸಂಘರ್ಷವಿರುವ ಸಂದರ್ಭಗಳಲ್ಲಿಯೂ ಸಮಾಜಕ್ಕೆ ಹೊರಗಿನಿಂದ ಆಕ್ರಮಣದ ಬೆದರಿಕೆಯಿರುವ ಯುದ್ಧ ಪರಿಸ್ಥಿತಿಗಳಲ್ಲಿಯೂ ಜನರ ದುರ್ನಡತೆಯು ಹೆಚ್ಚು ಪೂರಕ ಮತ್ತು ಅಪಾಯಕಾರಿ ಯಾಗುತ್ತದೆ. ಮದೀನದಲ್ಲಿ ಮುಸ್ಲಿಮರು ಹೊರಗಿನ ಆಕ್ರಮಣಗಳನ್ನು ಎದುರಿಸಲು ಸಜ್ಜಾಗುತ್ತಿದ್ದ ಸಂದರ್ಭದಲ್ಲಿ ಈ ವಚನ ಅವತೀರ್ಣಗೊಂಡಿತ್ತು. ಅಂದು ದುರ್ಬಲ ಹಾಗೂ ಕಪಟ ವಿಶ್ವಾಸಿಗಳು ಊಹಾಪೋಹಗಳ ಪ್ರಚಾರದಲ್ಲಿ ಮುಂಚೂಣಿಯಲ್ಲಿದ್ದರು. ಆದರೆ ಯುದ್ಧವೇಳೆಯಲ್ಲಿ ಆತಂಕಕಾರಿ ಸುದ್ದಿಗಳನ್ನು ಪ್ರಚಾರ ಮಾಡುವ ಕಪಟ ವಿಶ್ವಾಸಿಗಳನ್ನು ಮಾತ್ರ ಈ ವಚನ ಸೂಚಿಸಿದೆಯೆಂಬ ಭಾವನೆ ಸರಿಯಲ್ಲ. ಇಲ್ಲಿ ಊಹಾಪೋಹ ಮತ್ತು ವದಂತಿಗಳನ್ನು ಪ್ರಚಾರ ಮಾಡುವುದನ್ನು ಸಾರ್ವತ್ರಿಕವಾಗಿ ನಿಷೇಧಿಸಲಾಗಿದೆ.

ಪ್ರವಾದಿಯವರು ತಮ್ಮ ಎಲ್ಲ ಪತ್ನಿಯರಿಗೂ ವಿವಾಹ ವಿಚ್ಛೇದನ ನೀಡಿರುವರೆಂಬ ಸುಳ್ಳು ಸುದ್ದಿಯು ಮದೀನದಲ್ಲಿ ಪಸರಿಸಿದ ಸಂದರ್ಭದಲ್ಲಿ ಈ ವಚನ ಅವತೀರ್ಣವಾಗಿದೆಯೆಂದು ಮುಸ್ಲಿಮ್ ಉದ್ಧರಿಸಿದ ಒಂದು ವರದಿಯಲ್ಲಿ ಹೇಳಲಾಗಿದೆ. ಇದರಲ್ಲಿ ಪ್ರವಾದಿಯವರ ವಿರುದ್ಧ ಒಳಸಂಚು ನಡೆಸಿದ ಕಪಟ ವಿಶ್ವಾಸಿಗಳನ್ನು ಸೂಚಿಸಲಾಗಿದೆಯೆಂದು ಇಬ್ನು ಜರೀರ್ ಅತ್ತಬ್ರಿಯವರ ಅಭಿಪ್ರಾಯ. ಇಮಾಮ್ ಸುಯೂತಿಯವರು ಪ್ರಸ್ತಾಪಿಸಿರುವಂತೆ, ಮುಸ್ಲಿಮರನ್ನು ದಾರಿ ತಪ್ಪಿಸುವ ದುರುದ್ದೇಶದಿಂದ, ಆಲಿಸಿದ ಎಲ್ಲಾ ಸುದ್ದಿ



ಗಳನ್ನೂ ನಿಜಸ್ಥಿತಿಯನ್ನು ಅರಿಯದೆ ಪ್ರಚಾರ ಮಾಡುತ್ತಿದ್ದ ದುರ್ಬಲ ವಿಶ್ವಾಸಿಗಳು ಮತ್ತು ಪಾಮರರು ಮುಂತಾದ ಎಲ್ಲರನ್ನೂ ಈ ವಚನ ಒಳಗೊಂಡಿದೆ. ಇಮಾಮ್ ಸಮಕ್ಷರಿಯವರು ತಿಳುವಳಿಕೆ ಅಥವಾ ಪರಿಸ್ಥಿತಿಯ ಪ್ರಜ್ಞೆಯಿಲ್ಲದ ಪಾಮರರಾದ ಮುಸ್ಲಿಮರನ್ನುದ್ದೇಶಿಸಲಾಗಿದೆಯೆಂದು ಹೇಳಿದ್ದಾರೆ.

ಈ ವಚನದ ಅವತೀರ್ಣ ಕಾಲದಲ್ಲಿ ಮುನಾಫಿಕರು ವದಂತಿಗಳನ್ನು ಹಬ್ಬಿಸಿ ಜನಸಾಮಾನ್ಯರನ್ನು ಭಯಭೀತಿಗೊಳಿಸಲು ತೀವ್ರವಾಗಿ ಪ್ರಯತ್ನಿಸುತ್ತಿದ್ದರೆಂಬುದು ನಿರ್ವಿವಾದ. ಅಂದು ಮದೀನದ ಸುತ್ತಲೂ ಇಸ್ಲಾಮನ್ನು ವಿರೋಧಿಸುವ ಅನೇಕ ಗೋತ್ರಗಳಿದ್ದುವು. ಅವುಗಳ ಬಗ್ಗೆ ಮುನಾಫಿಕರು ಊಹಾಪೋಹ ಮತ್ತು ಅನುಮಾನಗಳ ಆಧಾರದಲ್ಲಿ ಪ್ರಚಾರ ಮಾಡುತ್ತಿದ್ದರು. "ಇದೋ ಈ ಗೋತ್ರವು ಮದೀನವನ್ನು ಆಕ್ರಮಿಸುವ ತಯಾರಿ ನಡೆಸುತ್ತಿದೆ. ಇನ್ನೊಂದು ಗೋತ್ರವು ಈಗಾಗಲೇ ಹೊರಟಿದೆ. ಅವರಲ್ಲಿ ಇಂತಿಷ್ಟು ಅಶ್ವಪಡೆಯಿದೆ. ಇಂತಿಷ್ಟು ಒಂಟೆಗಳಿವೆ." ಇತರ ಕೆಲವರು ಹೀಗೆ ಪ್ರಚಾರ ಮಾಡುತ್ತಿದ್ದರು– "ಇದೋ ಇಂತಿಂಥ ಗೋತ್ರವು ಇಸ್ಲಾಮ್ ಸ್ವೀಕರಿಸಲು ಸಿದ್ಧವಾಗಿದೆ. ಇನ್ನೊಂದು ಗೋತ್ರವು ಈಗಾಗಲೇ ಇಸ್ಲಾಮ್ ಸ್ವೀಕರಿಸಿದೆ. ಅವರು ಪ್ರವಾದಿಯವರ ಬಳಿಗೆ ಪ್ರತಿನಿಧಿ ತಂಡವನ್ನು ಕಳುಹಿಸಿದ್ದಾರೆ..." ಈ ಎರಡು ರೀತಿಯ ಸುದ್ದಿಯೂ ಅಪಾಯಕಾರಿಯಾಗಿತ್ತು. ಇದು ಒಂದು ವಿಭಾಗದಲ್ಲಿ ಭಯಭೀತಿ ಮತ್ತು ಅನಿಶ್ಚಿತತೆ ಹುಟ್ಟಿಸಿದರೆ ಇನ್ನೊಂದು ವಿಭಾಗದಲ್ಲಿ ಅವಾಸ್ತವಿಕ ಸುರಕ್ಷಿತ ಪ್ರಜ್ಞೆ ಮತ್ತು ನಿರ್ಲಕ್ಷ್ಯವನ್ನು ಮೂಡಿಸುತ್ತಿತ್ತು. ಅದು ದೇಶದ ಭದ್ರತೆಯನ್ನು ಶಿಥಿಲಗೊಳಿಸುತ್ತಿತ್ತು. ಸುದ್ದಿಗಳ ಈ ಆಟವು ಆಧುನಿಕ ಕಾಲದಲ್ಲಿಯೂ ಪ್ರಮುಖ ರಣನೀತಿಯಾಗಿ ಮಾರ್ಪಟ್ಟಿದೆ. ಅದನ್ನು ಮಾಧ್ಯಮ ಯುದ್ಧವೆಂದು ಕರೆಯಲಾಗುತ್ತದೆ. ಏಕಪಕ್ಷೀಯ ಮತ್ತು ಸುಳ್ಳು ಸುದ್ದಿಗಳನ್ನು ಹಬ್ಬಿಸಿ ವಿರೋಧಿ ಬಣದಲ್ಲಿ ಭೀತಿ ಮತ್ತು ನಿರಾಶೆ ಹಾಗೂ ನಿಷ್ಪಕ್ಷ ವಿಭಾಗಗಳಲ್ಲಿ ಅವರ ಬಗ್ಗೆ ತಪ್ಪು ತಿಳುವಳಿಕೆ ಮೂಡಿಸುವುದು ಇತ್ಯಾದಿ. ಕಳೆದ ಶತಮಾನಗಳಲ್ಲಿ ನಡೆದ ಜಾಗತಿಕ ಯುದ್ಧಗಳಲ್ಲಿಯೂ ಈ ಶತಮಾನದಲ್ಲಿ ಅಮೇರಿಕ ನಡೆಸುತ್ತಿರುವ ಅತಿಕ್ರಮಣ ಯುದ್ಧಗಳಲ್ಲಿಯೂ ಈ ತಂತ್ರವನ್ನು ಬಹಳ ಸಮರ್ಥವಾಗಿ ಪ್ರಯೋಗಿಸಲಾಗಿದೆ. ಮಾಧ್ಯಮ ಯುದ್ಧದ ಬಲಿಪಶುಗಳಾಗಬೇಡಿರೆಂದು ಅಲ್ಲಾಹನು ಮುಸ್ಲಿಮರಿಗೆ ಉಪದೇಶಿಸಿದ್ದಾನೆ.

ನೀವು ಸನ್ಮಾರ್ಗವನ್ನು ಮೆಚ್ಚಿದರೆ
ಇತರರಿಗೂ ತಿಳಿಸಿ,
ಮೆಚ್ಚದಿದ್ದರೆ ನಮಗೆ ತಿಳಿಸಿ.

# ಸಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

## ಹಲ್ಲುಜ್ಜುವುದು

472. ಅನಸ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ನಾನು ಹಲ್ಲುಜ್ಜಲು ತಾಕೀತು ಮಾಡಿದ್ದೇನೆ.

## ಜುಮಾ ದಿವಸದ ಫಜ್ರ್ ನಮಾಝ್

473. ಅಬೂಹುರೈರಾ ಹೇಳುತ್ತಾರೆ- ಪ್ರವಾದಿಯವರು ಜುಮಾ ದಿವಸ ಫಜ್ರ್ ನಮಾಝ್‌ನಲ್ಲಿ ಅಲಿಫ್ ಲಾಮ್ಮೀಮ್ ತನ್ಝೀಲ್(ಅಸ್ಸಜ್‌ದ: ಅಧ್ಯಾಯ) ಮತ್ತು ಹಲ್‌ಅತಾ ಅಲಲ್ ಇನ್ಸಾನಿ(ಅದ್ದಹ್ರ್ ಅಧ್ಯಾಯ) ಓದುತ್ತಿದ್ದರು.

## ವಿಚಾರಿಸಲ್ಪಡುವವರು

474. ಇಬ್ನು ಉಮರ್ ಹೇಳುತ್ತಾರೆ- ಪ್ರವಾದಿವರ್ಯರು ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ. ನಿಮ್ಮ ಪೈಕಿ ಪ್ರತಿಯೊಬ್ಬನೂ ಮೇಲ್ವಿಚಾರಕನಾಗಿದ್ದಾನೆ. ಪ್ರತಿಯೊಬ್ಬನಲ್ಲೂ ಅವನ ಅಧೀನದಲ್ಲಿರುವವರ ಕುರಿತು ಪ್ರಶ್ನಿಸಲಾಗುವುದು. ಇಮಾಮ್(ಖಲೀಫ) ಮೇಲ್ವಿಚಾರಕನಾಗಿದ್ದಾನೆ. ಅವನೊಂದಿಗೆ ಅವನ ಪ್ರಜೆಗಳ ಕುರಿತು ವಿಚಾರಿಸಲಾಗುವುದು. ಪುರುಷನು ತನ್ನ ಮನೆಯ ಮೇಲ್ವಿಚಾರಕನಾಗಿದ್ದಾನೆ. ಅವನೊಂದಿಗೆ ಅವರ ಅಧೀನದಲ್ಲಿರುವವರ ಕುರಿತು ಪ್ರಶ್ನಿಸಲಾಗುವುದು. ಸ್ತ್ರೀಯು ತನ್ನ ಪತಿಯ ಮನೆಯ ಮೇಲ್ವಿಚಾರಕಿಯಾಗಿರುತ್ತಾಳೆ. ಅವಳೊಂದಿಗೆ ಅದರ ಕುರಿತು ವಿಚಾರಿಸಲಾಗುವುದು. ಸೇವಕನು ತನ್ನ ಯಜಮಾನನ ಸೊತ್ತಿನ ಮೇಲ್ವಿಚಾರಕನಾಗಿದ್ದಾನೆ. ಅವನೊಂದಿಗೆ ಅವನ ಅಧೀನದಲ್ಲಿರುವವರ ಕುರಿತು ಪ್ರಶ್ನಿಸಲಾಗುವುದು.

ವರದಿಗಾರ ಹೇಳುತ್ತಾರೆ- ಬಹುಶಃ ಪ್ರವಾದಿಯವರು ಮನುಷ್ಯನು ತನ್ನ ತಂದೆಯ ಸೊತ್ತಿನ ಮೇಲ್ವಿಚಾರಕನಾಗಿದ್ದಾನೆ. ಅವನೊಂದಿಗೆ ಅದರ ಕುರಿತು ಪ್ರಶ್ನಿಸಲಾಗುವುದು ಮತ್ತು ನಿಮ್ಮ ಪೈಕಿ ಪ್ರತಿಯೊಬ್ಬನೂ ಮೇಲ್ವಿಚಾರಕನಾಗಿದ್ದಾನೆ. ಅವನೊಂದಿಗೆ ಅವನ ಅಧೀನದಲ್ಲಿರುವವರ ಕುರಿತು ವಿಚಾರಿಸಲಾಗುವುದು ಎಂದು ಹೇಳಿದ್ದಾರೆಂದು ನಾನು ಭಾವಿಸಿದ್ದೇನೆ.

## ಕಡ್ಡಾಯ ಕರ್ಮ

475. ಅಬೂಹುರೈರಾ ವರದಿ ಮಾಡಿದ, ನಾವು ಇಲ್ಲಿ ಹಿಂದೆ ಇದ್ದೇವೆ, ಪರಲೋಕದಲ್ಲಿ ಎಲ್ಲರಿಗಿಂತಲೂ ಮುಂದೆ ಇರುವವು ಎಂಬ ಹದೀಸ್ ಈಗಾಗಲೇ ಗತಿಸಿದೆ. ಇಲ್ಲಿ ಇಷ್ಟು ಹೆಚ್ಚುವರಿಯಾಗಿದೆ. ಪ್ರವಾದಿ(ಸ) ಹೇಳಿದರು- ವಾರದಲ್ಲೊಮ್ಮೆ ಸ್ನಾನ ಮಾಡುವುದು ಮತ್ತು ತಲೆ ಮತ್ತು ಶರೀರವನ್ನು ತೊಳೆಯುವುದು ಪ್ರತಿಯೊಬ್ಬ ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ.

476. ಆಯಿಶಾ ಹೇಳುತ್ತಾರೆ- ಜುಮಾ ದಿವಸ ಜನರು ಒಬ್ಬರ ನಂತರ ಒಬ್ಬರಂತೆ ತಂತಮ್ಮ ಮನೆಗಳಿಂದ, ಮದೀನದ ಪರಿಸರಗಳಿಂದ ಬರುತ್ತಿದ್ದರು. ಧೂಳು ತುಂಬಿದ ದಾರಿಗಳಿಂದ ಬರುತ್ತಿದ್ದುದರಿಂದ ಅವರಿಗೆ ಧೂಳು ಮುಕ್ಕಿರುತ್ತಿತ್ತು ಮತ್ತು ಬೆವರು ಸುರಿಯುತ್ತಿತ್ತು. ಒಮ್ಮೆ ಪ್ರವಾದಿ ಯವರ ಬಳಿಗೆ ಒಬ್ಬ ವ್ಯಕ್ತಿ ಬಂದ. ಆಗ ಪ್ರವಾದಿಯವರು ನನ್ನ ಮನೆಯಲ್ಲಿದ್ದರು. ಪ್ರವಾದಿ(ಸ) ಹೇಳಿದರು- ಅಕಟಾ! ನೀವು ಇಂದಾದರೂ ಚೆನ್ನಾಗಿ ಶುದ್ಧಿಯಾಗಿರುತ್ತಿದ್ದರೆ!

477. ಆಯಿಶಾ ಹೇಳುತ್ತಾರೆ- ಈ ಜನರು ಶ್ರಮ ಜೀವಿಗಳಾಗಿದ್ದರು. ಜುಮಾ ದಿವಸ ಕೂಡಾ ಅವರು ಅದೇ ಸ್ಥಿತಿಯಲ್ಲಿರುತ್ತಿದ್ದರು. ಅವರೊಂದಿಗೆ ಹೇಳಲಾಗುತ್ತಿತ್ತು. ಅಕಟಾ! ನೀವು ಸ್ನಾನ ಮಾಡುತ್ತಿದ್ದರೆ!

## ಜುಮಾ ನಮಾಝ್

478. ಅನಸ್ ಬಿನ್ ಮಾಲಿಕ್ ಹೇಳುತ್ತಾರೆ- ಪ್ರವಾದಿ(ಸ) ಜುಮಾ ನಮಾಝನ್ನು ಸೂರ್ಯ ಇಳಿಮುಖವಾದ ನಂತರ ನಿರ್ವಹಿಸುತ್ತಿದ್ದರು.

479. ಅನಸ್(ರ) ಹೇಳುತ್ತಾರೆ- ಚಳಿ ಹೆಚ್ಚಿರುತ್ತಿದ್ದಾಗ ಪ್ರವಾದಿವರ್ಯರು (ಝುಹರ್) ನಮಾಝನ್ನು ಬೇಗ ನಿರ್ವಹಿಸುತ್ತಿದ್ದರು. ಸೆಕೆ ಹೆಚ್ಚಿರುವಾಗ ತಡವಾಗಿ ನಿರ್ವಹಿಸುತ್ತಿದ್ದರು. ಅಂದರೆ ಜುಮಾ ನಮಾಝ್.

480. ಅಬೂ ಅಬಸ್ ಹೇಳುತ್ತಾರೆ- ನಾನು ಜುಮಾ ನಮಾಝ್‌ಗೆ ಹೋಗುತ್ತಿದ್ದೆ. ಪ್ರವಾದಿಯವರು ಹೀಗೆ ಹೇಳುತ್ತಿದ್ದುದನ್ನು ನಾನು ಕೇಳಿದ- ಯಾರ ಪಾದಗಳು ಅಲ್ಲಾಹನ ಮಾರ್ಗದಲ್ಲಿ ಧೂಳಿನಿಂದಾವೃತವಾಗಿರುವುದೋ ಅವನಿಗೆ ಅಲ್ಲಾಹನು ನರಕವನ್ನು ಹರಾಮ್(ನಿಷಿದ್ಧ)ಗೊಳಿಸಿರುವನು.

481. ಇಬ್ನು ಉಮರ್ ಹೇಳುತ್ತಾರೆ- ಒಬ್ಬನು ತನ್ನ ಸಹೋದರನನ್ನು ಕುಳಿತಲ್ಲಿಂದ ಎಬ್ಬಿಸಿ ಅಲ್ಲಿ ಕುಳಿತುಕೊಳ್ಳುವುದನ್ನು ಪ್ರವಾದಿ(ಸ) ತಡೆದಿದ್ದಾರೆ. ಈ ಆದೇಶ ಕೇವಲ ಜುಮಾಕ್ಕೆ ಮಾತ್ರವೇ ಎಂದು ಕೇಳಲಾದಾಗ ಪ್ರವಾದಿ(ಸ) ಇದು ಜುಮಾಕ್ಕೂ ಜುಮಾ ಅಲ್ಲದಕ್ಕೂ ಅನ್ವಯವಾಗುತ್ತದೆ ಎಂದುತ್ತರಿಸಿದರು.

## ಸಿದ್ದೀಕುಲ್ ಅಕ್ಬರ್ - 31

ಇ.ಎನ್. ಇಬ್ರಾಹೀಮ್



# 'ಖಡ್ಗ'ದ ನಿಯಂತ್ರಣ

ಈಗ ಉಮರ್‌ರಿಗೆ ಅಬೂಕತಾದರು ಹೇಳುತ್ತಿರುವುದು ಸರಿಯೆಂದನ್ನಿಸಿತು. ಆದುದರಿಂದ ಅವರು ಖಲೀಫರನ್ನು ಭೇಟಿಮಾಡಿ ಖಾಲಿದ್‌ರ ಈ ಕೃತ್ಯಗಳ ಕುರಿತು ಚರ್ಚಿಸಿದರು. "ಖಾಲಿದ್‌ರ ಖಡ್ಗದಲ್ಲಿ ಅನ್ಯಾಯದ ಗುರುತುಗಳಿದ್ದು ಅದಕ್ಕೆ ಕಡಿವಾಣವನ್ನು ತೊಡಿಸಬೇಕೆಂದು" ಖಲೀಫರ ಮುಂದೆ ಉಮರ್ ವಾದಿಸಿದರು. ಆದರೆ ಉಮರ್‌ರ ಅಭಿಪ್ರಾಯದೊಂದಿಗೆ ಅಬೂಬಕರ್ ಸಹಮತವನ್ನು ವ್ಯಕ್ತಪಡಿಸಲಿಲ್ಲ. ಅಧಿಕಾರಿಗಳನ್ನು ಅನಾವಶ್ಯಕವಾಗಿ ನಿಯಂತ್ರಿಸುವುದು ಅವರಿಗೆ ಇಷ್ಟವಿರುವ ವಿಚಾರವಲ್ಲದಿರುವುದೂ ಅದಕ್ಕೆ ಕಾರಣವಾಗಿರಬಹುದಾಗಿದೆ. ಆದರೆ ಉಮರ್ ಪುನಃ ಪುನಃ ಒತ್ತಡವನ್ನು ಹೇರಿದಾಗ,

ಅಬೂಬಕರ್ ಹೇಳಿದರು,

"ಆ ವಿಚಾರವನ್ನು ಬಿಟ್ಟುಬಿಡಿ ಉಮರ್. ತಪ್ಪು ಸಂಭವಿಸಿದೆ ಅಷ್ಟೇ ತಾನೆ, ಅದಕ್ಕಾಗಿ ಖಾಲಿದ್‌ರನ್ನು ದೂಷಿಸಬೇಡಿರಿ."

ಆದರೆ ಇಷ್ಟಕ್ಕೆ ಉಮರ್ ಸುಮ್ಮನಾಗುತ್ತಾರೆಯೇ?

ಅವರು ಖಲೀಫರನ್ನು ಮತ್ತೆ ಒತ್ತಾಯಿಸತೊಡಗಿದರು. ಕೊನೆಗೆ ಅಬೂಬಕರ್ ಉಮರ್‌ರಲ್ಲಿ ಈ ರೀತಿ ಹೇಳಿದರು,

"ಇಲ್ಲ ಉಮರ್, ಅಲ್ಲಾಹನು ಧಿಕ್ಕಾರಿಗಳ ವಿರುದ್ಧ ಹೊರ ತೆಗೆದಿರುವ ಆ ಖಡ್ಗವನ್ನು (ಖಾಲಿದ್‌ರನ್ನು) ನಾನು ಒರೆಯೊಳಗೆ ಹಾಕಿಡಲು ಸಿದ್ಧನಿಲ್ಲ."

ಆದರೂ ಉಮರ್ ಸುಮ್ಮನಿರಲಿಲ್ಲ. ಖಾಲಿದ್‌ರ ಅವಿವೇಕ ವನ್ನು ಹಾಗೆ ನಿರ್ಲಕ್ಷಿಸಿ ಬಿಡುವುದಕ್ಕೆ ಸಾಧ್ಯವಿಲ್ಲವೆಂದು ಅವರು ನಿರ್ಧರಿಸಿರಬಹುದು. ಅವರು ಪುನಃ ಪುನಃ ಅಬೂಬಕರ್‌ರ ಬಳಿಗೆ ಬಂದು ಅದೇ ವಿಚಾರವನ್ನು ಕೆದಕತೊಡಗಿದರು.

ಕೊನೆಗೂ ಅಬೂಬಕರ್(ರ) ಖಾಲಿದ್‌ರನ್ನು ಜನ ಕಳಿಸಿ ಕರೆಸಿಕೊಂಡರು.

ಖಾಲಿದ್ ಮದೀನಾಕ್ಕೆ ಬಂದರು. ಅವರು ನೇರವಾಗಿ ಯುದ್ಧ ಭೂಮಿಯಿಂದ ಬರುವುದಾಗಿತ್ತು. ಅವರು ಯುದ್ಧಾಸ್ತ್ರಗಳನ್ನು ಧರಿಸಿ ಕೊಂಡಿದ್ದಾರೆ. ಅವರ ಮುಂಡಾಸಿನವರೆಗೂ ಬಾಣಗಳು ತುಂಬಿ ಕೊಂಡಿವೆ...

ಉಮರ್ ಅವರನ್ನು ತಡೆದು ನಿಲ್ಲಿಸಿ ಅವರ ಬಾಣಗಳನ್ನು ತುಂಡು ತುಂಡು ಮಾಡಿ ಎಸೆದು ಘರ್ಜಿಸಿದರು,

"ನೀನು ಓರ್ವ ಮುಸ್ಲಿಮನನ್ನು ಕೊಂದಿರುವೆ. ಅಷ್ಟೇ ಅಲ್ಲ. ಆತನ ಪತ್ನಿಯನ್ನು ವಶೀಕರಿಸಿದೆ. ಆದುದರಿಂದ ನಾನು ನಿನಗೆ ಕಲ್ಲು ಹೊಡೆಯುವೆನು."

ಖಾಲಿದ್ ಮೌನ ವಹಿಸಿದರು. ಅವರು ನೇರವಾಗಿ ಖಲೀಫರ ಮುಂದೆ ಹೋದರು. ಖಲೀಫರಿಗೂ ಇದೇ ಅಭಿಪ್ರಾಯ ವಿರಬಹುದೆಂದು ಭಾವಿಸಿದ್ದರು.

ಖಾಲಿದ್ ಅಬೂಬಕರ್‌ರ ಸಮಕ್ಷಮದಲ್ಲಿ ಮಾಲಿಕ್‌ರ ವಧೆ ಮತ್ತು ಅದಕ್ಕೆ ಕಾರಣವಾಗಿರುವ ಹಿನ್ನೆಲೆಯನ್ನು ವಿವರಿಸಿದರು. ಮಾಲಿಕ್ ಕಪಟ ಪ್ರವಾದಿನಿ ಸಜ್ಜಾಹ್‌ಳನ್ನು ಬೆಂಬಲಿಸಿರುವುದು ಮತ್ತು ಪ್ರಶ್ನಿಸಿದಾಗ ಮಾಲಿಕ್ ನೀಡಿದ ಅಸಮಂಜಸ ಉತ್ತರ ಹೀಗೆ ಎಲ್ಲವನ್ನೂ ಖಲೀಫರಿಗೆ ವಿವರಿಸಿದರು.

ಅಬೂಬಕರ್ ಖಾಲಿದ್‌ರನ್ನು ಇದು ಯುದ್ಧದಲ್ಲಿ ಸಂಭವಿಸಿ ರುವ ಒಂದು ತಪ್ಪು ಎಂಬ ನೆಲೆಯಿಂದ ಕ್ಷಮಿಸಿದರು. ಅದೇ ವೇಳೆ ಮಾಲಿಕ್‌ರ ವಿಧವೆಯನ್ನು ವಿವಾಹವಾಗಿರುವುದಕ್ಕೆ ಗದರಿಸಿದರು.

ಆನಂತರ ಖಾಲಿದ್ ಖಲೀಫರಿಂದ ಯುದ್ಧರಂಗಕ್ಕೆ ಮರಳುವ ಅನುಮತಿಯನ್ನು ಪಡೆದು ಹೊರಟರು. ಉಮರ್ ಕೂಡಾ ಅಲ್ಲಿ ದ್ದಾರೆ. ಅವರಿದ್ದಲ್ಲಿಗೆ ಖಾಲಿದ್ ಹೋಗಿ ಉಮ್ಮು ಸಲಮರ ಮಗನೇ ಎಂದು ಸಂಬೋಧಿಸಿದರು.

ಖಾಲಿದ್‌ರ ಈ ಸಂಬೋಧನೆಯಲ್ಲಿ ಒಂದಿಷ್ಟು ಕುಚೋದ್ಯ ಇಣುಕುತ್ತಿತ್ತು ಮತ್ತು ಸಂಕಷ್ಟದಿಂದ ಪಾರಾದ ನಿರಾಳತೆಯು ವ್ಯಕ್ತವಾಗುತ್ತಿತ್ತು. ಅಂದರೆ ನೀನು ಆ ಕಲ್ಲುಗಳನ್ನು ಕಾಯ್ದಿರಿ ಸಿಕೋ. ಬೇರೆ ಯಾರಿಗಾದರೂ ಬಿಸಾಕಬಹುದೆಂಬುದು ಧ್ವನಿ ಸುತ್ತಿತ್ತೆಂದು ಹೇಳಬಹುದು.

ಖಾಲಿದ್‌ರಿಗೆ ಖಲೀಫಾ ಕ್ಷಮೆಯನ್ನು ನೀಡಿದ್ದಾರೆಂದು ಉಮರ್‌ರಿಗೆ ಮನವರಿಕೆಯಾಯಿತು. ಆದರೂ ಉಮರ್‌ರ ದೃಷ್ಟಿ ಕೋನ ವ್ಯತ್ಯಾಸವಿಲ್ಲದೆ ಮುಂದುವರಿದಿರಬಹುದು. ಖಲೀಫಾ ಖಾಲಿದ್‌ರನ್ನು ಕರೆಯಿಸಿಕೊಂಡು ಎಚ್ಚರಿಕೆ ನೀಡಿರುವುದರಿಂದ ಅವರು ಶಾಂತರಾಗಿದ್ದರಷ್ಟೇ. ಹೀಗೆ ಈ ವಿಷಯವು ಇಲ್ಲಿಗೇ ಕೊನೆಯಾಗಿತ್ತು. ಆದರೆ ಕೆಲವು ಇತಿಹಾಸಕಾರರು ಉಮರ್‌ರನ್ನು ಓರ್ವ ಪ್ರತೀಕಾರ ದಾಹಿಯಾಗಿ ಚಿತ್ರಿಸಲು ಹೆಣಗಿರುವುದು ಕಂಡುಬರುತ್ತಿದೆ. ಅಬೂಬಕರ್‌ರ ನಿಧನ ನಂತರ ಖಿಲಾಫತ್ ಹೊಣೆಯು ಉಮರ್‌ರ ಹೆಗಲಿಗೇರಿದಾಗ ಖಾಲಿದ್‌ರನ್ನು ಸೇನೆಯ ಸರ್ವ ಸೇನಾಧಿಪತಿಯ ಸ್ಥಾನದಿಂದ ಕೆಳಗಿಳಿಸಿರುವುದನ್ನು ಇತಿಹಾಸಕಾರರು ಮಾಲಿಕ್‌ರ ವಧೆಗೆ ಪ್ರತೀಕಾರವಾಗಿದೆಯೆಂದು ಚಿತ್ರಿಸಿದ್ದಾರೆ. ಇದು ಎಷ್ಟು ಸರಿ, ಎಷ್ಟು ತಪ್ಪು ಎಂಬುದನ್ನು ವಿಶ್ಲೇಷಿಸುವುದು ಕ್ಲಿಷ್ಟದ್ದಾಗಿದೆ. ಅಂದರೆ ಪೂರ್ವದ್ವೇಷವನ್ನು ಇಟ್ಟುಕೊಂಡು ತನಗೆ ಅವಕಾಶ ಸಿಕ್ಕಿದಾಗ ಮುಯ್ಯಿ ತೀರಿಸಿಕೊಂಡರೆಂಬುದು ಉಮರ್‌ರ ಕುರಿತು ಈ ವಿಶ್ಲೇಷಣೆ ಯಲ್ಲಿದೆ. ಆದರೆ ಉಮರ್ ಹಗೆತನ ಸ್ವಭಾವವನ್ನು ಹೊಂದಿದವರೆಂಬುದಕ್ಕೆ ಇತಿಹಾಸದಲ್ಲಿ ಯಾವ ವಿಶ್ಲೇಷಣೆಯೂ ಲಭ್ಯವಿಲ್ಲ. ತನ್ನ ಪೂರ್ವಾಧಿಕಾರಿ ಕ್ಷಮಿಸಿರುವ ವಿಚಾರವನ್ನು ಪುನಃ ಕೆದಕುವುದಾಗಲಿ ಅದನ್ನು ವಿಚಾರಣೆಗೆತ್ತಿಕೊಳ್ಳುವುದಾಗಲಿ, ಅಪರಾಧಿಯೆಂದು ಶಂಕಿಸಲ್ಪಡುವ ವ್ಯಕ್ತಿಗೆ ತನ್ನನ್ನು ಸಮರ್ಥಿಸಿ ಕೊಳ್ಳುವುದಕ್ಕೆ ಅವಕಾಶವನ್ನೇ ನೀಡದೆ ತೀರ್ಪು ಕಲ್ಪಿಸುವುದನ್ನು ಇಸ್ಲಾಮಿ ವ್ಯವಸ್ಥೆಯಲ್ಲಿ ಊಹಿಸುವುದಕ್ಕೂ ಸಾಧ್ಯವಿಲ್ಲ. ಇಂತಹ ವಾದಗಳನ್ನು ಮಂಡಿಸುವ ಮೂಲಕ ಏಕಾಧಿಪತಿಯಂತೆ ಉಮರ್ ವರ್ತಿಸಿದರೆಂಬ ಆರೋಪವನ್ನು ಹೊರಿಸಿದಂತೆ ಆಗುತ್ತದೆ.

ಬರೇ ಸಂದೇಹಗಳನ್ನು ಮುಂದಿಟ್ಟು ಆಧಾರವಿಲ್ಲದೆ ಶಿಕ್ಷಿಸ ಲಾಗದೆಂಬ ಇಸ್ಲಾಮಿ ತತ್ವ ಉಮರ್‌ರಿಗೆ ತಿಳಿಯದ ವಿಚಾರವಲ್ಲ. ಈ ತತ್ವವನ್ನು ಉಮರ್ ಅಂಗೀಕರಿಸುವವರಾಗಿದ್ದರು. ಮಾತ್ರವಲ್ಲ ಮಾಲಿಕ್‌ರನ್ನು ಖಾಲಿದ್ ಪ್ರಜ್ಞಾಪೂರ್ವಕವೇ ಕೊಂದಿರುವುದು ಎಂಬುದಾಗಿ ಉಮರ್ ನಂಬಿರುವವರೆಂಬ ವಿಚಾರವೂ ಕೂಡಾ ದೃಢಪಟ್ಟಿಲ್ಲ.

ಖಡಾಖಂಡಿತವಾಗಿ ಖಾಲಿದ್ ಮಾಲಿಕ್‌ರ ಹಂತಕ ಎಂದು ಉಮರ್ ತಿಳಿದಿದ್ದರೆ ಅದಕ್ಕೆ ಅಗತ್ಯವಿರುವ ಆಧಾರ ಪುರಾವೆಗಳನ್ನು ಅಬೂಬಕರ್‌ರ ಸಮಕ್ಷಮದಲ್ಲಿ ಹರಡಿ ಶಿಕ್ಷಿಸುವುದಕ್ಕೆ ವಿನಂತಿಸುತ್ತಿದ್ದರು. ಆದರೆ ಉಮರ್ ಹಾಗೆ ವರ್ತಿಸಿರಲಿಲ್ಲ. ಅದೇ ವೇಳೆ ಖಾಲಿದ್‌ರಂತಹ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಯನ್ನು ಶಿಕ್ಷೆಯಿಂದ ದೂರವಿಡುವುದು ಸಾಧ್ಯವಿರಲಿಲ್ಲ. ಆದುದರಿಂದ ಖಾಲಿದ್‌ರನ್ನು ಕರೆಯಿಸಿಕೊಂಡು ಎಚ್ಚರಿಕೆ ನೀಡುವುದಕ್ಕೆ ಉಮರ್ ಬಯಸಿರಬೇಕು. ಅಬೂಬಕರ್ ಖಾಲಿದ್‌ರನ್ನು ಕರೆಯಿಸಿಕೊಂಡು ಎಚ್ಚರಿಕೆಯನ್ನು ನೀಡಿದರು. ಮಾತ್ರವಲ್ಲ ಮಾಲಿಕ್‌ರ ಕುಟುಂಬಕ್ಕೆ ನಷ್ಟ ಪರಿಹಾರವನ್ನು ಕೂಡಾ ನೀಡಿದರು. ಹಾಗಾಗಿ ಉಮರ್ ಸುಮ್ಮನಾಗಿರಬಹುದು. ಖಾಲಿದ್‌ರ ಮೂಲಕ ವಧಿಸಲ್ಪಟ್ಟ ಮಾಲಿಕ್‌ರ ಕುಟುಂಬಕ್ಕೆ ನಷ್ಟ ಪರಿಹಾರ ವನ್ನು ವಿತರಿಸುವ ಮೂಲಕ ಅಚಾತುರ್ಯದಿಂದ ಸಂಭವಿಸುವ ಹತ್ಯೆಗಳಿಗೆ ರಕ್ತಪರಿಹಾರವನ್ನು ನೀಡುವ ಇಸ್ಲಾಮಿ ನಿಯಮವನ್ನು ಅಬೂಬಕರ್ ಪ್ರಯೋಗಕ್ಕೆ ತಂದರು. ಉಮರ್ ಇವೆಲ್ಲವನ್ನೂ ಕಂಡಿದ್ದಾರೆ.

ಆಮೇಲೆ ಉಳಿದಿರುವ ಸಂಶಯವೆಂದರೆ, ಮಹಿಳೆಯ ದೀಕ್ಷೆಗೆ ಸಂಬಂಧಿಸಿರುವುದಾಗಿದೆ. ಯುದ್ಧಕೈದಿಗಳು ಸಾಮಾನ್ಯರಿಗಿಂತ ಭಿನ್ನವಾಗಿದ್ದಾರೆ. ದೀಕ್ಷೆ ಅಂದರೆ ಇದ್ದತ್‌ನ್ನು (ಸೆರೆಹಿಡಿದಿರುವ ಮಹಿಳೆಯ ಗರ್ಭಧಾರಣೆಯ ಕುರಿತು) ಅರಿತುಕೊಳ್ಳುವುದಕ್ಕಾಗಿತ್ತು. ಅದಕ್ಕೆ ಒಂದು ಆರ್ತವ (ಋತುಮತಿಯಾಗುವ ಅವಧಿ) ಅವಧಿಯು ಸಾಕಾಗುತ್ತದೆ. ಇದು ಖಾಲಿದ್‌ರಿಗೂ ಅರಿವಿರುವ ವಿಚಾರವೇ. ಅದನ್ನು ಖಚಿತಗೊಳಿಸಿಕೊಂಡೇ ಖಾಲಿದ್ ಮಾಲಿಕ್‌ರ ವಿಧವೆಯನ್ನು ವಿವಾಹವಾಗಿದ್ದರು.

ಮಾಲಿಕ್‌ರನ್ನು ವಧಿಸಿರುವುದು ಅವರ ಸಹೋದರ ಮುದಮ್ಮಿಮ್‌ರಿಗೆ ಹೆಚ್ಚು ದುಃಖವನ್ನು ತರಿಸಿತು. ಅವರು ಖಲೀಫರಿಂದ ನಷ್ಟಪರಿಹಾರವನ್ನು ಕೋರಿದರು. ನಷ್ಟ ಪರಿಹಾರ ನೀಡುವುದಕ್ಕೆ ಖಲೀಫ ಸಮ್ಮತಿಯನ್ನು ಸೂಚಿಸಿದರು. ಮಾತ್ರವಲ್ಲ ಸೆರೆಹಿಡಿದಿರುವ ತಮ್ಮವರನ್ನು ಬಿಡುಗಡೆಗೊಳಿಸುವಂತೆ ಮುದಮ್ಮಿಮ್ ಮುಂದಿರಿಸಿದ ಬೇಡಿಕೆಯನ್ನು ಕೂಡಾ ಖಲೀಫ ಪುರಸ್ಕರಿಸಿದರು. ಮುದಮ್ಮಿಮ್‌ರ ಬಂಧಿಗಳನ್ನು ಬಿಡುಗಡೆ ಗೊಳಿಸುವಂತೆ ಖಲೀಫರಿಂದ ಪತ್ರ ತಲುಪಿದ ಕೂಡಲೇ ಖಾಲಿದ್ ಸೆರೆಯಾಳುಗಳನ್ನು ಬಿಡುಗಡೆಗೊಳಿಸಿದರು. ಖಲೀಫರ ಭೇಟಿಗೆಂದು ಮದೀನಾಕ್ಕೆ ಬಂದಿದ್ದ ಮುದಮ್ಮಿಮ್ ಅಲ್ಲಿಯೇ ಸ್ವಲ್ಪ ಕಾಲ ತಂಗಿದರು.

ಉಮರ್‌ರಿಗೆ ಈ ಮುದಮ್ಮಿಮ್‌ರು ಪರಿಚಯವಾಗಿರುವುದು ಮದೀನಾದಲ್ಲಿ ಅವರು ತಂಗಿದ್ದ ಕಾಲದಲ್ಲಾಗಿದೆ. ಆಗ ತಾನೆ ಯಮಾಮ ಯುದ್ಧವು ಮುಗಿದಿತ್ತು.

## ಕರ್ಮಭೂಮಿ

ಚಿಂತನೆ



ಇಬ್ರಾಹೀಮ್ ಸಈದ್

ಒಂದು ಸುಂದರ ಮುಂಜಾವು. ಸೂರ್ಯ ಇನ್ನೂ ಉದಯಿಸಿಲ್ಲ. ಆದರೆ ಆಕಾಶದಲ್ಲಿ ಅದರ ಬೆಳಕು ವಿಶಾಲವಾಗಿ ಹರಡಿತ್ತು. ಅದು ಸ್ವಲ್ಪ ಸಮಯದಲ್ಲೇ ಉದಿಸುವ ಸೂಚನೆ ನೀಡುತ್ತಿತ್ತು. ಮೂಡಣ ದಿಗಂತದಲ್ಲಿ ಮೋಡದ ತುಂಡುಗಳ ಹಿಂದಿನಿಂದ ಪುಟಿಯುತ್ತಿರುವ ಅದರ ಪ್ರಥಮ ಕಿರಣಗಳು ಅದ್ಭುತ ರಂಗು ರಂಗಿನ ದೃಶ್ಯವನ್ನು ಮುಂದಿಡುತ್ತವೆ. ಮರಗಳ ಹಚ್ಚ ಹಸುರು, ಹಕ್ಕಿಗಳ ಇಂಚರ ಮತ್ತು ಮುಂಜಾವಿನ ತಂಗಾಳಿಯು ಪರಿಸರವನ್ನು ಇನ್ನಷ್ಟು ಕಲಾತ್ಮಕಗೊಳಿಸುತ್ತದೆ. ಪ್ರತಿಯೊಬ್ಬ ಪ್ರಜ್ಞಾವಂತ ನೋಡು ಗನ ಬಾಯಿಯಿಂದ ದೇವರ ಈ ವಿಶ್ವವು ಎಷ್ಟೊಂದು ಅರ್ಥಪೂರ್ಣವಾಗಿದೆ ಎಂಬ ಉದ್ಗಾರ ಹೊರಡುತ್ತದೆ. ಆದರೆ ಅದರ ಜೊತೆ ಪರಲೋಕವನ್ನು ಸೇರಿಸದಿದ್ದರೆ ಅದು ಅತ್ಯಂತ ನಿರರ್ಥಕವಾಗುತ್ತದೆ.

ಈ ಜಗತ್ತು ಅತ್ಯಂತ ರೋಚಕವಾಗಿದೆ. ಆದರೆ ಅದರ ರುಚಿ ಕೆಲವು ಕ್ಷಣಗಳಿಗಿಂತ ಅಧಿಕ ಹೊತ್ತು ಇರುವುದಿಲ್ಲ. ಜಗತ್ತು ಅತ್ಯಂತ ಸುಂದರವಾಗಿದೆ. ಆದರೆ ಅದನ್ನು ನೋಡುವ ಕಣ್ಣು ಬಹುಬೇಗ ತನ್ನ ಜ್ಯೋತಿಯನ್ನು ಕಳ ಕೊಳ್ಳುತ್ತದೆ. ಲೋಕದಲ್ಲಿ ಪ್ರತಾಪ ಮತ್ತು ಸಂತೋಷ ಗಳಿಸುವುದು ಮನುಷ್ಯನಿಗೆ ಬಲು ಇಷ್ಟ. ಆದರೆ ಲೋಕದ ಪ್ರತಾಪ ಮತ್ತು ಸಂತೋಷವನ್ನು ಗಳಿಸುವ ಪ್ರಯತ್ನ ಮಾಡುತ್ತಿರುವಾಗಲೇ ಅವನ ಅಂತ್ಯ ಬಂದು ಬಿಡುತ್ತದೆ. ಮನುಷ್ಯ ಬಯಸುವುದೆಲ್ಲವೂ ಜಗತ್ತಿನಲ್ಲಿದೆ. ಆದರೆ ಅದೆಲ್ಲವನ್ನೂ ಗಳಿಸುವುದು ಮನುಷ್ಯನಿಗೆ ಸಾಧ್ಯವಲ್ಲ. ಬಾಹ್ಯ ನೋಟಕ್ಕೆ ಸಕಲ ಐಶ್ವರ್ಯವನ್ನು ಹೊಂದಿದವನು ಎಂದೆನಿಸಿದ ವ್ಯಕ್ತಿಗೆ ಕೂಡಾ ಅದೆಲ್ಲವನ್ನೂ ಗಳಿಸಲು ಸಾಧ್ಯವಾಗುವುದಿಲ್ಲ.

ಮನುಷ್ಯ ಒಂದು ಪರಿಪೂರ್ಣ ಅಸ್ಥಿತ್ವವಾಗಿದ್ದಾನೆ. ಆದರೆ ಜೊತೆಗೇ ಅವನಿಗೆ ತರತರದ ಮಿತಿ-ಮೇರೆಗಳಿವೆ. ಅನೇಕ ಪ್ರತಿಕೂಲ ಪರಿಸ್ಥಿತಿಗಳು ಅವನನ್ನು ಆವರಿಸಿಕೊಂಡಿವೆ. ಮನುಷ್ಯನ ಜೀವನವು ಪರಿಪೂರ್ಣ ಜೀವನವಾಗಿದ್ದರೂ ಅವನಿಗೆ ಎಲ್ಲ ಮಿತಿ-ಮೇರೆಗಳಿಂದ ಮತ್ತು ಪ್ರತಿಕೂಲ ಪರಿಸ್ಥಿತಿಗಳಿಂದ ಮುಕ್ತವಾದ ಒಂದು ಜಗತ್ತು ಸಿಗುವವರೆಗೂ ನಿರರ್ಥಕವಾಗಿದೆ.

ಅಂತಹ ಪರಿಪೂರ್ಣ ಮತ್ತು ಅನಶ್ವರ ಲೋಕವನ್ನು ಸ್ವರ್ಗದ ರೂಪದಲ್ಲಿ ದೇವನು ಸೃಷ್ಟಿಸಿದ್ದಾನೆ. ಆದರೆ ಅದು ಯಾವ ಮನುಷ್ಯನಿಗೂ ತನ್ನಿಂತಾನೇ ಸಿಗಲಾರದು. ಬರಲಿ ರುವ ಆ ಪರಿಪೂರ್ಣ ಜೀವನದ ಬೆಲೆ ಪ್ರಸಕ್ತ ಅಪೂರ್ಣ ಜೀವನವಾಗಿದೆ. ಯಾರು ತನ್ನ ಪ್ರಸಕ್ತ ಜೀವನವನ್ನು ತ್ಯಾಗ ಮಾಡಲು ಸಿದ್ಧವಿರುವನೋ ಅವನೇ ಭವಿಷ್ಯದ ಸ್ವರ್ಗ ಲೋಕದ ಜೀವನವನ್ನು ಪಡೆಯ ಬಲ್ಲನು. ಯಾರು ಈ ತ್ಯಾಗಕ್ಕೆ ಸಿದ್ಧವಿಲ್ಲವೋ ಅವನಿಗೂ ಮರಣದ ನಂತರ ಪರಲೋಕ ಜೀವನವು ಸಿಕ್ಕಿಯೇ ಸಿಗುವುದು. ಆದರೆ ಅವನ ಪಾಲಿಗೆ ಆ ಶಾಶ್ವತ ಜೀವನವು ನಿರಾಶೆ ಮತ್ತು ಹತಾಶೆಯಿಂದ ಕೂಡಿರುವುದು. ಅದು ಸಂತೋಷ ಮತ್ತು ಸುಭಿಕ್ಷೆಯ ಲೋಕವಾಗಿರಲಾರದು. ಕವಿಯೊಬ್ಬರು ನುಡಿದಂತೆ- ಅಮಲ್ ಸೆ ಝಿಂದಗಿ ಬನ್ತೀ ಹೈ ಜನ್ನತ್ ಭೀ ಜಹನ್ನಮ್ ಭೀ. ಅರ್ಥಾತ್ ಕರ್ಮಗಳಿಂದಲೇ ಮನುಷ್ಯನ ಜೀವನವು ಸ್ವರ್ಗವೋ ನರಕವೋ ಆಗಲಿದೆ.

# ಮೂಸಾರ[ಅ] ಸಂದೇಶ

ಮೂಸಾ V/S ಫಿರ್‌ಔನ್- 18

ಅಖ್ಲಾಕ್ ಹುಸೈನ್

ಆ ಬಳಿಕ (ಮೇಲೆ ಪ್ರಸ್ತಾಪಿಸಲಾದ) ಆ ಜನಾಂಗಗಳ ತರುವಾಯ ನಾವು ಮೂಸಾರನ್ನು ನಮ್ಮ ದೃಷ್ಟಾಂತಗಳ ಸಹಿತ ಫಿರ್‌ಔನ್ ಮತ್ತು ಅವನ ಜನಾಂಗದ ಸರದಾರರ ಬಳಿಗೆ ಕಳುಹಿಸಿದೆವು. ಆದರೆ ಅವರೂ ನಮ್ಮ ದೃಷ್ಟಾಂತಗಳಿಗೆ ಅಕ್ರಮವೆಸಗಿದರು. ಆ ಕಿಡಿಗೇಡಿಗಳ ಪರಿಣಾಮವೇನಾಯಿತೆಂದು ನೋಡಿರಿ. ಮೂಸಾ ಹೇಳಿದರು, "ಓ ಫಿರ್‌ಔನ್, ನಾನು ಸರ್ವಲೋಕ ಪಾಲಕನ ಕಡೆಯಿಂದ ಕಳುಹಿಸಲ್ಪಟ್ಟಿದ್ದೇನೆ. ಅಲ್ಲಾಹನ ನಾಮವೆತ್ತಿ ಸತ್ಯದ ಹೊರತು ಇನ್ನೇನನ್ನೂ ಹೇಳದಿರಲಿಕ್ಕಾಗಿಯೇ ನನ್ನನ್ನು ನಿಯೋಜಿಸಲಾಗಿದೆ. ನಾನು ನಿಮ್ಮ ಬಳಿಗೆ ನನ್ನ ಪ್ರಭುವಿನ ಕಡೆಯಿಂದ ನೇಮಕದ ಸುವ್ಯಕ್ತ ಪ್ರಮಾಣ ಹೊಂದಿ ಬಂದಿರುತ್ತೇನೆ. ಆದುದರಿಂದ ನೀನು ಬನೀಇಸ್ರಾಈಲರನ್ನು ನನ್ನ ಸಂಗಡ ಕಳುಹಿಸಿ ಕೊಡು." (ಅಲ್ ಅಅ್‌ರಾಫ್: 103-105)

ಮೂಸಾರ ಸಂದೇಶದ ವಿವರಗಳು ಈ ಕೆಳಗಿನ ಸೂಕ್ತದಲ್ಲಿ ಹೀಗೆ ವಿವರಿಸಲಾಗಿದೆ:

ನಾವು ಇವರಿಗಿಂತ ಮುಂಚೆ ಫಿರ್‌ಔನನ ಜನಾಂಗವನ್ನು ಇದೇ ಪರೀಕ್ಷೆಗೆ ಒಳಪಡಿಸಿದ್ದೆವು. ಅವರ ಬಳಿಗೆ ಓರ್ವ ಸನ್ಮಾನ್ಯ ಸಂದೇಶವಾಹಕರು ಬಂದರು- (ಅವರು ಹೀಗೆ ಹೇಳಿದರು), "ಅಲ್ಲಾಹನ ದಾಸರನ್ನು ನನ್ನ ವಶಕ್ಕೆ ಒಪ್ಪಿಸಿ ಬಿಡಿರಿ. ನಾನು ನಿಮ್ಮ ಪಾಲಿಗೆ ಓರ್ವ ಪ್ರಾಮಾಣಿಕ ಸಂದೇಶ ವಾಹಕನಾಗಿದ್ದೇನೆ- ಅಲ್ಲಾಹನ ವಿರುದ್ಧ ವಿದ್ರೋಹ ವೆಸಗಬೇಡಿ. ನಾನು (ನನ್ನ ಪ್ರವಾದಿತ್ವದ ಬಗ್ಗೆ) ಸುಸ್ಪಷ್ಟ ಪುರಾವೆಯನ್ನು ನಿಮ್ಮ ಮುಂದಿಡುತ್ತೇನೆ." (ಅದ್ದುಖಾನ್: 17-19)

ಇದರ ಇನ್ನೊಂದು ಮಗ್ಗುಲನ್ನು ಈ ಕೆಳಗಿನ ಸೂಕ್ತದಲ್ಲಿ ವಿವರಿಸಲಾಗಿದೆ,

"ಅವನ ಬಳಿಗೆ ಹೋಗಿರಿ ಮತ್ತು ನಾವು ನಿನ್ನ ಪ್ರಭುವಿನ ಕಡೆಯಿಂದ ಕಳುಹಿಸಲ್ಪಟ್ಟವರು. ಬನೀ ಇಸ್ರಾಈಲರನ್ನು ನಮ್ಮ ಸಂಗಡ ಕಳುಹಿಸಿ ಬಿಡು, ಅವರಿಗೆ ಕಾಟ ಕೊಡಬೇಡ. ನಾವು ನಿನ್ನ ಬಳಿಗೆ ನಿನ್ನ ಪ್ರಭುವಿನ ನಿದರ್ಶನವನ್ನು ತಂದಿರುತ್ತೇವೆ ಮತ್ತು ಸನ್ಮಾರ್ಗವನ್ನನುಸರಿಸುವವನಿಗೆ ರಕ್ಷಣೆಯಿದೆ. ಸುಳ್ಳಾಗಿಸುವವನಿಗೂ ವಿಮುಖನಾದವನಿಗೂ ಯಾತನೆ ಇದೆಯೆಂದು ನಮಗೆ 'ದಿವ್ಯವಾಣಿ'ಯ ಮೂಲಕ



ತಿಳಿಸಿಕೊಡಲಾಗಿದೆ ಎಂದು ಹೇಳಿರಿ" ಎಂದು ಅಲ್ಲಾಹನು ಹೇಳಿದನು. (ತಾಹಾ: 47-48)

ಈ ಸೂಕ್ತಗಳಿಂದ ತಿಳಿದು ಬರುವ ಪ್ರಕಾರ, ಮೂಸಾರು ತಮ್ಮ ಮಾತ್ರವಲ್ಲ, ತಮ್ಮ ಸಹೋದರನ ಪ್ರವಾದಿತ್ವವನ್ನೂ ಘೋಷಿಸಿದ್ದಾರೆ.

ಮೊದಲು ಫಿರ್‌ಔನನಿಗೆ ಸನ್ಮಾರ್ಗದ ಕಡೆಗೆ ಬರುವಂತೆ ಆಹ್ವಾನಿಸಲಾಗಿದೆ. ಈ ಆಹ್ವಾನವನ್ನು ಸ್ವೀಕರಿಸಿದರೆ ಅವನಿಗೆ ರಕ್ಷಣೆಯಿದೆಯೆಂಬ ಸುವಾರ್ತೆಯನ್ನೂ ನೀಡಲಾಗಿದೆ.

ತರುವಾಯ, ಅಲ್ಲಾಹನ ವಿರುದ್ಧ ಬಂಡಾಯ ವೇಳಬೇಡ. ಈ ಆಹ್ವಾನವನ್ನು ತಿರಸ್ಕರಿಸಬೇಡ. ಏಕೆಂದರೆ ಇದನ್ನು ತಿರಸ್ಕರಿಸುವವರ ಮತ್ತು ಇದರಿಂದ ವಿಮುಖರಾಗುವವರ ದುಷ್ಪರಿಣಾಮಗಳನ್ನು ದಿವ್ಯ ವಾಣಿಯ ಮೂಲಕ ನಮಗೆ ತಿಳಿಸಲಾಗಿದೆಯೆಂದು ಎಚ್ಚರಿಸಲಾಗಿದೆ. ಆ ದುಷ್ಪರಿಣಾಮವೇನೆಂದರೆ ಅವರ ಮೇಲೆ ಅಲ್ಲಾಹನ ಯಾತನೆ ಎರಗುವುದು. ಈ ಲೋಕದಲ್ಲೂ ಪರಲೋಕದಲ್ಲೂ.

ಫಿರ್‌ಔನನ ತುಂಬಿದ ಆಸ್ಥಾನದಲ್ಲಿ ಮಾಡಲಾದ ಈ ಘೋಷಣೆಯು ಬಹಳ ಮಹತ್ವಪೂರ್ಣವಾಗಿತ್ತು. ಪ್ರವಾದಿತ್ವದ ಘೋಷಣೆಯ ಅರ್ಥವೇ ನೈಜ ಪರಮಾಧಿಕಾರವು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಮಾತ್ರ ಇರುವುದೆಂದಾಗಿತ್ತು. 'ನಾನು (ಮೂಸಾ) ಆ ಪರಮಾಧಿಕಾರ ಹೊಂದಿದವನ ಅಧಿಕೃತ ಪ್ರತಿನಿಧಿಯಾಗಿದ್ದೇನೆ. ಆದ್ದರಿಂದ ಅಲ್ಲಾಹನ ದಾಸರು ನನ್ನನ್ನು ಅನುಸರಿಸಬೇಕು. ನಾನು ತೋರಿಸಿದ ಮಾರ್ಗದಲ್ಲಿ ನಡೆಯಬೇಕು. ನಾನು ಹೇಳುವುದು ಸತ್ಯ. ಇದರ ಹೊರತಾದ ಬೇರೆ ಮೂಲಗಳಿಂದ ಬರುವ ಎಲ್ಲವೂ ಮಿಥ್ಯವಾಗಿದೆ.' ದೇವಾಂಶ ಸಂಭೂತನೆಂಬ ಫಿರ್‌ಔನನ ವಾದವು ತನ್ನಿಂತಾನೇ ಕುಸಿದು ಬೀಳುತ್ತದೆ. ತಾನೇ ವಹಿಸಿಕೊಂಡಿರುವ ಫಿರ್‌ಔನನ ಸ್ಥಾನವು ಅನೂರ್ಜಿತಗೊಳ್ಳುತ್ತದೆ.

ಬನೀ ಇಸ್ರಾಈಲರನ್ನು ಬಿಟ್ಟುಕೊಡಬೇಕೆಂಬ ಬೇಡಿಕೆಯ ತಾತ್ಪರ್ಯ ಹೀಗಿದೆ:

1. ಬನೀ ಇಸ್ರಾಈಲರಲ್ಲಿ ಮುಂಚಿನಿಂದಲೂ ಒಂದು ಮುಸ್ಲಿಮ್ ಜನಾಂಗವಿತ್ತು. ಆದ್ದರಿಂದ ಅದರ ವಿಮೋಚನೆಯ ಏರ್ಪಾಡು ಮಾಡುವುದು, ಅದರ ಸುಧಾರಣೆಗೆ ಪ್ರಯತ್ನಿಸುವುದು ಅಲ್ಲಾಹನ ಪ್ರವಾದಿಯ ಪ್ರಥಮ ಕರ್ತವ್ಯವಾಗಿದೆ.

2. ಇದರ ರಾಜಕೀಯ ಪರಿಣಾಮವೇನಾಗಿತ್ತೆಂದರೆ, ಫಿರ್‌ಔನನ ದಬ್ಬಾಳಿಕೆಯಲ್ಲಿ ಜೀವಿಸುತ್ತಿದ್ದ ಒಂದು ದೊಡ್ಡ ಜನವಿಭಾಗದ ಮೇಲಿಂದ ಅವನ ಅಧಿಕಾರವು ಒಮ್ಮೆಲೇ ಕೊನೆಗೊಳ್ಳುವುದಾಗಿತ್ತು.

3. ಮೂಸಾರ ಈ ಬೇಡಿಕೆಯನ್ನು ಒಪ್ಪಿಕೊಳ್ಳುವುದರ ಪರಿಣಾಮವೇನಾಗಿತ್ತೆಂದರೆ, ಫಿರ್‌ಔನನ ದರ್ಪ, ಪ್ರಭಾವ ಮತ್ತು ಅಧಿಕಾರದ ಶವ ಯಾತ್ರೆ ತನ್ನಷ್ಟಕ್ಕೆ ಹೊರಡುವುದಾಗಿತ್ತು. ಬನೀ ಇಸ್ರಾಈಲರ ಇಷ್ಟು ದೊಡ್ಡ ಸಂಖ್ಯೆಯು ಫಿರ್‌ಔನನ ಹಿಡಿತದಿಂದ ಪ್ರತಿರೋಧವಿಲ್ಲದೆ ಹೊರಟು ಹೋಗುವುದೆಂದರೆ ಇತರ ಮರ್ದಿತ ಜನಾಂಗಗಳಿಗೆ ಸ್ವಾತಂತ್ರ್ಯದ ಕರೆಯಾಗಿತ್ತು. ಅವರೂ ಫಿರ್‌ಔನನಿಂದ ಮುಕ್ತಿ ಪಡೆಯಲು ಪ್ರಯತ್ನಿಸಬೇಕೆಂದಾಗಿತ್ತು.

ಫಿರ್‌ಔನನಿಗೆ ಮೂಸಾರನ್ನು ನೋಡಿ ಮೊದಲು ಬಹಳ ಆಶ್ಚರ್ಯವಾಯಿತು. ಅನಂತರ ಅವರ ದಿಟ್ಟ ಮಾತಿನ ಶೈಲಿಯನ್ನು ನೋಡಿ ಅದ್ಭುತವಾಯಿತು. ಅವರ ಧೈರ್ಯ ಪ್ರದರ್ಶನವನ್ನು ಕಂಡು ಒಳಗೊಳಗೇ ಭೀತಿಗೊಳಗಾದ. ಆದರೆ ತನ್ನ ವರ್ಚಸ್ಸಿಗೆ ಧಕ್ಕೆಯುಂಟಾದೀತೋ ಎಂದು ಭಾವಿಸಿ ಮಾತನ್ನು ಇತರೆಡೆಗೆ ಸರಿಸಲು ಪ್ರಯತ್ನಿಸಿದ. ತರುವಾಯ ಮೂಸಾರಿಗೆ ಅವರ ಕಳೆದು ಹೋದ ಘಟನೆಗಳನ್ನು ನೆನಪಿಸುವ ಮೂಲಕ ಮತ್ತು ಅವರಿಗೆ ತನ್ನ ಉಪಕಾರಗಳನ್ನು ಜ್ಞಾಪಿಸುವ ಮೂಲಕ ಅವರನ್ನು ಪ್ರಭಾವಿತಗೊಳಿಸಲು ಪ್ರಯತ್ನಿಸಿದ. ಅಂತಹ ತನ್ನ ಆಸ್ಥಾನಿಕರು ಮತ್ತು ಪರಿಚಾರಕರಿಗೆ, ತಾನು ಇಂತಹ ಹೊಸ ಮಾತುಗಳಿಂದೇನೂ ಪ್ರಭಾವಿತಗೊಂಡಿಲ್ಲ ವೆಂದು ತೋರ್ಪಡಿಸಲು ವ್ಯರ್ಥ ಶ್ರಮ ನಡೆಸಿದ. ಅವನು ಹೀಗೆ ಹೇಳಿದ,

ಫಿರ್‌ಔನನು, "ನಾವು ನಿನ್ನನ್ನು ನಮ್ಮಲ್ಲಿ ಮಗುವಿನಂತೆ ಸಾಕಿರಲಿಲ್ಲವೇ? ನೀನು ನಿನ್ನ ಜೀವಮಾನದ ಅನೇಕ ವರ್ಷಗಳನ್ನು ನಮ್ಮಲ್ಲಿ ಕಳೆದಿರುವೆ. ಅನಂತರ ನೀನು ಏನು ಮಾಡಿದೆಯೋ ಅದನ್ನು ಮಾಡಿದೆ. ನೀನು ಮಹಾ ಕೃತಘ್ನನಾಗಿರುವೆ" ಎಂದನು. (ಅಶ್ಶುಅರಾ: 18-19)

ಮೂಸಾರೊಂದಿಗೆ ಇಲ್ಲಿ ಸಂಭಾಷಣೆ ನಡೆಸಿದ್ದು, ಅವರನ್ನು ಚಿಕ್ಕಂದಿನಲ್ಲಿ ಪೋಷಿಸಿ ಬೆಳೆಸಿದ ವ್ಯಕ್ತಿಯಾಗಿರಲಿಲ್ಲ. ಬದಲಾಗಿ ಬೇರೆಯೇ ವ್ಯಕ್ತಿಯಾಗಿದ್ದನು. ಆ ಕಾಲದಲ್ಲಿ ಈಜಿಪ್ಟ್‌ನ ಚಕ್ರವರ್ತಿಗಳನ್ನು 'ಫಿರ್‌ಔನ್' ಎಂದು ಕರೆಯಲಾಗುತ್ತಿತ್ತು. ಸೂರ್ಯವಂಶಿ ಎಂಬುದು ಇದರ ಅರ್ಥ. ಮೊದಲ ವ್ಯಕ್ತಿಯ ಹೆಸರು ರಂಸೀಸ್ ಎಂದಾಗಿದ್ದರೆ ಈ ಎರಡನೇ ಫಿರ್‌ಔನನ ಹೆಸರು ಮುನ್ಫಿತಃ ಅಥವಾ ಮುನ್‌ಫಿತಾಹ್ ಎಂದಾಗಿತ್ತು.

ಪ್ರಸ್ತುತ ಸಂಭಾಷಣೆಯಲ್ಲಿ ಒಂದೆಡೆ ಫಿರ್‌ಔನನು ಮೂಸಾರನ್ನು ಉಪಕಾರ ಸ್ಮರಿಸುವವರಾಗಿ ಮಾಡುವುದರ ಜೊತೆಗೆ ಅವರ ನೈತಿಕ ಸ್ಥಿತಿಯನ್ನು 'ನೀನು ದೊಡ್ಡ ಕೃತಘ್ನ' ಎಂದು ಹೇಳಿ ಹೊಡೆತ ನೀಡಲು ಪ್ರಯತ್ನಿಸಿದನು. ತನ್ನ ಉಪಕಾರಿಯ ಉಪಕಾರಗಳನ್ನು ಮರೆತು ತನಗೇ ಉಪದೇಶ ನೀಡಲು ಹಾಗೂ ತನ್ನನ್ನು ಅನುಸರಿಸಲು ಹೇಳುವಂತಹ ಓರ್ವ ವ್ಯಕ್ತಿಯ ಮಾತು ಕೇಳಲಿಕ್ಕೇ ಅರ್ಹವಲ್ಲವೆಂದು ಆತನು ಸಭಿಕರಿಗೆ ಮೊದಲ ಹೆಜ್ಜೆಯಲ್ಲೇ ಮೂಸಾರ ಬಗ್ಗೆ ಕೆಟ್ಟ ಅಭಿಪ್ರಾಯ ತಾಳುವಂತೆ ಮಾಡಲು ಪ್ರಯತ್ನಿಸಿದನು.

# ಬ್ಯಾಂಕೇತರ ವಿನಿಮಯ ಕಂಪೆನಿಗಳು

ಇಸ್ಲಾಮೀ ಬ್ಯಾಂಕಿಂಗ್- 63

ಪ್ರೊ| ಎಂ.ಎ. ಬಾಗ್‌ಸಿರಾಜ್

ಭಾರತದಲ್ಲಿ ಇಸ್ಲಾಮಿಕ್ ಬ್ಯಾಂಕ್ ಪ್ರಾರಂಭಿಸಲು ಯಾವಾಗ ಅನುಮತಿ ದೊರೆಯಬಹುದೆಂಬುದು ಗೊತ್ತಿಲ್ಲ. ಜಾತ್ಯತೀತ ರಾಷ್ಟ್ರವಾದ ಬ್ರಿಟನ್‌ನಲ್ಲಿ ಕೂಡಾ ಇಸ್ಲಾಮಿಕ್ ಬ್ಯಾಂಕ್‌ಗಳು ಕಾರ್ಯ ಪ್ರವೃತ್ತವಾಗಿವೆ. ಆದರೆ ಇಸ್ಲಾಮಿಕ್ ತತ್ವವನ್ನೂ ಪಾಲಿಸಿ ಬ್ಯಾಂಕೇತರ ಸಂಸ್ಥೆಗಳನ್ನು ಸ್ಥಾಪಿಸುವ ಅನುಮತಿ ಇಲ್ಲಿದೆ. ಇಂತಹ ಹಲವಾರು ಸಂಸ್ಥೆಗಳು ವಿಫಲಗೊಂಡಿದ್ದರೂ ಅದ್ಯಾವುದೂ ಹೊಸ ಸಂಸ್ಥೆ ಸ್ಥಾಪನೆ ನಿಟ್ಟಿನಲ್ಲಿ ನಿರಾಶೆಗೆ ಕಾರಣವಾಗಬೇಕಿಲ್ಲ. ಸರಕಾರಿ ನಿಯಂತ್ರಣ, ಶರೀಅತ್ ತತ್ವಗಳನ್ನು ಪಾಲಿಸಿ ಇವುಗಳನ್ನು ರಿಜಿಸ್ಟರ್ ಮಾಡಬಹುದು. 1988ರ ನಿಯಮಗಳ ಪ್ರಕಾರ ಅತಿ ಕಡಿಮೆಯೆಂದರೆ 2 ಕೋಟಿ ರೂಪಾಯಿ ಶೇರು ಮತ್ತು ಬಂಡವಾಳವಿರುವ ಕಂಪೆನಿಗಳಿಗೆ ರಿಸರ್ವ್ ಬ್ಯಾಂಕ್ ನಿಯಮದಂತೆ ಈ ರೀತಿ ನೋಂದಾವಣೆ ನಡೆಸಬಹುದಾಗಿದೆ. ಆರ್.ಬಿ.ಐ. ನೋಂದಾವಣೆಯಿಲ್ಲದೆ ಕಂಪೆನಿ ನಿಯಮಗಳಂತೆಯೂ ನೋಂದಾವಣೆ ಮಾಡಬಹುದಾಗಿದೆ. ಪ್ರತಿ ವರ್ಷವೂ ನೋಂದಾವಣೆ ನವೀಕರಣ ನಡೆಸಿದರಾಯಿತು. ಮೂಲ ಬಂಡವಾಳದಂತೆ ಸಾರ್ವಜನಿಕರಿಂದಲೂ ಠೇವಣಿ ಸಂಗ್ರಹಿಸಲು ಅನುಮತಿಯಿದೆ. ಇದಕ್ಕೆ ನೋಂದಾವಣೆ ಸಂಗ್ರಹಿಸಲು ಅನುಮತಿಯಿದೆ. ಇದಕ್ಕೆ ನೋಂದಾವಣೆ ಯಾವ ಗ್ರೇಡ್‌ನಲ್ಲಿ ಸಿಕ್ಕಿದೆ ಎಂಬುದಷ್ಟೇ ಪರಿಗಣನೆಗೆ ಬರುತ್ತದೆ. ಈ ವರೆಗೂ ಯಾವುದಾದರೊಂದು ಇಸ್ಲಾಮಿಕ್ ಸಂಸ್ಥೆಗಳು ಎ-ಗ್ರೇಡ್ ಅಂಗೀಕಾರವನ್ನು ಪಡೆದುಕೊಂಡಿಲ್ಲ ಎಂಬ ವಿಚಾರ ಅವುಗಳ ಕಾರ್ಯ ಸಾಮರ್ಥ್ಯದ ನ್ಯೂನತೆಯನ್ನು ಎತ್ತಿ ಹಿಡಿಯುತ್ತದೆ. ಆದುದರಿಂದ ಹಲವು ಸಂಸ್ಥೆಗಳಿಗೆ ಈ ಅಂಗೀಕಾರವನ್ನು ಹೊಂದಲಾಗದೆ ಚಟುವಟಿಕೆ ಸ್ಥಗಿತಗೊಳಿಸಬೇಕಾಗಿ ಬಂದಿರಬಹುದು.

ಶಿಕ್ಷಣ ತರಬೇತಿ ರಂಗದಲ್ಲಿ ಹಿಂದುಳಿಕೆ, ಸಂಪನ್ಮೂಲಗಳ ಕೊರತೆ, ಆತ್ಮವಿಶ್ವಾಸದ ಕೊರತೆ ಎಂಬೀ ಕಾರಣಗಳು ಭಾರತದ ಮುಸ್ಲಿಮರ ಸಮಸ್ಯೆಯಾಗಿದೆ. ಆದುದರಿಂದ ಭಾರತೀಯ ಮುಸ್ಲಿಮರ ನಡುವೆ ಉತ್ತಮ ಸಂಘಟನಾ ಸಾಮರ್ಥ್ಯ ಮತ್ತು ಕಾರ್ಯ ಸಾಮರ್ಥ್ಯ ಹೊಂದಿರುವ ಸಂಸ್ಥೆ ಸ್ಥಾಪಕರು ಕಡಿಮೆಯಾಗಿದ್ದಾರೆ. ಭಾರತೀಯ ಮುಸ್ಲಿಮರು ಹೇಳಿಕೊಳ್ಳಬಹುದಾದಂತಹ ಯಾವುದಾದರೊಂದು ಕೈಗಾರಿಕಾ ಸಂಸ್ಥೆ ಕೂಡಾ ಭಾರತದ ಸ್ವಾತಂತ್ರ್ಯದ ನಂತರ ನೋಂದಾವಣೆಗೊಂಡಿಲ್ಲ. ಸಣ್ಣ ಕೈಗಾರಿಕೆಗಳ ಅನುಪಾತ ನೋಡಿದರೂ ಸಾಕಷ್ಟಿಲ್ಲ. ಟೆಕ್ಸ್‌ಟೈಲ್ಸ್, ಸಿಲ್ಕ್, ಚರ್ಮ, ಆರ್ಟಿಟೆಕ್ಚರ್ ಮುಂತಾದ ಹಲವಾರು ಕರಕುಶಲ ಕಾರ್ಯಗಳು ಪರಂಪರಾಗತವಾಗಿ ಮುಸ್ಲಿಮರ ಆಧಿಪತ್ಯದಲ್ಲಿದ್ದರೂ ಅದನ್ನೊಂದು ಕೈಗಾರಿಕೆಯಾಗಿ ಮೇಲೆ ಎತ್ತುವುದಕ್ಕೆ ಅವರಿಗೆ ಸಾಧ್ಯವಾಗಿಲ್ಲ. ಆದುದರಿಂದ ಯುವಕರಿಗೆ ಕಲಿಸಿ, ತರಬೇತಿ ಕೊಟ್ಟು ಸಾಮರ್ಥ್ಯ ಮತ್ತು ಆತ್ಮವಿಶ್ವಾಸ ಹೆಚ್ಚಿಸುವುದಕ್ಕೂ ಪ್ರಯತ್ನಿಸಬೇಕಾಗುತ್ತದೆ. ಆಗಲೇ ಇಸ್ಲಾಮಿಕ್ ಹಣಕಾಸು ಸಂಸ್ಥೆ ಯಶಸ್ವಿಯಾಗಿ ಕಾರ್ಯಪ್ರವೃತ್ತವಾಗಲು ಸಾಮರ್ಥ್ಯವಿರುವವರು ಲಭಿಸಬಹುದು.

ಭಾರತದಲ್ಲೀಗ ಹಲವು ಬ್ಯಾಂಕೇತರ ಸಂಸ್ಥೆಗಳಿಗೆ ಕಡಿಮೆಯಿಲ್ಲ. ಧಾರಾಳವಾಗಿ ಅವು ಕಾರ್ಯ ನಿರ್ವಹಿಸುತ್ತಿವೆ. ಈ ಸಂಸ್ಥೆಗಳು ಬೇರೆ ಬೇರೆ ರೀತಿಯಿಂದ ಕಾರ್ಯಪ್ರವೃತ್ತವಾಗಿವೆ.

## ಧರ್ಮ ದುರಂತ!

ಧರ್ಮ ಹಲವರಿಗೆ ಮಾರಾಟದ
ಸರಕಾಯಿತು
ಧರ್ಮ ಹಲವರಿಗೆ ಸಂಪಾದನೆಯ
ಮಾರ್ಗವಾಯಿತು
ಧರ್ಮ ಹಲವರಿಗೆ ಭೋಗ ವಿಲಾಸದ
ಸಾಧನವಾಯಿತು
ಧರ್ಮ ಹಲವರಿಗೆ ಭ್ರಷ್ಟಾಚಾರ, ನಗ್ನತೆ
ಮುಚ್ಚುವ ವಸ್ತ್ರವಾಯಿತು
ಧರ್ಮ ಹಲವರಿಗೆ ಸ್ವಪ್ರತಿಷ್ಠೆ, ಅಧಿಕಾರದ
ಸೋಪಾನವಾಯಿತು
ಧರ್ಮ ಹಲವರಿಗೆ ಹಲವು ಪ್ರಕಾರದ
ಮೋಸದ ಜಾಲವಾಯಿತು
ಇಂತಿಪ್ಪ ಪಟ್ಟಭದ್ರ ಹಿತಾಸಕ್ತರ
ಕಪಿಮುಷ್ಟಿಯಲ್ಲಿ ಸಿಕ್ಕುಬಿದ್ದು
ಧರ್ಮ ಹಾಳಾಗಿ ಹೋಯಿತು, ಪೌರುಷ
ವಿಹೀನವಾಯಿತು
ಆದ ಕಾರಣ ಧರ್ಮದ ಮೇಲಣ
ಸಾಮಾನ್ಯನಿಗಿದ್ದ ಕಿಂಚಿತ್ ಶ್ರದ್ಧೆ,
ವಿಶ್ವಾಸವು ಕೂಡ
ಹೇಳ ಹೆಸರಿಲ್ಲದಂತೆ ಸಂಪೂರ್ಣ ಲಯ
ಹೊಂದಿತು
ಎಂದನಾ ನಮ್ಮ ಶಾಂತಿಪ್ರಿಯ ಕರ್ತಾರನು

ಮುಹಮ್ಮದ್ ಇಸ್ಮಾಈಲ್, ಅಣಬಿ

# ಮಹಿಳೆಯರೇ, ಒಂದ್ನಿಮಿಷ

ಮ ಹಿ ಳಾ ವೇ ದಿ ಕೆ

ಅನು: ಝುರೀನಾ ಸಾಲಿಹ್, ಉಪ್ಪಿನಂಗಡಿ

ಜಾತಿ, ಧರ್ಮ, ವರ್ಗವೆಂಬ ವ್ಯತ್ಯಾಸವಿಲ್ಲದೆ ಭಾರತದ ಎಲ್ಲಾ ಸ್ತ್ರೀಯರು ನಮ್ಮ ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿ ಪ್ರತಿಭಾ ಪಾಟೀಲರ ರೀತಿ ವಸ್ತ್ರ ಧರಿಸಿದರೆ ಹೇಗೆ? ಅದು ಭಾರತೀಯ ಸಂಸ್ಕೃತಿಯಾಗಿದೆ. ಆ ವೇಷದಲ್ಲಿ ಶ್ರೇಷ್ಠತೆ, ಸಭ್ಯತೆ, ಶಿಷ್ಟಾಚಾರವಿದೆ. ಮುಖ ಮತ್ತು ಮುಂಗೈಯನ್ನು ಬಿಟ್ಟು ದೇಹದ ಇತರೆಲ್ಲ ಭಾಗಗಳನ್ನು ಮರೆಸುವ ಯಾವ ವಸ್ತ್ರವೂ ಪರ್ದಾವೇ ಆಗಿದೆ. ಈ ವಸ್ತ್ರಧಾರಣೆಯಲ್ಲಿರುವ ಕೊರತೆಯಾದರೂ ಏನು? ಇದು ಯಥಾರ್ಥ ಪರ್ದಾ. ಆದ್ದರಿಂದ ಮುಸ್ಲಿಮ್ ಸ್ತ್ರೀಯರೂ ಯಾವ ಮುಲಾಜಿಲ್ಲದೆ ಇದನ್ನು ಪಾಲಿಸಬಹುದು.

ಸೀರೆಯನ್ನು ಗೌರವಯುತವಾಗಿ ಸಭ್ಯತೆಯಿಂದ ಧರಿಸಬಹುದೆಂದು ಸುಗಧ ಕುಮಾರಿ, ಕಮಲಾ ಸುರಯ್ಯಾ, ಮದರ್ ಥೆರೆಸಾ ಹಾಗೂ ಇತರ ಅನೇಕ ಮಹಿಳಾ ಮಣಿಗಳು ಪ್ರಸ್ತುತ ಪಡಿಸಿದ್ದಾರೆ. ಕೆಲವರು ಪರ ಪುರುಷರನ್ನು ಆಕರ್ಷಿಸಲು ಮನಪೂರ್ವಕವಾಗಿ ಅರೆನಗ್ನರಾಗಿ ಅಂದರೆ ಕೈ ತೋಳು, ಬೆನ್ನು, ಹೊಟ್ಟೆ, ನಾಭಿಯನ್ನು ಪ್ರದರ್ಶಿಸುತ್ತ ಸೀರೆ ಉಡುತ್ತಾರೆ. ಉದ್ದ ತೋಳಿನ ರವಿಕೆ ಧರಿಸಿದ ಅಧ್ಯಾಪಕಿ ಹಾಗೂ ಎಲ್ಲಾ ಪ್ರದರ್ಶಿಸುತ್ತಾ ಸೀರೆ ಉಡುವ ಶಿಕ್ಷಕಿ. ಈ ಇಬ್ಬರಲ್ಲಿ ಉದ್ದ ತೋಳಿನ ರವಿಕೆ ಧರಿಸಿದ ಶಿಕ್ಷಕಿ ಮಕ್ಕಳ ಗೌರವ ಸಂಪಾದಿಸುವುದು ಮತ್ತು ಸಹೋದ್ಯೋಗಿಗಳ ಆದರವನ್ನೂ ಗಳಿಸುತ್ತಾರೆ.

ಸಿನೆಮಾ ನಟಿಯರೂ ತಮ್ಮ ವಸ್ತ್ರಗಳನ್ನು ಸಭ್ಯ ರೀತಿಯಿಂದ ಧರಿಸಬೇಕು. ಅದಕ್ಕಾಗಿ ಎಲ್ಲಾ ನಟಿಯರೂ ನಿರ್ಮಾಪಕನೊಂದಿಗೆ ಹಠ ಮಾಡಿ ಒತ್ತಡ ಹಾಕಿದರೆ ಅದು ಯಶಸ್ವಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಎದೆ, ತೊಡೆಗಳನ್ನು ಪ್ರದರ್ಶಿಸದಂತಹ ಚೂಡಿದಾರ್, ಧಾವಣಿ, ಲಂಗ, ಹೌಸ್‌ಕೋಟ್ ಧರಿಸಬಹುದು. ಅಭಿನಯ ಮುಖದಲ್ಲಿದ್ದರೆ ಸಾಕು. ಮಂಜು ವಾರಿಯರ್ ಮಾಡಿದ ಹಾಗೆ. ಸಿನಿಮಾ ನಟಿಯರು ಇಂದಿನ ತರುಣಿಯರ ಆದರ್ಶ ಮತ್ತು ಮಾದರಿಯಾಗಿದ್ದಾರೆ.

ಯಾವ ಧರ್ಮದ ಸ್ತ್ರೀಯರೂ ಶರೀರ ಭಾಗಗಳನ್ನು ಸುಮ್ಮನೆ ತೆರೆದು ಸೂರ್ಯನ ಬೆಳಕಿನಿಂದ ಕಪ್ಪುಗೊಳಿಸದೆ ಪರ ಪುರುಷರಿಗೆ ಕಣ್ಣು, ಮನಸ್ಸಿನ ಮೂಲಕ ವ್ಯಭಿಚರಿಸಲು ಅವಕಾಶ ನೀಡಬಾರದೆಂದು ಪತಿಯಂದಿರು ನಿರ್ದೇಶನ ನೀಡಬೇಕು. ಇಂತಹ ಪ್ರದರ್ಶನಗಳು ವಿವಾಹೇತರ ಸಂಬಂಧ ಬೆಳೆಯಲು ಪ್ರಧಾನ ಕಾರಣವಾಗಿದೆ. ಸಂಬಂಧಗಳು ಎಲ್ಲೆ ಮೀರಿದಾಗ ಕೊಲೆಪಾತಕಗಳು, ಆತ್ಮಹತ್ಯೆಗಳು ನಡೆಯುತ್ತವೆ. ಎಲ್ಲಕ್ಕೂ ಮೂಲ ಕಾರಣ ಸದಾಚಾರದ ಅವನತಿ ಹಾಗೂ ಪಾಶ್ಚಿಮಾತ್ಯ ಅಂಧಾನುಕರಣೆಯೇ ಆಗಿದೆ. ಮದ್ಯಪಾನದ ಅತಿಯಾದ ಬಳಕೆಯೂ ಅನೈತಿಕ ಸಂಬಂಧಗಳಿಗೆ, ಕೊಲೆಗಳಿಗೆ ದಾರಿ ಸುಗಮಗೊಳಿಸುತ್ತದೆ. ಇಂದಿನ ಹೆಚ್ಚಿನ ಗಂಡಸರ ಹಾವಭಾವ ನೋಡುವಾಗ, ವಾರ್ತಾ ಮಾಧ್ಯಮಗಳನ್ನು ನೋಡುವಾಗ ಹೆಂಡ ಮತ್ತು ಹೆಣ್ಣಿಗಾಗಿ ಮಾತ್ರ ಜೀವಿಸುತ್ತಿರುವಂತೆ ತೋರುತ್ತಿದೆ. ಹೆಣ್ಣು ಮಕ್ಕಳನ್ನು ಸಹೋದರಿ, ಮಗಳು ಎಂಬ ಭಾವನೆಯಿಂದಲ್ಲ ಇಂದಿನ ಮಧ್ಯವಯಸ್ಕರು ಕೂಡಾ ನೋಡುವುದು. ನಾವು ನಮ್ಮನ್ನೂ ನಮ್ಮ ಹೆಣ್ಮಕ್ಕಳನ್ನೂ ಅತಿಯಾದ ಶ್ರದ್ಧೆ, ಕಾಳಜಿಯಿಂದ, ಸಭ್ಯ ರೀತಿಯ ವಸ್ತ್ರಧಾರಣೆಗಳ ಮೂಲಕ ಕಾಮುಕರಿಂದ ರಕ್ಷಿಸಿಕೊಳ್ಳಬೇಕಾಗಿದೆ.

ಪರ್ದಾವನ್ನು ವಿರೋಧಿಸುವವರಲ್ಲಿ ಮಹಿಳೆಯರಿಗಿಂತ ಪುರುಷರೇ ಮುಂಚೂಣಿಯಲ್ಲಿದ್ದಾರೆ. ಸ್ತ್ರೀಯರು ಪರ್ದಾವನ್ನಲ್ಲ ವಿರೋಧಿಸುವುದು ಕೆಲವು ಪರ್ದಾಧಾರಿಗಳನ್ನಾಗಿದೆ. ಫ್ಯಾಶನ್ ಹಾಗೂ ಅನುಕೂಲಕ್ಕಾಗಿ ಮಾತ್ರ ಕೆಲವೊಮ್ಮೆ ಬುರ್ಖಾ ಧರಿಸುವ ಇಸ್ಲಾಮ್ ಧರ್ಮದ ತಿಳುವಳಿಕೆ ಇಲ್ಲದ, ದೇವಭಕ್ತಿ ಕಡಿಮೆ ಇರುವವರು, ಕೇವಲ ಚಡ್ಡಿ ಮತ್ತು ಬ್ರಾ ಧರಿಸಿ ಸುತ್ತಾಡುವವರು ಕೂಡಾ ಪರ್ದಾ ಧರಿಸಿದ್ದನ್ನು ಕಂಡಿದ್ದೇವೆ. ಇಂತಹ ಪರ್ದಾ ಧಾರಿಗಳನ್ನು ವಿಮರ್ಶಿಸಬೇಕಾಗಿದೆ. ಪತಿಯಂದಿರ ಷಂಡತನವೂ ಇದಕ್ಕೆ ಕಾರಣವಾಗಿದೆ. ಒಂದು ಅಂಗಡಿಯವ ಹೇಳಿದ್ದು, ಇವರು ಪರ್ದಾ ಕೊಂಡ್ಹೋಗಿ ಟೈಲರ್ ಬಳಿ ತಮ್ಮ ಎಲ್ಲಾ ಉಬ್ಬು ತಗ್ಗುಗಳನ್ನು ಪ್ರದರ್ಶಿಸಲು ಇನ್ನೂ ಟೈಟ್ ಮಾಡಿಸುತ್ತಾರೆ.

ಪುರುಷರಾದರೋ ಬಹುವರ್ಣದ ಪರ್ದಾ ಧರಿಸಿ ಅಂದರೆ ಕುರ್ತಾ, ಪೈಜಾಮ, ದುಪ್ಪಟಾ ಧರಿಸಿ ವೇದಿಕೆ ಅಲಂಕರಿಸುತ್ತಾರೆ. ಇದರ ಮನಃಶಾಸ್ತ್ರ ಅರಿಯುವ ಬುದ್ಧಿ ನಮ್ಮ ಬುದ್ಧಿಜೀವಿಗಳಿಗೇಕೆ ಇಲ್ಲ?

ಪರ್ದಾ ಧರಿಸುವವರು ಸಭ್ಯತೆಯಿಂದ ಧರಿಸಬೇಕು. ಪರ್ದಾದೊಂದಿಗೆ ಒಂದಡಿ ಅಗಲವಿರುವ ಶಾಲ್ ಧರಿಸದೆ ದೊಡ್ಡ ದುಪ್ಪಟಾ ಬಳಸಿ ಪರ್ದಾವನ್ನು ರಕ್ಷಿಸಿ. ಇಲ್ಲದಿದ್ದರೆ ಬೇರೆ ವಸ್ತ್ರಧಾರಣೆ ಮಾಡುವುದೇ ಉತ್ತಮ. ಪರ್ದಾ ಕಪ್ಪು ಬಣ್ಣದ್ದೇ ಆಗಬೇಕೆಂದಿಲ್ಲ. ಯಾವ ಬಣ್ಣವೂ ಆಗಬಹುದು. ಬಹುವರ್ಣದ ಪರ್ದಾವನ್ನು ಎಲ್ಲಾ ಧರ್ಮದವರೂ ಧರಿಸಬಹುದು. ಅದರಿಂದ ಸಮೂಹದಲ್ಲಿರುವ ಅಸಮಾನತೆ, ವರ್ಗೀಯತೆ, ಹಿಂಜರಿಕೆ ತೊಲಗುತ್ತದೆ. ಇದರಿಂದ ಪುರುಷರಿಗೆ ತಮ್ಮ ಸ್ವಂತ ಸ್ತ್ರೀಯರಲ್ಲಿ ಮಾತ್ರ ಆಕರ್ಷಣೆ ಉಂಟಾಗುತ್ತದೆ. ಪರ್ದಾವನ್ನು ತೊಳೆದು ಪುನಃ ಉಪಯೋಗಿಸಬಹುದು. ಅದು ನೈಲಾನೇ ಆಗಬೇಕೆಂದಿಲ್ಲ. ಕಾಟನ್ ಕೂಡಾ ಬಳಸಬಹುದು. ಸೆಖೆಯ ಪ್ರಶ್ನೆಯೇ ಇಲ್ಲ. ಕನ್ಯಾಸ್ತ್ರೀಯರು, ಕನ್ಯಾ ಮರಿಯಮ್ ಧರಿಸಿದ್ದು ಪರ್ದಾವೇ ಆಗಿದೆ. ಭಾರತದ ಪುರಾತನ ಸ್ತ್ರೀಯರು ರವಿಕೆ ಧರಿಸುತ್ತಿರಲಿಲ್ಲ. ವಿಶೇಷವಾಗಿ ದಕ್ಷಿಣ ಭಾರತದ ಅವರ್ಣೀಯರು. ಟಿಪ್ಪು ಸುಲ್ತಾನ್‌ರಿಗೆ ಇದು ಇಷ್ಟವಿರಲಿಲ್ಲ. ಮಹಿಳೆಯರು ರವಿಕೆ ಧರಿಸಬೇಕೆಂದು ಟಿಪ್ಪು ಸುಲ್ತಾನ್ ಆದೇಶಿಸಿದರು. ಅಂದು ರವಿಕೆ ತೊಡುವುದೆಂದರೆ ಮತಾಂತರ ಮಾಡುವುದೆಂಬ ಅರ್ಥವಿತ್ತು. ಎದೆಯನ್ನು ಮುಚ್ಚಿಸುವುದರಿಂದ ಅಂದರೆ ಮಾನ ರಕ್ಷಿಸಿದ್ದರಿಂದ ಟಿಪ್ಪು ಮತಾಂತರ ಮಾಡಿದನೆಂಬ ಆರೋಪ ಹೊರಿಸಲಾಯಿತು. ಟಿಪ್ಪುವಿನ ಪ್ರಜಾಸ್ನೇಹ ಸದಾಚಾರವನ್ನು ಯಾರೂ ಗಮನಿಸಿಲ್ಲ.



ಮ್ಯಾಕ್ಸಿ, ಹೌಸ್‌ಕೋಟ್, ನೈಟಿ ಎಂದು ಕರೆಯಲ್ಪಡುವ ದೇಹದ ಹೆಚ್ಚಿನ ಭಾಗಗಳನ್ನು ಮರೆಸುವ ವಸ್ತ್ರ ಫ್ಯಾಶನ್ ಆಗಿ ಬಂದದ್ದು ಮಹಾ ಭಾಗ್ಯವೇ ಸರಿ. ಗಲ್ಫ್ ಉದ್ಯೋಗಿಗಳು ಮ್ಯಾಕ್ಸಿಯನ್ನು ಮೊದಲು ಪರಿಚಯಿಸಿದ್ದು. ಇಂದು ಕೂಡಾ ಏಷ್ಯನ್ ದೇಶಗಳಲ್ಲಿ ಮಹಿಳೆಯರು ಶಾಪಿಂಗ್‌ಗೆ ಮ್ಯಾಕ್ಸಿ ಹಾಕಿಯೇ ಹೋಗುವುದು. ಆ ಮ್ಯಾಕ್ಸಿಯ ತೋಳನ್ನು ಉದ್ದ ಮಾಡಿ ತಲೆಗೆ ಕನ್ಯಾಮರಿಯಮ್ಮರ ಬಟ್ಟೆ ಧರಿಸಿದರೆ ಪರ್ದಾವಾಗುತ್ತದೆ. ಇದನ್ನು ಗಲ್ಫ್‌ನಿಂದ ಬಂದವರು ಇಲ್ಲಿಯೂ ಹೊಲಿದು ಉಪಯೋಗಿಸ ತೊಡಗಿದರು.

ಇಂದು ಮ್ಯಾಕ್ಸಿಯನ್ನು ಜೋಸೆಫ್, ರಾಜೀವ್, ಮುಸ್ತಫಾ ಎಲ್ಲರ ಪತ್ನಿಯರೂ ಸಮಾನವಾಗಿ ಉಪಯೋಗಿಸುತ್ತಾರೆ. ಎಂತಹ ಆಹ್ಲಾದ, ಆನಂದಕರ. ಸರಾಗವಾಗಿ ನಡೆದಾಡಲು, ಅಡುಗೆ, ಮನೆಕೆಲಸ ಮಾಡಲು ತೋಟದ ಕೆಲಸಕ್ಕೂ ಎಲ್ಲದಕ್ಕೂ ಆರಾಮದಾಯಕ. ಸೀರೆಗಿಂತ ಬೆಲೆಯೂ ಕಡಿಮೆ. ಇದುವೇ ಮನೆಯೊಡತಿಗೆ ಪ್ರಿಯವಾದದ್ದು. ಈ ಸೌಕರ್ಯವೇ ಅರಬಿಗಳ ಪರ್ದಾವನ್ನು ಮುಸ್ಲಿಮ್ ಸ್ತ್ರೀಯರೂ ಸ್ವೀಕರಿಸಲು ಕಾರಣ. ತಮ್ಮ ಪತ್ನಿಯರ ಸೌಂದರ್ಯ ಪಕ್ಕದ್ದನೆಯವನಿಗೆ ಪ್ರಲೋಭನೆಯಾಗದಿರಲೆಂದೂ ಪರ್ದಾ ತಂದ ಪತಿಯಂದಿರೂ ಭಾವಿಸಿರಬೇಕು. ಪತಿ ನೌಕರಿಗೆ ಹೋದಾಗ ಮಗುವನ್ನು ನರ್ಸರಿಯಿಂದ ಕರೆತರಲು ಇದೇ ಮ್ಯಾಕ್ಸಿಯ ಮೇಲೆ ದುಪ್ಪಟಾ ಹಾಕಿ ನೆಂಟರು ಬಂದಾಗ ಕೋಳಿ ತರಲು ಹೋಗತೊಡಗಿದರು. ಕೆಲಸ ಮುಗಿಸಿ ಬಂದು ಸುಲಭದಲ್ಲಿ ಅದನ್ನು ಕಳಚಿಟ್ಟು ಚಾ ಮಾಡಬಹುದು. ಸೀರೆ ತೊಳೆಯುವುದಕ್ಕಿಂತ ತೊಳೆದು ಒಣಗಿಸಲು ಸುಲಭ. ಇಸ್ತ್ರಿಯ ಪ್ರಶ್ನೆಯೇ ಇಲ್ಲ. ಪರ್ದಾ ಧರಿಸಿದರೆ ಉಗ್ರವಾದಿಯೆಂದು ಹೇಳುತ್ತಿರುವ ಈ ಕಾಲದಲ್ಲಿ ಪೋಪರು, ಅರಬಿಗಳು, ಸಾಯಿಬಾಬಾ ಎಲ್ಲರೂ ಪರ್ದಾದಲ್ಲಿದ್ದಾರೆ. ಮುಸ್ಲಿಮ್ ಸ್ತ್ರೀಯರು ಪರ್ದಾ ಧರಿಸಿದರೆ ಮಾತ್ರ ವಿರೋಧ ಅವಹೇಳನ, ಪ್ರತಿಭಟನೆ. ಮೇಲೆ ಹೇಳಿದ, ಮೇಲೆ ತಿಳಿಸಿದ ಎಲ್ಲಾ ಪುರುಷರ ಮುಖ ಮತ್ತು ಮುಂಗೈ ಮಾತ್ರ ಕಂಡಿದ್ದೇವೆ. ಮುಸ್ಲಿಮ್ ಸ್ತ್ರೀಯರು ತಮ್ಮ ಸುಂದರ ಮುಖಾರವಿಂದವನ್ನು ಮಾತ್ರ ಮುಚ್ಚುತ್ತಾರೆ. ಅವರಿಗೂ ದೇಶಪ್ರೇಮ, ಸಹಾನುಭೂತಿ, ಕರುಣೆ ಎಲ್ಲಾ ಇದೆ. ಪರ್ದಾ ಉಗ್ರವಾದವಲ್ಲ. ಸೌಕರ್ಯವಾಗಿದೆ. ಅದನ್ನು ಅವರು ಅನುಭವಿಸಲಿ.

## ಶರೀಅತ್‌ನಿಂದ ಪಲಾಯನ

ಕುಟುಂಬ ಒಂದು ಅಧ್ಯಯನ-45

ಪ್ರೊ ಉಮರ್ ಹಯಾತ್ ಘೋರಿ

ಇಸ್ಲಾಮೀ ಕಾನೂನಿನಂತೆ ಮಹರ್ ಪಾವತಿಸದೆ ಗಂಡ ಮರಣ ಹೊಂದಿದರೆ ಆತನ ಆಸ್ತಿಯಿಂದ ಎಲ್ಲದಕ್ಕಿಂತ ಮುಂಚೆ ಪತ್ನಿಗೆ ಸಲ್ಲಬೇಕಾಗಿರುವ ಮಹರನ್ನು ಪಡೆಯಬೇಕಾಗುತ್ತದೆ. ಇದರಿಂದ ತಿಳಿಯುವುದೇನೆಂದರೆ ಇಸ್ಲಾಮ್ ಯಾವ ಪರಿಸ್ಥಿತಿಯಲ್ಲೂ ಮಹಿಳೆಯ ಶೋಷಣೆಯಾಗುವುದನ್ನು ಸಹಿಸದು. ಆದ್ದರಿಂದ ಹುಡುಗಿಗಾಗಿ ತಂದೆಯ ಬಳಿಯಿರುವ ವಾರೀಸನ್ನು ಪಡೆಯುತ್ತಿದ್ದೇವೆಂದು ವರದಕ್ಷಿಣೆಯನ್ನು ಸಮರ್ಥಿಸುತ್ತಾ. ವಿವಾಹ ಸಂದರ್ಭದಲ್ಲಿ ಕೇಳುವುದೆಲ್ಲ ಇಸ್ಲಾಮೀ ಶರೀಅತ್‌ನಿಂದ ಪಲಾಯನ ಮಾಡುವುದಾಗಿರುತ್ತದೆ. ವರದಕ್ಷಿಣೆಯ ಮಾರುಕಟ್ಟೆಯನ್ನು ನಾವು ನೋಡಿಲ್ಲವೇ? ಹುಡುಗಿಯ ಮಹರಾಗಿ ನೂರು ರೂಪಾಯಿ. ಆದರೆ ಹುಡುಗನ ರೇಟು 10,000 ರೂಪಾಯಿ ಇರುತ್ತದೆ. ಒಟ್ಟಿನಲ್ಲಿ 10 ಪಟ್ಟು ಅಧಿಕ ಹಣವನ್ನು ವರನಿಗಾಗಿ ವಧುವಿನ ತಂದೆ ಬಿಚ್ಚಬೇಕಾಗುತ್ತದೆ.

ಯೋಚಿಸಿ ವಿಚಾರ ಮಾಡಿ ನೋಡಿ. ನಿಕಾಹ್‌ನ ಶರ್ತ ಮಹರಾಗಿರುವ ವೇಳೆ ವರದಕ್ಷಿಣೆಯ ರಖಮನ್ನು ಹೊರಿಸಲಾಗಿರುವುದು ಧರ್ಮದ ಅವಹೇಳನವಲ್ಲವೇ? ಪ್ರವಾದಿವರ್ಯರು(ಸ) ಇಂತಹ ನಿಕಾಹನ್ನು ತನ್ನ ಚರ್ಯೆ ಎಂದಿದ್ದಾರೆಯೇ? ಇಲ್ಲಿ ನಿರ್ಲಕ್ಷ್ಯ ವಿನಾಶವಾಗಿದೆ. ಒಂದು ವೇಳೆ ಮುಸ್ಲಿಮ್ ಸಮುದಾಯ ಮತ್ತು ಅದರ ವಕ್ತಾರರು ವರದಕ್ಷಿಣೆ ಸಂಪ್ರದಾಯದ ಕಡೆಗೆ ಗಮನಹರಿಸದಿದ್ದರೆ ಅಥವಾ ಮೂಕಪ್ರೇಕ್ಷಕರಂತಾದರೆ ಮುಸ್ಲಿಮರ ಪರಿಸ್ಥಿತಿ ಚಿಂತಾಜನಕವಾಗಬಹುದು. ಈ ತನಕ ಕೆಲವರಾದರೂ ವರದಕ್ಷಿಣೆಯ ಕಬಂಧ ಬಾಹುವಿನಿಂದ ಸುರಕ್ಷಿತರೆಂದುಕೊಂಡಿದ್ದರೆ ಕೆಲವೇ ಸಮಯದಲ್ಲಿ ಅವರನ್ನೂ ಅದು ಕೊಚ್ಚಿಕೊಂಡು ಹೋಗಲಿದೆ. ಅನಂತರ ಈ ಸಮಸ್ಯೆಯನ್ನು ಬಗೆಹರಿಸುವುದು ಕಠಿಣವಾಗುತ್ತದೆ.

ಇನ್ನೊಂದು ವಿಚಾರವನ್ನು ನೋಡಿ. ಹುಡುಗರ ವಿವಾಹಕ್ಕೆ ಹುಡುಗಿ ಕಡೆ ಪ್ರಪೋಸಲ್ ನೀಡುವಾಗ ಹುಡುಗಿಯ ಅಪ್ಪನ ಕಾರುಬಾರು ಹೇಗೆ ಎಂದು ನೋಡುತ್ತಾರೆ. ಅವರ ಆರ್ಥಿಕ ಸ್ಥಿತಿ ಉತ್ತಮವೆಂದಾದರೆ ಮದುವೆಯಾದ ನಂತರ ತುಂಬ ಬೆಲೆಬಾಳುವ ವಸ್ತು ನಗದು ವಗೈರೆಗಳನ್ನು ಲಪಟಾಯಿಸಬಹುದು ಎಂಬ ದುರಾಲೋಚನೆಯಿಂದ ಕೂಡಿರುತ್ತದೆ. ಇದು ಕೂಡಾ ವರದಕ್ಷಿಣೆಯ ಹಾವಳಿಯ ಇನ್ನೊಂದು ರೂಪಕ್ಕೆ ಬಂದು ಮುಟ್ಟಬಹುದು. ನೋಡಿ, ವರದಕ್ಷಿಣೆಯ ಕುರಿತು ಸಂಬಂಧಪಟ್ಟವರು ನಿರ್ಲಕ್ಷ್ಯ ತೋರಿದರೆ ಸಮಾಜ ಅಧಃಪತನಕ್ಕೆ ತಲುಪುವುದರಲ್ಲಿ ಸಂಶಯವಿಲ್ಲ. ಲೈಂಗಿಕ ಅರಾಜಕತೆಗೂ ಅದು ಕಾರಣವಾಗಬಹುದು. ಅಲ್ಲಾಹನು ಆ ಕೆಟ್ಟ ಧನಗಳಿಂದ ಸಮುದಾಯವನ್ನು ರಕ್ಷಿಸಲಿ.

## ಹಕ್ಕಿ ಪಿಕ್ಕಿ

ಸುಪ್ರಭಾತದಲ್ಲಿ ಗೂಡು ಬಿಟ್ಟ ಹಕ್ಕಿ
ಕೂಡಿಡಲಿಲ್ಲ ಆಹಾರ ನಾಳೆಗೆ
ಆದರೂ ಖಾಲಿ ಹೊಟ್ಟೆಯಲ್ಲಿ
ಸೇರಲಿಲ್ಲ ಮರಳಿ ಗೂಡಿಗೆ
ಸುಪ್ರಭಾತದಿ ಮನೆ ಬಿಟ್ಟ ಮಾನವ
ಕೂಡಿಟ್ಟಿದ್ದ ಆಹಾರ ನಾಳೆಗೆ
ಆದರೂ ಖಾಲಿ ಹೊಟ್ಟೆಯಲ್ಲಿ
ಮರಳಿದ ಮನೆಗೆ

ಜಲೀಲ್ ಮುಕ್ರಿ, ಉಪ್ಪಿನಂಗಡಿ

## ಬಾಲಪಂಕ್ತಿ



ತಂಝೀಲ್

# ವಚನದ ಮಹತ್ವ

ಯುದ್ಧ! ಅತೀ ಭೀಕರ ಯುದ್ಧ ನಡೆಯಿತು.

ಖಲೀಫರ ತಂತ್ರಪೂರ್ಣವಾದ ಹೋರಾಟದಿಂದಾಗಿ ಶತ್ರು ಸೈನ್ಯ ಸೋತು ಕಂಗಾಲಾಯಿತು. ಬೆದರಿದ ಶತ್ರು ಸೇನೆಗಳಲ್ಲೊಂದು ವಿಭಾಗವು ರಣಾಂಗಣದಿಂದ ಕಾಲ್ಕಿತ್ತಿತು. ಉಮರ್‌ರ(ರ) ಸೇನೆಯು ಶತ್ರು ಸೈನ್ಯದ ಹಲವರನ್ನು ಬಂಧಿಸಿತು.

ಬಂಧಿಸಲ್ಪಟ್ಟವರಲ್ಲಿ ಶತ್ರು ಸೇನಾನಾಯಕ ಹುರ್ಮೂಸಾನ್ ಕೂಡಾ ಸೇರಿದ್ದನು. ಅವರನ್ನು ಖಲೀಫರ ಮುಂದೆ ಸೇನಾಧಿಕಾರಿಗಳು ತಂದು ನಿಲ್ಲಿಸಿದರು.

ಹುರ್ಮೂಸಾನ್ ಮತ್ತು ಖಲೀಫರು ಮುಖಾಮುಖಿಯಾದರು. ಖಲೀಫ ಉಮರ್ ಶತ್ರು ಸೇನಾನಾಯಕನನ್ನು ನೋಡುತ್ತಾ, “ನಿಜವಾಗಿಯೂ ನಮ್ಮ ಸೈನ್ಯದ ಮುಂದೆ ನಿಮ್ಮ ಸೈನ್ಯವು ಸೋತು ಹೋಗಿದೆ” ಎಂದು ಹೇಳಿದರು.

ಅದಕ್ಕೆ ಆತ “ಅದನ್ನು ನಾನು ಅಂಗೀಕರಿಸುವೆನು” ಎಂದ.

“ತಾವೀಗ ನಮ್ಮ ಸೆರೆಯಾಳಾಗಿದ್ದೀರಿ”

“ಸರಿ ಅದು ನನಗೊತ್ತು”

“ತಮಗೆ ಸಿಗಲಿರುವ ಶಿಕ್ಷೆ ಏನೆಂದು ನಿಮಗೆ ಗೊತ್ತೇ?”

ಎಂದು ಖಲೀಫರು ಕೇಳಿದಾಗ ಆತ ಮೌನಿಯಾದ. ಖಲೀಫರು ಮುಂದುವರಿಸುತ್ತಾ ನಿಮಗೆ ಸಿಗಲಿರುವುದು ಗಲ್ಲು ಶಿಕ್ಷೆ. ತಾವು ಸಾಯುವುದಕ್ಕಿಂತ ಮುಂಚೆ ಕೊನೆಯ ಆಗ್ರಹವೇನಾದರೂ ಇದೆಯೇ? ಇದ್ದರೆ ನಮಗೆ ತಿಳಿಸಿರಿ.

ಹಾಗಾದರೆ ಕುಡಿಯಲು ಸ್ವಲ್ಪ ನೀರು ಕೊಡುತ್ತೀರಾ ಎಂದು ಕೇಳಿದ.

ಬಲಿಷ್ಠನೂ ಯೋಧನೂ ಆದ ಸೇನಾಧಿಕಾರಿ ಹುರ್ಮೂಸ್‌ನ ಧ್ವನಿಗೆ ಏನಾದರೂ ತೊಂದರೆಯಾಯಿತೇ ಎಂದು ಯೋಚಿಸುತ್ತಾ ಯಾರಿದ್ದಾರೆ ಅಲ್ಲಿ, ಬೇಗ ನೀರು ತಂದುಕೊಡಿರಿ ಎಂದು ಆಜ್ಞಾಪಿಸಿದರು.

ಕೂಡಲೇ ಓರ್ವ ಸೈನಿಕ ನೀರು ತಂದು ಕೊಟ್ಟನು.

ನೀರಿನ ಪಾತ್ರೆಯನ್ನು ಪಡೆದ ಹುರ್ಮೂಸಾನ್, ಖಲೀಫರೇ ಈ ನೀರು ಕುಡಿದು ಮುಗಿಯುವ ವರೆಗೆ ತಾವು ನನ್ನನ್ನು ವಧಿಸಬಾರದು ಎಂದು ಭಿನ್ನವಿಸಿ ಕೊಳ್ಳುತ್ತೇನೆ.

“ಇಲ್ಲ ವಧಿಸಲಾರೆ”

“ದೇವನಾಣೆ?”

“ಹೌದು ದೇವನಾಣೆ! ವಧಿಸಲಾರೆ.”

ಹುರ್ಮೂಸಾನ್ ಕ್ಷಣ ಮಾತ್ರದಲ್ಲಿ ನೀರನ್ನು ನೆಲಕ್ಕೆ ಸುರಿದನು.

ಖಲೀಪರು ಚಿಂತಿತರಾದರು. ಕಂಗಾಲಾದರು, ಬೆವರಿದರು.

“ನಿಜಕ್ಕೂ ಇದನ್ನು ನಾನು ಊಹಿಸಿರಲಿಲ್ಲ” ಉಮರ್ ನಿರಾಶೆಯಿಂದ ನುಡಿದರು.

ಖಲೀಫರು ಶಾಂತರಾದರು. ಹೌದು ಸರ್ವಶಕ್ತನಾದ ಜಗದೊಡೆಯನ ಹೆಸರಲ್ಲಿ ಪ್ರಮಾಣ ಮಾಡಿದ್ದೇನೆ.

“ತಾವು ಬುದ್ಧಿವಂತರೆಂಬುದರಲ್ಲಿ ಅನುಮಾನವಿಲ್ಲ ಎನ್ನುತ್ತಾ ಖಲೀಫ ಉಮರ್ ಕೊಟ್ಟ ಮಾತನ್ನು ಪಾಲಿಸಲು ಸಿದ್ಧರಾಗುತ್ತಾರೆ. ಇನ್ನು ನಿಮ್ಮನ್ನು ವಧಿಸಲು ನನಗೆ ಅವಕಾಶ ವಿಲ್ಲ. ಬುದ್ಧಿವಂತನೂ ವಿವೇಕ ಶಾಲಿಯೂ ಆದ ತಮಗಿನ್ನು ಹೋಗಬಹುದು ಎಂದು ಹುರ್ಮೂಸಾನ್‌ರನ್ನು ಬಂಧಮುಕ್ತಗೊಳಿಸಿ ಬಿಡುಗಡೆ ಮಾಡಿದರು.



## ವಿಶ್ವಾಸ... (6ನೇ ಪುಟದಿಂದ)

**ಉಮರುಲ್ ಫಾರೂಖ್(ರ) ಆಗಿದ್ದರು. ಒಮ್ಮೆ ಮೊದಲೇ ವೃದ್ಧೆಗೆ ಅಗತ್ಯವಿರುವ ಕೆಲಸಗಳನ್ನು ಬೇರೆ ಯಾರೋ ಮಾಡಿಕೊಟ್ಟಿರುವುದು ಕಂಡುಬಂತು. ಆ ನಂತರದ ದಿನಗಳಲ್ಲೂ ಇದು ಅವರ್ತಿಸಿದಾಗ ಉಮರ್‌ರಿಗೆ ಆಶ್ಚರ್ಯವಾಯಿತು. ನಾನು ಬರುವುದಕ್ಕಿಂತ ಮುಂಚೆಯೇ ಯಾರಿದೆಲ್ಲವನ್ನು ಮಾಡುವುದು? ವ್ಯಕ್ತಿಯನ್ನು ಕಂಡುಹಿಡಿಯಲು ಉಮರ್ ಒಂದು ದಿನ ಪ್ರಭಾತಕ್ಕೆ ಮುಂಚೆಯೇ ಬಂದು ವೃದ್ಧೆಯ ಮನೆಯ ಹಿಂದುಗಡೆ ಅಡಗಿ ನಿಂತರು. ಆಗ ಏನದ್ಭುತ! ಖಲೀಫ ಅಬೂಬಕ್ಕರ್(ರ) ವೃದ್ಧೆಗೆ ಅಗತ್ಯವಾದ ಎಲ್ಲಾ ಸಾಮಗ್ರಿಗಳೊಂದಿಗೆ ನಡೆದು ಬರುತ್ತಿದ್ದಾರೆ. ತಕ್ಷಣ ಉಮರುಲ್ ಫಾರೂಕ್(ರ) ಜೋರಾಗಿ ಕೂಗಿ ಹೇಳಿದರು, ಓ ನನಗಿಂತ ಮುಂಚೆ ಇದು ಮಾಡುತ್ತಿರುವುದು ತಾವಾ?**

**ಆಢಳಿತಾಧಿಕಾರಿಯಾಗಿರುತ್ತಾ ಒಂದನೇ ಖಲೀಫಾ ಎಷ್ಟು ವಿನಯವಂತರಾಗಿದ್ದರೆಂಬುದು ಇದರಿಂದ ವ್ಯಕ್ತವಾಗುತ್ತದೆ.**

## ಅರಬಿ ಸುಡೊಕು 81

| | | | | | |
|---|---|---|---|---|---|
| | | ث | ب | | |
| | | ح | ا | | |
| ث | ح | | | ا | ت |
| ت | ج | | | ح | ب |
| | | ت | ح | | |
| | | ج | ت | | |

**ಅರಬಿ ಸುಡೊಕು -80ರ ಉತ್ತರ**

| | | | | | |
|---|---|---|---|---|---|
| ا | ت | ب | ح | ج | ث |
| ح | ث | ج | ت | ا | ب |
| ث | ا | ت | ج | ب | ح |
| ب | ح | ج | ث | ت | ا |
| ت | ب | ث | ا | ح | ج |
| ح | ج | ا | ب | ث | ت |

**ಆಟದ ನಿಯಮ:**

**ಖಾಲಿ ಜಾಗದಲ್ಲಿ ا ನಿಂದ ح ವರೆಗಿನ ಅರಬಿ ಅಕ್ಷರಗಳನ್ನು ತುಂಬಬೇಕು. ಉದ್ದ ಸಾಲು, ಅಡ್ಡ ಸಾಲು ಹಾಗೂ 2x3 ಜಾಗದ ಚೌಕದಲ್ಲಿ ಯಾವುದೇ ಅಕ್ಷರ ಎರಡು ಬಾರಿ ಬರುವಂತಿಲ್ಲ. ನಿಮ್ಮ ಜಾಣ್ಮೆಗೆ, ತಾಳ್ಮೆಗೆ, ಬುದ್ಧಿವಂತಿಕೆಗೆ ಇಲ್ಲಿದೆ ಚಾಲೆಂಜ್!**

## ಮಿನಿ ಕಥೆ

# ಉಗ್ರ

ಪಿ.ಎ. ಸಿರಾಜ್ ಇರುವೈಲು, ರಿಯಾದ್

**ಪಟ್ಟಣದಲ್ಲಿರುವ ಒಂದು ಮಾರುಕಟ್ಟೆಯ ಹತ್ತಿರ ಜನನಿಬಿಡ ಸ್ಥಳದಲ್ಲಿ ಬಾಂಬ್ ಸ್ಫೋಟಗೊಂಡಿತು. ಆ ಪ್ರದೇಶದಲ್ಲಿರುವ ಅಂಗಡಿ, ವಸತಿ ಕಟ್ಟಡಗಳು ಹಾನಿಗೊಳಗಾದವು. ಅದಲ್ಲದೇ ಹಲವು ಸಾವು ನೋವು ಸಂಭವಿಸಿತು.**

**ಈ ಪ್ರಕರಣವನ್ನು ಬೇಧಿಸಲು ಹಲವಾರು ತನಿಖಾ ತಂಡಗಳ ರಚನೆಯಾದವು. ಆದರೆ ಯಾವುದೇ ಸುಳಿವು ಸಿಗಲಿಲ್ಲ. ಯಾರದೋ ಒಬ್ಬರ ಮೊಬೈಲ್ ಕ್ಯಾಮರಾದಲ್ಲಿ ಒಬ್ಬ ಗಡ್ಡಧಾರಿ ವ್ಯಕ್ತಿಯೊಬ್ಬ ಕಸದ ತೊಟ್ಟಿಯಲ್ಲಿ ಒಂದು ಚೀಲವನ್ನು ಹಾಕುವ ಅಥವಾ ತೆಗೆಯುವ ಅಸ್ಪಷ್ಟವಾದ ಚಿತ್ರಣವುಳ್ಳ ವೀಡಿಯೋ ಕ್ಲಿಪ್ಪಿಂಗ್ ದೊರೆಯುತ್ತದೆ.**

**ಆ ವ್ಯಕ್ತಿಯನ್ನು ಸೂಕ್ಷ್ಮವಾಗಿ ಪರಿಶೋಧಿಸಿದಾಗವು ಈತನು ಸಿಮಿಯ ಸದಸ್ಯನೆಂದು ಕೆಲವು ತನಿಖಾಧಿಕಾರಿಗಳು ಹೇಳಿದರೆ, ಇನ್ನುಳಿದ ತನಿಖಾಧಿಕಾರಿಗಳು ಅಲ್‌ಖೈದಾ, ಲಷ್ಕರ್ ತಯ್ಯಿಬ, ಜೈಶ್ ಎ ಮುಹಮ್ಮದ್ ಮುಂತಾದ ಸಂಘಟನೆಯ ಸದಸ್ಯನೆಂದು ಹೀಗೆ ಹಲವಾರು ರೀತಿಯ ಅಭಿಪ್ರಾಯವನ್ನು ಮಂಡಿಸಿ ಅದನ್ನು ಪತ್ರಿಕೆಯಲ್ಲಿ ಕೊಡಲಾಯಿತು. ಹಾಗೆಯೇ ಅವನನ್ನು ಹುಡುಕಿ ಸೆರೆಹಿಡಿಯಲಾಯಿತು. ಹಾಗೇಯೇ ಪೊಲೀಸ್ ಕಸ್ಟಡಿಯಲ್ಲಿ ವಿಚಾರಣೆ ಆರಂಭವಾದಾಗ ಮೊದಲು ಆತನು ಕುಡಿಯಲು ನೀರು ಕೇಳಿದನು. ನೀರು ಕೊಟ್ಟಾಗ, ಬಿರಿಯಾನಿ ಕೇಳಿದನು, ಬಿರಿಯಾನಿ ಕೊಟ್ಟಾಗ ಮದ್ಯಬೇಕೆಂದು ಹೀಗೆ ಅವನ ಎಲ್ಲಾ ಆಶೆಯನ್ನು ಪೊಲೀಸರು ಪೂರೈಸಿದರು. ಆನಂತರ ಪೊಲೀಸರು ಕೇಳಿದ ಎಲ್ಲಾ ಪ್ರಶ್ನೆಗೆ ಉತ್ತರಿಸಿದನು. ಹಾಗೇನೇ ಅಧಿಕಾರಿಯೊಬ್ಬರು ಪತ್ರಿಕಾಗೋಷ್ಠಿ ಕರೆದು ಗಡ್ಡಧಾರಿ ಆರೋಪಿಯು ಎಲ್ಲಾ ತಪ್ಪನ್ನು ಒಪ್ಪಿಕೊಂಡಿದ್ದಾನೆ! ಆದರೆ ಇನ್ನುಳಿದ ಬಾಂಬ್‌ಗಳು ಎಲ್ಲಿವೆ, ಹೇಗೇ ತಯಾರಿಸಿದ್ದು ಎಂಬುದನ್ನು ಮಾತ್ರ ಒಪ್ಪಿಕೊಳ್ಳುತ್ತಿಲ್ಲ. ಅವನನ್ನು ತೀವ್ರ ತನಿಖೆಗೆ ಒಳಪಡಿಸಲಾಗುವುದು ಎಂದು ಹೇಳಿದರು.**

**ಹೀಗೆ ದಿನಗಳುರುಳಿದವು. ಆ ಬಳಿಕ ಉಗ್ರವಾದಿಯ ಸುದ್ದಿ ಮಾಧ್ಯಮಗಳಲ್ಲಿ ಕಾಣಿಸಲೇ ಇಲ್ಲ. ಪೊಲೀಸರು ಆ ಬಗ್ಗೆ ಹೇಳುತ್ತಲೂ ಇಲ್ಲ.**

**ಕುತೂಹಲಗೊಂಡ ಓರ್ವ ಪತ್ರಕರ್ತನಲ್ಲಿ ಪೊಲೀಸನೊಬ್ಬ ಹೇಳಿದ, “ಆತ ಭಿಕ್ಷುಕ, ಅರೆಹುಚ್ಚ. ಎರಡು ದಿನಗಳೊಳಗೆ ಬಿಟ್ಟು ಬಿಟ್ಟಿದ್ದೇವೆ.”**

## ಪೇಜಾವರ ಶ್ರೀಗಳಿಗೆ... (5ನೇ ಪುಟದಿಂದ)

ಸಲಹೆ ಇನ್ನೊಂದೆಡೆ, ಕೋರ್ಟಿನ ಹೊರಗೆ ಮಾತುಕತೆ ನಡೆಸೋಣ ಎಂಬ ಪ್ರೆಶರ್ ಮತ್ತೊಂದೆಡೆ.

ಈಗ ಪೇಜಾವರ ಶ್ರೀಗಳು ದೇಶದ ಸಾಮರಸ್ಯದ ಪ್ರಶ್ನೆ ಎತ್ತಿರುವುದು ಸುಪ್ರೀಮ್ ಕೋರ್ಟಿನ ತೀರ್ಪು ವಿಹಿಂಪನ ವಿರುದ್ಧವಾದರೆ... ಎಂಬ ಆಂತಕದಿಂದಾಗಿರಬಹುದು ಎಂದನ್ನಿಸುತ್ತದೆ. ದೇಗುಲದ ಪಕ್ಕ ಮಸೀದಿಯಿದೆ ಎಂದು ಮುಸ್ಲಿಮರು ಎಲ್ಲಾದರೂ ಗಲಾಟೆ ಮಾಡಿದ ಉದಾಹರಣೆ ಇದೆಯಾ? ಮಸೀದಿಗೆ ಹಂದಿ ಮಾಂಸ ತಂದು ಹಾಕಿದಾಗ ಅವರು ಕುಪಿತಗೊಂಡಿರಬಹುದು. ಮಸೀದಿಯನ್ನು ಅಪವಿತ್ರಗೊಳಿಸಿದರೆ ಅವರು ನೊಂದಿರಬಹುದು. ಅದಕ್ಕೆ ಮಂದಿರದ ಬಳಿ ಮಸೀದಿ ಇದೆ ಎಂಬ ಕಾರಣವೇ ಅಲ್ಲ. ಈ ದೇಶದಲ್ಲಿ ಹುಡುಕಾಡಿ ನೋಡಿದರೆ, ಮಸೀದಿಯ ಹತ್ತಿರ ದೇವಸ್ಥಾನವೂ ಇರಬಹುದು. ದೇವಸ್ಥಾನದ ಹತ್ತಿರ ಮಸೀದಿಯೂ ಇರಬಹುದು. ಮಸೀದಿ–ದೇವಸ್ಥಾನದ ಬಗ್ಗೆ ಪೇಜಾವರ ಶ್ರೀಗಳು ತಾಳುವಂತಹ ಯಾವ ಅಸಮಾಧಾನದ ಹೊಗೆಯೂ ಎದ್ದ ಉದಾಹರಣೆಯಿಲ್ಲ. ತಟಸ್ಥ ನಿಲುವಿನ ಪುರಾತತ್ವ ಇಲಾಖೆಯ ಜನರಿಂದ ಸುಪ್ರೀಮ್ ಕೋರ್ಟು ಉತ್ಖನನ ನಡೆಸಿದರೆ, ಬಾಬರಿ ಮಸೀದಿಯ ಭೂಮಿಯನ್ನು ಬಾಬರಿ ಮಸೀದಿಗೆ ಬಿಟ್ಟುಕೊಡಬೇಕಾಗುತ್ತದೆ ಎಂಬುದಂತೂ ಸತ್ಯ. ಹಾಗಾಗಿ ಮುಸ್ಲಿಮರೇ ತ್ಯಾಗ ಮಾಡಿ ಎಂಬ ಕೂಗು ಎಬ್ಬಿಸಲಾಗಿದೆ. ಆ ಕೂಗಿಗೆ ಪೇಜಾವರ ಶ್ರೀಗಳು ಸಾರಥ್ಯ ವಹಿಸಿದ್ದಾರೆ ಎಂದು ಹೇಳಬೇಕಾಗುತ್ತದೆ.

8189 ಪುಟಗಳ ತೀರ್ಪಿನಲ್ಲಿ ಅಂತಿಮವಾಗಿ ಹೊರಬಿದ್ದುದು ಬಾಬರಿ ಭೂಮಿಯ ಮೂರು ಪಾಲು. ಮುಸ್ಲಿಮರಿಗೆ ಅಥವಾ ಹಿಂದೂಗಳಿಗೆ ಆಗ ಬೇಕಾದ ಭೂಮಿ ಹೀಗೆ ಪಾಲಾದುದು ವಿಚಿತ್ರವೇನೋ ನಿಜ. ಹಾಗಂತ ಕೊಡುವುದಾದರೆ ಎಲ್ಲವನ್ನೂ ಕೊಡಿ, ಒಂದು ಪಾಲು ಕೊಡುವುದಾದರೆ ನೀವೇ ಇಟ್ಟುಕೊಳ್ಳಿ ಎಂದು ಹೇಳಿಕೊಳ್ಳುವುದಕ್ಕೆ ಮುಸ್ಲಿಮರು ಮಕ್ಕಳೂ ಅಲ್ಲ. ಯಾರಲ್ಲಿ ಅವರು ಕರುಣೆಯ ಭಿಕ್ಷೆಯನ್ನು ಕೇಳಬೇಕಾಗಿಲ್ಲ. 8189 ಪುಟಕ್ಕೆ ಇನ್ನೂ ಹತ್ತು ಸಾವಿರ ಪುಟದ ತೀರ್ಪೇ ಹೊರಬರಲಿ, ಅವರು ತಮ್ಮ ನ್ಯಾಯವಾದ ಹಕ್ಕಿಗಾಗಿ ಸುಪ್ರೀಮ್ ಕೋರ್ಟಿನ ತೀರ್ಪಿಗೆ ಕಾಯುತ್ತಾರೆ. ದೇಶದ ಸಾಮರಸ್ಯ ಉಳಿಸಬೇಕಾದುದು ಬರೇ ಮುಸ್ಲಿಮರ ಹೊಣೆಯಲ್ಲ. ಹಿಂದೂಗಳದ್ದೂ ಆಗಿದೆ. ಇಲ್ಲಿ ಸರಕಾರ ಇರುವುದು ಇವನ್ನೆಲ್ಲ ನೋಡಿಕೊಳ್ಳುವುದಕ್ಕೆ. ಆದುದರಿಂದ ಸಾಮರಸ್ಯದ ಬಗ್ಗೆ ಆತಂಕ ಪಡುವ ಕಷ್ಟವನ್ನು ಪೇಜಾವರರು ಯಾಕೆ ಹೊತ್ತುಕೊಳ್ಳಬೇಕಾಗಿದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಇಂದು ಬಾಬರಿ ಮಸೀದಿಯ 2.67 ಎಕ್ರೆ ಜಾಗದಲ್ಲಿ ಮಸೀದಿ ಕಟ್ಟಬಾರದು. ಬೇರೆ ಎಲ್ಲಿ ಬೇಕಾದರೂ ಕಟ್ಟಲಿ ಎನ್ನುತ್ತಿದೆಯಲ್ಲವೇ ವಿಶ್ವಹಿಂದು ಪರಿಷತ್? ಮಸೀದಿಯನ್ನು ಬಲಿಕೊಡುವುದಕ್ಕೆ ಮುಸ್ಲಿಮರಿಗೆ ಉಪದೇಶಿಸುವುದಕ್ಕಿಂತ ಶ್ರೀಗಳು ತಮ್ಮ ಪರಿಷತ್‌ನವರಿಗೆ ಸಹನೆಯಿಂದಿರಲು ಉಪದೇಶಿಸಿದರೆ ಬಹಳ ಉತ್ತಮ.

ಕಥೆ



# ಆಲಿ ಸೈತಾನ್

✍ ಹುಸೈನ್ ಮಂಚಿಲ, ತೊಕ್ಕೊಟ್ಟು

ಮುಖದಲ್ಲಿ ಮಂದಹಾಸ ಬೀರಿತು. ಅತ್ಯಂತ ಉತ್ಸಾಹದಿಂದ ಬಾವಾಕ ಮತ್ತು ಫಾತಿಮಾ ಮಕ್ಕಳು ಮನೆ ಖಾಲಿ ಮಾಡಿ ಹೊರಟೇ ಬಿಟ್ಟರು.

1 ಲಕ್ಷ ಲೀಸಿನ ಮನೆಗಾಗಿ...

ಅದೊಂದು ದೊಡ್ಡದಾದ ಮನೆ. ಪರಿಸರದಲ್ಲಿ ತುಂಬಾ ಮನೆಗಳಿದ್ದುವು. ನಿರ್ಜನವಾದ ಪ್ರದೇಶವೇನಲ್ಲ. ಬಾವಾಕನ ಹಿರಿಯರಿಂದ ಬಂದ ಮನೆಯಾಗಿತ್ತು. ಬಾವಾಕ 28 ವರುಷಗಳಿಂದ ವಾಸವಾಗಿದ್ದ ಮನೆ. 60 ಸೆಂಟ್ಸ್ ಜಾಗ ಮತ್ತು 50 ತೆಂಗಿನ ಮರಗಳು ಇದ್ದವು. ಬಾವಾಕನಿಗೆ 3 ಜನ ಹೆಣ್ಣು ಮಕ್ಕಳು. ದೊಡ್ಡ ಮಗಳಿಗೆ 13 ವರ್ಷ ಪ್ರಾಯವಾದಾಗ ಬಾವಾಕ ಮನೆ ಮಾರಲು ಹೊರಟಿದ್ದರು. ಆದರೆ ಖರೀದಿಗೆ ಯಾರೂ ಮುಂದೆ ಬರಲಿಲ್ಲ. ಬಾವಾಕನಿಗಾದರೋ ಅನಾರೋಗ್ಯ. ಪತ್ನಿ ಫಾತಿಮಾ ದುಡಿದು ಮಕ್ಕಳನ್ನು ಸಾಕುತ್ತಿದ್ದರು. ಮನೆ ಖರೀದಿಗಾಗಿ ಯಾವನೇ ಬಂದರೂ ಹಿಂದೆ ಸರಿಯುತ್ತಿದ್ದರು. ಅದಕ್ಕೆ ಕಾರಣವೂ ಇತ್ತು. ಯಾರು ಖರೀದಿಗೆ ಬಂದರೂ ಆ ಮನೆಯಲ್ಲಿ ಏನೋ ಉಪದ್ರವಿದೆ. ರಾತ್ರಿ ಹೊತ್ತಲ್ಲಿ ಭಯಂಕರವಾದ ಶಬ್ದಗಳು. ಮನೆಯ ಮಾಡು ನೇತಾಡುತ್ತಿದೆ. ಬಾವಾಕನಿಗಾದರೋ ಯಾವಾಗಲೂ ಅನಾರೋಗ್ಯ. ಬರ್ಕತ್ತಿಲ್ಲದ ಮನೆ. ಅದನ್ನು ಯಾರು ಖರೀದಿಸಿದರೂ ಅವರಿಗೆ ಆಲಿ ಸೈತಾನನ ಉಪದ್ರವಿದೆ. ನೀವು ಖರೀದಿಸಿದರೂ ನಿಮಗೂ ತೊಂದರೆಯಾಗಬಹುದು ಎಂದೆಲ್ಲಾ ಜನರು ಆಡಿಕೊಳ್ಳುತ್ತಿದ್ದರು. ಆದಕಾರಣ ಆ ಮನೆಯನ್ನು ಖರೀದಿಸಲು ಯಾರೂ ಮುಂದೆ ಬರಲಿಲ್ಲ. ಹತ್ತಿರದ ಜನರಾರೂ ರಾತ್ರಿ ಹೊತ್ತು ಸುಳಿಯುವುದಿಲ್ಲ ಎಂದೆಲ್ಲಾ ಜನರು ಮಾತಾಡುತ್ತಿದ್ದರು. ಹತ್ತಿರದ ಜಾಗಕ್ಕೆ ಒಂದು ಸೆಂಟ್ಸಿಗೆ ಒಂದು ಲಕ್ಷ ಬೆಲೆಯಾದರೆ ಈ ಜಾಗ ಮಾತ್ರ 50 ಸಾವಿರಕ್ಕೂ ಯಾರಿಗೂ ಬೇಡ.

ಬರಬರುತ್ತಾ ಬಾವಾಕ ತೀರ ಅನಾರೋಗ್ಯ ಪೀಡಿತರಾದರು. 14 ವರ್ಷಗಳಲ್ಲಿ ಜಾಗದ ಮಾರಾಟವೇ ಆಗಲಿಲ್ಲ. ವಯಸ್ಸಿಗೆ ಬಂದ ಮಗಳೂ ಬೇರೆ. ಬಾವಾಕನಿಗೆ ದಾರಿಯೇ ಕಾಣದಾಯಿತು. ಕೊನೆಗೆ ಬಾವಾಕ 20 ಸಾವಿರವಾದರೂ ಸೆಂಟ್ಸಿಗೆ ಸಿಕ್ಕಿದರೆ ಕೊಡುವ ತೀರ್ಮಾನವನ್ನು ಮಾಡಿದರು. ಹೇಗಾದರೂ ಮಾಡಿ ಸಿಕ್ಕಿದ ಬೆಲೆಗೆ ಮಾರಿ ಮಗಳ ಮದುವೆ ಮಾಡುವುದೇ ಬಾವಾಕನ ಕೊನೆಯ ಆಸೆಯಾಗಿತ್ತು.

ಹೀಗಿರುತ್ತಾ ಬಾವಾಕ ಪುನಃ ಎಲ್ಲಾ ಬ್ರೋಕರ್‌ರಿಗೆ ವಿಷಯ ತಿಳಿಸಿದರು. ಪುನಃ ಒಂದು ವರ್ಷ ಕಳೆಯಿತು. ಬ್ರೋಕರುಗಳಾದ ಮೂರು ಜನ ಅಂತೋನಿ, ಅಬ್ಬಾಸ್, ಆನಂದ ಜಾಗವನ್ನು ಖರೀದಿಸುವ ತೀರ್ಮಾನ ಮಾಡಿದರು. ಸೆಂಟ್ಸಿಗೆ ಹತ್ತು ಸಾವಿರ ವಾದರೆ ನಿಮ್ಮ ಜಾಗವನ್ನು ನಾವು ಖರೀದಿಸುತ್ತೇವೆ. 6 ಲಕ್ಷ ರೂಪಾಯಿ ಕೊಟ್ಟು, ಒಂದು ವಾರದಲ್ಲಿ ಮನೆ ಖಾಲಿ ಮಾಡ ಬೇಕೆಂದು ತಿಳಿಸಿದರು. ಬಾವಾಕನಿಗೆ ಬೇರೆ ದಾರಿ ಕಾಣದೆ 60 ಸೆಂಟ್ಸ್ ಜಾಗವನ್ನು 6 ಲಕ್ಷಕ್ಕೆ ಮಾರಿ ಬಿಟ್ಟರು. ಜಾಗವು ಇವರ ಕೈ ಸೇರಿತು. ಆನಂದ ಹೇಳಿದ, "ಜಾಗದಲ್ಲಿ ಏನೇ ಉಪದ್ರವಿದ್ದರೂ ಅದಕ್ಕೆಲ್ಲಾ ಪರಿಹಾರ ನಾನು ಮಾಡಿಸುತ್ತೇನೆ." ಅಬ್ಬಾಸನು ಹೇಳಿದ, "ಪರಿಹಾರವೇನೂ ಬೇಕಾಗಿಲ್ಲ. ಅಲ್ಲಾಹನ ಸಹಾಯವಿದ್ದರೆ ಯಾವ ಸೈತಾನನೂ ಇತ್ತ ಸುಳಿಯುವುದಿಲ್ಲ."

ಖರೀದಿಸಿದ ಜಾಗವನ್ನು ಮೂರು ಜನರೂ ಸೇರಿ ಸ್ವಚ್ಛಗೊಳಿಸಿದರು. ಹಿತ್ತಲಿಗೆಲ್ಲಾ ಮಣ್ಣು ಹಾಕಿಸಿದರು. ನೇತಾಡುವ ಮಾಡನ್ನು ಸರಿಪಡಿಸಿದರು. ಮನೆಗೆ ಚೆನ್ನಾಗಿ ಬಣ್ಣ ಬಳಿದರು. ನಂತರ ಎಲ್ಲಾ ಬ್ರೋಕರ್‌ರಿಗೆ ವಿಷಯ ತಿಳಿಸಿದರು. ಆದರೂ ಏನೂ ಪ್ರಯೋಜನವಾಗಲಿಲ್ಲ. ಒಂದು ವರ್ಷ ಕಾದು ಕಾದು ಖರೀದಿಗಾಗಿ ಯಾರೂ ಬರಲಿಲ್ಲ. ಅಬ್ಬಾಸ್, ಆನಂದ, ಅಂತೋನಿಯವರಿಗೆ ದಿಕ್ಕೇ ತೋಚದಾಯಿತು. ಕೊನೆಗೆ ಒಂದು ತೀರ್ಮಾನ ಕೈಗೊಳ್ಳುತ್ತಾರೆ. ನಾವು ಯಾರಾದರೂ ಒಬ್ಬರು ಆ ಮನೆಯಲ್ಲಿ ಕುಟುಂಬ ಸಮೇತ ವಾಸವಿರಬೇಕು. ಆನಂದ ಮತ್ತು ಅಂತೋನಿಯ ಸಾಧ್ಯವಿಲ್ಲ ಎಂದರು. ಅಬ್ಬಾಸ್ ಹೇಳಿದ, "ನಾನು ವಾಸವಿರುತ್ತೇನೆ. ಹಾಗಾದರೂ ಮಾರಾಟವಾಗಬಹುದು." ಹೀಗೆ ಅಬ್ಬಾಸ್ ಶುಕ್ರವಾರದ ಜುಮಾದ ಬಳಿಕ ಗೃಹಪ್ರವೇಶವಾಗುತ್ತಾನೆ. ಮನೆಯಲ್ಲಿ ವಾಸವಾದ ಮೊದಲನೇ ದಿನವೇ ಹತ್ತಿರದ ಮನೆಯವರಿಗೆಲ್ಲಾ ರಾತ್ರಿ ಏನಾಗುವುದೋ ಎಂಬ ಕುತೂಹಲ. ಆಲಿ ಸೈತಾನನು ಬಂದು ಅಬ್ಬಾಸ್‌ನ ಕುಟುಂಬವನ್ನು ಏನು ಮಾಡ ಬಹುದೋ? ನೆರೆಕರೆಯವರಿಗೆ ರಾತ್ರಿ ನಿದ್ದೆಯೇ ಇಲ್ಲ. ಇತ್ತ ಅಬ್ಬಾಸ್‌ನ ಹೆಂಡತಿ ತುಂಬಾ ಧೈರ್ಯವಂತೆ. ಅಬ್ಬಾಸ್‌ನಿಗೆ ಧೈರ್ಯ ಕೊಟ್ಟದ್ದೇ ಆಕೆ. ಅಬ್ಬಾಸ್ ಕುಟುಂಬ ಇಶಾ ನಮಾಝ್ ಮುಗಿಸಿ ಆರಾಮವಾಗಿ ನಿದ್ದೆಗೆ ಶರಣಾಗಿತ್ತು. 3 ಗಂಟೆ ರಾತ್ರಿಗೆದ್ದು ತಹಜ್ಜುದ್ ನಮಾಝ್ ಮುಗಿಸಿ ಇಬ್ಬರು ಮಲಗಿದರು. ಸಣ್ಣಪುಟ್ಟ ಶಬ್ದಗಳು. ಹಕ್ಕಿಗಳೋ ನರಿಗಳೋ ಬಾವಲಿಯೋ ಆಗಿರಬಹುದು ಎಂದು ಭಾವಿಸಿ ನಿದ್ದೆ ಮಾಡಿ ಬೆಳಗಿನ ನಮಾಝ್‌ಗೆ ಎದ್ದರು. ಆಯಿಶಾ ಹೇಳಿದಳು, "ಅಲ್ಲಾರೀ, ಜನ ಏನೆಲ್ಲಾ ಹೇಳಿದ್ರು. ಅಲ್ಲಿ ಆಲಿ ಸೈತಾನನ ಉಪದ್ರವಿದೆ. ಅದು ಹಾಗೆ ಮಾಡುತ್ತದೆ, ಹೀಗೆ ಮಾಡುತ್ತದೆ ಎಂದೆಲ್ಲಾ ಹೇಳಿದ್ರು. ಇಲ್ಲಿ ಏನೂ ಕಾಣುವುದಿಲ್ಲವಲ್ಲ."

"ಎಲ್ಲಾ ಸುಮ್ಮನೆ ಆಯಿಷಾ. ನಮ್ಮ ನಿಯ್ಯತ್ತು ಸರಿಯಾಗಿದ್ರೆ ಯಾವ ಸೈತಾನನೂ ಇತ್ತ ಸುಳಿಯುವುದಿಲ್ಲ. ಎಲ್ಲಾ ಸುಮ್ಮನೆ."

ಬೆಳಗಾಯ್ತು. ನೆರೆಯವರು ಒಬ್ಬೊಬ್ಬರಾಗಿ ಬರಲು ಶುರು ಮಾಡಿದರು. "ನಿನ್ನೆ ನಿಮಗೆ ಏನೂ ತೊಂದರೆಯಾಗಿಲ್ಲವೇ? ಆಲಿ ಸೈತಾನ್ ಬರಲಿಲ್ಲವೇ?" ಎಂದೆಲ್ಲಾ ಕೇಳಲು ಶುರು ಮಾಡಿದರು.

ಆಗ ಅಬ್ಬಾಸ್ ಎಲ್ಲರಿಗೂ ಒಂದೇ ಉತ್ತರ ಕೊಟ್ಟ, "ಮೊದಲು ನಿಮ್ಮ ಮನಸ್ಸಿನ ಶೈತಾನನನ್ನು ಓಡಿಸಿ. ಆಗ ಯಾವ ಶೈತಾನನೂ ಬರುವುದಿಲ್ಲ. ಅದೆಲ್ಲಾ ಸುಮ್ಮನೆ. ಈ ಜಾಗ ಮಾರಾಟ ಮಾಡುವುದಕ್ಕಾಗಿ ಜನರು ಪ್ರಚಾರ ಮಾಡಿದ್ದು ಮಾತ್ರ. ಹೊರತು ಬೇರೇನೂ ಅಲ್ಲ."

ಬಂದವರೆಲ್ಲಾ ಮುಂದೇನಾಗಬಹುದು ನೋಡುವಾ ಎಂಬ ಕುತೂಹಲದಿಂದ ಹಿಂದೆ ಹೋಗುತ್ತಾರೆ. ಅಬ್ಬಾಸ್ ದಂಪತಿಗಳಿಗೆ ಎಲ್ಲಿಲ್ಲದ ಉತ್ಸಾಹ ಮತ್ತು ಧೈರ್ಯ ಜಾಸ್ತಿ ಉಂಟಾಗಿತ್ತು. 2ನೇ, 3ನೇ, 4ನೇ ದಿನವೂ ಯಾವುದೇ ಭಯವಿಲ್ಲದೇ ಆರಾಮವಾಗಿ ಕಳೆದರು. 5ನೇ ದಿನ ತಹಜ್ಜುದ್ ನಮಾಝ್‌ಗಾಗಿ 2.30 ಗಂಟೆಗೆ ರಾತ್ರಿ ಎದ್ದವರಿಗೆ ಭಯಂಕರವಾದ ಗೆಜ್ಜೆಯ ಶಬ್ದ ಕೇಳಿ ಬರುತ್ತದೆ. ಏನಿದು ಶಬ್ದ ಎಂದು ಇಬ್ಬರೂ ಆಶ್ಚರ್ಯ ಮತ್ತು ಭಯಕ್ಕೊಳಗಾಗುತ್ತಾರೆ. ಆದರೆ ಆಯಿಷಾ ಅಬ್ಬಾಸ್ ನೊಂದಿಗೆ, "ನೀವೇನೂ ಭಯ ಪಡಬೇಡಿ. ನಾವು ಹೊರಗಡೆ ಹೋಗಿ ನೋಡೋಣ. ನಾನು ಕಲಿತ ಕೆಲವು ಕುರ್‌ಆನ್‌ನ ಆಯತ್‌ಗಳಿವೆ." ಆ ಆಯತುಲ್ ಕುರ್ಸಿ ಎಂಬ ಆಯತನ್ನು ಓದುತ್ತಾ ಅಲ್ಲಾಹನ ಅಪಾರವಾದ ಭರವಸೆಯೊಂದಿಗೆ ಇಬ್ಬರೂ ಕುರ್‌ಆನ್ ಪಠಿಸುತ್ತಾ ಹಿತ್ತಲಿನ ಕಡೆಗೆ ನಡೆದರು. ಹಿತ್ತಲಿನ ಕಡೆಗೆ ಧಾವಿಸಿದ ಹಾಗೆ ಶಬ್ದವೂ ಜೋರಾಯಿತು.

ಭಯದಿಂದ ಬಾವಿಯ ಕಡೆಗೆ ಧಾವಿಸಿದ ಇಬ್ಬರಿಗೂ ಆಶ್ಚರ್ಯವಾದ ಸಂಗತಿಯೊಂದು ಕಾದಿತ್ತು. ಬಾವಿಯ ಬಳಿ ದನವೊಂದರ ಕಾಲಿಗೆ ಬಾವಿಯ ಹಗ್ಗ ಸಿಕ್ಕಿ ಹಾಕಿಕೊಂಡು ಬಿಡಿಸಲಾಗದೇ ಪೇಚಾಡುತ್ತಿತ್ತು. ಕಾಲಿಗೆ ಸಿಕ್ಕಿದ ಬಾವಿಯ ಹಗ್ಗ ಬಿಡಿಸುವ ಯತ್ನದಲ್ಲಿ ಬಾವಿಯ ರಾಟೆಯ ಶಬ್ದವು ಜೋರಾಗಿ ಗೆಜ್ಜೆ ಶಬ್ದ ತರಹ ಕೇಳಿಸುತ್ತಿತ್ತು. ಇಬ್ಬರೂ ಅಲ್ಲಾಹನಿಗೆ ಸ್ತುತಿ ಅರ್ಪಿಸುತ್ತಾ ದನದ ಕಾಲಿನ ಹಗ್ಗವನ್ನು ಬಿಡಿಸಿ ದನವನ್ನು ಓಡಿಸಿದರು. ತಿರುಗಿ ನಮಾಝ್ ಮುಗಿಸಿ ದುವಾದಲ್ಲಿ ಮಗ್ನರಾದರು. "ಅಲ್ಲಾಹನೇ ನಿನಗೆ ಸರ್ವಸ್ತುತಿ. ನೀನು ನಮಗೆ ಕೊಟ್ಟಂತಹ ಧೈರ್ಯಕ್ಕೆ ನಿನಗೆ ಶಿರಬಾಗಿದೆವು."

6,7,8ನೇ ದಿನವೂ ಯಾವುದೇ ತೊಂದರೆಯಿಲ್ಲದೇ ಕಳೆದರು. 9ನೇ ದಿನ ರಾತ್ರಿ ಮತ್ತೆ 2 ಗಂಟೆಗೆ ಜೋರಾಗಿ ನರಳಾಡುವ ಶಬ್ದ. ಹೊರಗೆ ಹೋಗಿ ನೋಡುವಾಗ ಬಿಳಿ ವಸ್ತ್ರ ಹಾಕಿ ನರಳಾಡುವುದು ಕಾಣಿಸಿತು. ಹತ್ತಿರ ಹೋದವರೇ ಮನುಷ್ಯನ ರೂಪ ಕಾಣುತ್ತಿತ್ತು. ನೋಡುವಾಗ ಯಾರು ನೆರೆಮನೆಯ ಬಾಬಣ್ಣರೇ ಕಂಠಪೂರ್ತಿ ಕುಡಿದು ರಾತ್ರಿ ಇವರ ಹಿತ್ತಲಲ್ಲಿ ಬಿದ್ದುಬಿಟ್ಟಿದ್ದರು. ಬಾಬಣ್ಣನ ಮುಖಕ್ಕೆ ನೀರು ಹಾಕಿ ಎಬ್ಬಿಸಿ ಮನೆಯ ಚಾವಡಿಯಲ್ಲಿ ಮಲಗಿಸಿದರು. 2ನೇ ಅವಾಂತರವೂ ಮುಗಿಯಿತು. ಇದಾಗಿ 10 ದಿವಸದ ನಂತರ ಪುನಃ ರಾತ್ರಿ ಏಳುವಾಗ ತೆಂಗಿನ ಕಾಯಿ ಬಿದ್ದ ಶಬ್ದ ಕೇಳಿಸುತ್ತದೆ. ಹಿತ್ತಲಿಗೆ ಹೋಗಿ ನೋಡುತ್ತಲೇ 3 ಜನ ಎಳನೀರು ಕಳ್ಳರು ಡಬಡಬ ಓಡುತ್ತಿದ್ದರು. ಹೊರಗೆ ತೆಂಗಿನ ಬುಡದಲ್ಲಿದ್ದ ಎಳನೀರನ್ನು ಒಳಗೆ ಹಾಕಿ ನಮಾಝ್ ಮುಗಿಸಿ ಮಲಗಿದರು. ಆಗಲೇ ಅಬ್ಬಾಸನಿಗೆ ಗೊತ್ತಾಯ್ತು. ಎಲ್ಲ ಪ್ರಚಾರ ಈ ಕಳ್ಳರದೇ ಆಗಿರಬೇಕು. ಆಲಿ ಸೈತಾನ್ ಬೇರೆ ಯಾರೂ ಅಲ್ಲ. ಈ ಕಳ್ಳರೇ. ಇವರಿಗೆ ಕದಿಯಲು ಆಗುವುದಿಲ್ಲವಲ್ಲಾ ಅದಕ್ಕಾಗಿ ಆಗಿರಬೇಕು ಎಂಬುದು ಮನದಟ್ಟಾಯಿತು. ಅಬ್ಬಾಸ್ ನಡೆದ ವಿಷಯವನ್ನು ಅಂತೋನಿ, ಆನಂದನಿಗೂ ತಿಳಿಸಿದ. 6 ತಿಂಗಳೂ ಕಳೆಯಿತು. ಯಾವುದೇ ಗಿರಾಕಿಗಳು ಜಾಗ ಖರೀದಿಸಲು ಬರುವುದಿಲ್ಲ. ಏನು ಮಾಡುವುದು ಎಂಬ ಆಲೋಚನೆ ಮಾಡತೊಡಗಿದರು.

ಇತ್ತ ಆಯಿಶಾ ಮದುವೆಗಾಗಿ ಕೇರಳದ ತವರು ಮನೆಗೆ ಹೋಗುತ್ತಾಳೆ. ಹೋದವಳೇ ದಿನಪತ್ರಿಕೆಯೊಂದರಲ್ಲಿ ಜಾಹೀರಾತು ನೋಡುತ್ತಾಳೆ. ನಮಗೆ ಮರದ ಮಿಲ್ಲು ಮಾಡಲು ಕರ್ನಾಟಕದ ದಕ್ಷಿಣ ದಿಕ್ಕಿನಲ್ಲಿ ಜಾಗ ಬೇಕಾಗಿದೆ. ಒಳ್ಳೆಯ ರೇಟು ಕೊಡುತ್ತೇವೆ ಎಂಬ ಜಾಹೀರಾತು ನೋಡಿ ಅಬ್ಬಾಸನಿಗೆ ವಿಷಯ ತಿಳಿಸುತ್ತಾಳೆ. ಅಬ್ಬಾಸ್, ಆನಂದ್, ಅಂತೋನಿ ಸೇರಿ ಜಾಗ ಬೇಕಾದವನ ಬಳಿ ಹೋಗಿ ಮಾತಾಡಿ ಮರುದಿನವೇ ಜಾಗ ನೋಡಿ 60 ಸೆಂಟ್ಸ್ ಜಾಗಕ್ಕೆ 1.25 ಲಕ್ಷದ ಹಾಗೆ 75 ಲಕ್ಷ ನಿಗದಿಪಡಿಸಿ 1 ವಾರದ ಒಳಗೆ ವ್ಯಾಪಾರವಾಗುತ್ತದೆ. 75 ಲಕ್ಷ ಇವರ ಕೈ ಸೇರುತ್ತದೆ. ಧೈರ್ಯ, ಪ್ರೀತಿ, ತಾಳ್ಮೆ 6 ಲಕ್ಷದ ಅಸಲು 75 ಲಕ್ಷದ ಧನಿಕರನ್ನಾಗಿ ಮಾಡಿತು.

**ಇಸ್ಲಾಮ್: ಸಂಶಯ ನಿವಾರಣೆ ಬಯಸುವಿರಾ?**

ಇಸ್ಲಾಮ್, ಪವಿತ್ರ ಕುರ್‌ಆನ್, ಪ್ರವಾದಿ ಮುಹಮ್ಮದ್(ಸ), ಜಿಹಾದ್, ಇತ್ಯಾದಿ ವಿಷಯಗಳ ಕುರಿತು ನಿಮ್ಮ ಸಂಶಯಗಳು ಮತ್ತು ಪ್ರಶ್ನೆಗಳಿಗೆ ಸೂಕ್ತ ಪರಿಹಾರ ಬಯಸುವಿರಾ?

ಹಿಂದೂ, ಕ್ರೈಸ್ತ ಮತ್ತಿತರ ದೇಶ ಬಾಂಧವರಿಗೆ ಓದಲು ಉಚಿತವಾಗಿ ಪುಸ್ತಕಗಳನ್ನು ರವಾನಿಸಲಾಗುವುದು.

ಸಂಪರ್ಕಿಸಿರಿ : ISMIKA, P.B. No. 229, Mangalore

# ವಾಮಿ ಅಂತಾರಾಷ್ಟ್ರೀಯ ಸಮ್ಮೇಳನ ಮುಕ್ತಾಯ

**ಜಕಾರ್ತಾ:** ವರ್ಲ್ಡ್ ಅಸೆಂಬ್ಲಿ ಆಫ್ ಮುಸ್ಲಿಮ್ ಯೂತ್ (ವಾಮಿ) ಇದರ 19ನೇ ಅಂತಾರಾಷ್ಟ್ರೀಯ ಸಮ್ಮೇಳನವು ಇಂಡೋನೇಶ್ಯಾದ ಜಕಾರ್ತದಲ್ಲಿ ಇತ್ತೀಚೆಗೆ ಜರುಗಿತು.

80 ರಾಷ್ಟ್ರಗಳ ಇಸ್ಲಾಮೀ ಸಂಘಟನೆಗಳ ಪ್ರತಿನಿಧಿಗಳು, ಅಕಾಡೆಮಿ ವಿದ್ವಾಂಸರು, ಕಾರ್ಯಕರ್ತರು ಈ ಸಭೆಯಲ್ಲಿ ಭಾಗವಹಿಸಿದ್ದರು. 700 ಜನರು ಸಮ್ಮೇಳನದ ಅತಿಥಿಗಳಾಗಿ ಆಗಮಿಸಿದ್ದರು. ಅಲ್ಲದೆ ಇಂಡೋನೇಶ್ಯಾದ ವಿವಿಧ ಇಸ್ಲಾಮೀ ಸಂಘಟನೆಗಳನ್ನು ಪ್ರತಿನಿಧೀಕರಿಸಿ ಯುವಕರೂ ಮಹಿಳೆಯರೂ ಸೇರಿ ಜನಸಾಗರವೇ ಸೇರಿತ್ತು. ಇಂಡೋನೇಷ್ಯಾ ಸರಕಾರದ ಧಾರ್ಮಿಕ ಸಚಿವ ಸೂರ್ಯಧರ್ಮ ಅಲ್ಲಿನ ಸಂಪ್ರದಾಯದಂತೆ ವಾದ್ಯ ಮೊಳಗಿಸಿ ಸಮ್ಮೇಳನವನ್ನು ಉದ್ಘಾಟಿಸಿದರು. ವಾಮಿ ಅಧ್ಯಕ್ಷರಾದ ಶೈಖ್ ಇಬ್ನು ಅಬ್ದುಲ್ ಅಝೀಝ್ ಅಲ್ ಶೈಖ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

'ಯುವಕರು ಮತ್ತು ಸಾಮಾಜಿಕ ಜವಾಬ್ದಾರಿಗಳು' ಎಂಬುದು ಸಮ್ಮೇಳನದ ಘೋಷ ವಾಕ್ಯವಾಗಿತ್ತು. ಉದ್ಘಾಟನಾ ಸಮ್ಮೇಳನ, ಚರ್ಚಾ ಸಮ್ಮೇಳನ, ಪ್ರಬಂಧ ಮಂಡನಾ ಸಮ್ಮೇಳನ, ಭಾಷಣ ಕಾರ್ಯಕ್ರಮ ಮುಂತಾದ ವಿವಿಧ ರೀತಿಯ ಅಧಿವೇಶನಗಳು ಜರುಗಿದವು. ಮೂರು ದಿನಗಳ ಕಾಲ ನಡೆದ ಈ ಸಮ್ಮೇಳನದಲ್ಲಿ ಸುಡಾನ್‌ನ ಮಾಜಿ ಧಾರ್ಮಿಕ ಮಂತ್ರಿ ಡಾ| ಇಸ್ಸಾಮ್ ಬಶೀರ್, ಡಾ| ಅಮ್ರ್ ಖಾಲಿದ್ (ಈಜಿಪ್ಟ್), ಶೈಖ್ ಸಲ್ಮಾನ್ ಔದ (ಸೌದಿ ಅರೇಬಿಯ), ವಾಮಿಯ ಕಾರ್ಯದರ್ಶಿ ಡಾ| ಸಾಲಿಹ್ ಅಲ್ ವುಹೈಬಿ, ಡಾ| ಅಲಿ ಅಲ್ ಖುರ್ಝಾಗಿ (ಕತಾರ್), ಸೌದಿ ಅರೇಬಿಯಾದ ಸಚಿವ ಡಾ| ಅಲಿಯ್ಯ್ ಬಿನ್ ಇಬ್ರಾಹೀಮ್ ಮುಂತಾದ ಅನೇಕ ಮಹನೀಯರು ಭಾಗವಹಿಸಿದ್ದರು. ಅಲ್ಲದೇ, ಡಾ| ಹಿದಾಯ ನೂರ್ ವಾಹಿದ್, ಡಾ| ಅಮಲ್ ಅಬ್ದುಲ್ ಫತ್ತಾಹ್ ಶಂಸ್ (ಈಜಿಪ್ಟ್), ಡಾ| ಹನಾನ್ ಮುಂತಾದ ಮಹಿಳಾ ವಿದ್ವಾಂಸರೂ ಭಾಗವಹಿಸಿದ್ದರು. ಭಾರತದಿಂದ ಝಫರುಲ್ ಇಸ್ಲಾಮ್ ಖಾನ್, ಡಾ| ಝಾಕಿರ್ ನ್ಯಾಕ್, ಆರ್. ಯೂಸುಫ್ ಮುಂತಾದವರು ಪ್ರಬಂಧ ಮಂಡಿಸಿದರು. ಡಾ| ಅಬ್ದುಲ್ಲಾ ಉಮರ್ ನಸೀಫ್, ಡಾ| ಅಹ್ಮದ್ ತೂತನ್‌ಜಿ, ಡಿ.ಕೆ. ಇಬ್ರಾಹೀಮ್ ಟೊರಾಂಟೊ, ಸಲ್ಮಾನ್ ನದ್ವಿ, ಶ್ರೀಲಂಕಾದ ಜಮಾಅತೆ ಇಸ್ಲಾಮೀ ಅಧ್ಯಕ್ಷರಲ್ಲದೆ ಇನ್ನೂ ಅನೇಕ ಪ್ರಮುಖರೂ ಭಾಗವಹಿಸಿದ್ದರು.

## ವಿಕಿಲೀಕ್ಸ್ ಅಮೇರಿಕವನ್ನು...

(4ನೇ ಪುಟದಿಂದ)

ಸರಿಯೋ ತಪ್ಪೋ ಎಂಬ ದೂರು ಅವುಗಳಲ್ಲೊಂದು. ಈ ಎಲ್ಲ ಪುರಾವೆಗಳನ್ನು ನೋಡಿದ ಮೇಲೆ ಆ ಕೋರ್ಟು ಅಮೇರಿಕವನ್ನು ಅಪರಾಧಿಯಲ್ಲವೆಂದು ನಿರ್ಣಯಿಸುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಅಂತಹ ಒಂದು ಇಬ್ಬಂದಿ ಸ್ಥಿತಿಗೆ ತನ್ನನ್ನೊಡ್ಡಲು ಅದು ಸಿದ್ಧವಿಲ್ಲ. ಆದ್ದರಿಂದ ಅದರ ಸಮ್ಮುಖದಲ್ಲಿರುವ ದೂರುಗಳೆಲ್ಲ ಬರೇ ದೂರುಗಳಾಗಿಯೇ ಉಳಿದಿದೆ. ಬುಶ್ ಸತ್ತ ನಂತರ ಒಂದು ವೇಳೆ ಅದು ವಿಚಾರಣೆ ಆರಂಭಿಸಿದರೂ ಅಚ್ಚರಿಯಿಲ್ಲ. ಕೋರ್ಟಿಗೂ ತನ್ನ ಮುಂದಿರುವ ಪ್ರಕರಣ ನಡೆಸದೆ ಗತ್ಯಂತರವಿಲ್ಲ ವಷ್ಟೇ. ಅದೂ ಕೂಡಾ ಇಂತಹ ಲಕ್ಷಾಂತರ ಮಂದಿ ಹತ್ಯೆಯ ಭೀಕರವಾದ ಪ್ರಕರಣ ವನ್ನು ತಳ್ಳಿ ಹಾಕುವ ಧೈರ್ಯ ಹೇಗೆ ಅದು ವಹಿಸೀತು?

ಒಂದು ರಾಷ್ಟ್ರದ ವಿರುದ್ಧ ವಿನಾ ಕಾರಣ ಯುದ್ಧ ಮಾಡುವುದು ಯುದ್ಧಾಪರಾಧವಾಗುತ್ತದೆ. ನಾಗರಿಕರ ಹಕ್ಕು ದೋಚುವ, ಹತ್ಯೆ, ಸಾಮೂಹಿಕ ಕಗ್ಗೊಲೆಗಳೆಲ್ಲ ತೀವ್ರ ಶಿಕ್ಷೆಗೆ ಗುರಿಯಾಗುವ ಅಪರಾಧಗಳಾಗಿವೆ. ಸುಡಾನಿನ ಅಧ್ಯಕ್ಷರ ಮೇಲೆ ವಾರಂಟ್ ಹೊರಡಿಸಿರುವ ಅಂತಾರಾಷ್ಟ್ರೀಯ ಕ್ರಿಮಿನಲ್ ಕೋರ್ಟ್‌ಗೆ ಅಮೇರಿಕದ ಮೇಲೆ ಏನೇನೂ ಯೋಚಿಸುವುದಕ್ಕೆ ಸಾಧ್ಯವಾಗಿಲ್ಲ. ಅಫಘಾನ್‌ನ ಬಗ್ರಾಮ್ ಜೈಲು, ಇರಾಕಿನ ಅಬೂಗುರೈಬ್ ಜೈಲು, ಕ್ಯೂಬಾದ ಗ್ವಾಂಟನಾಮೋ ಜೈಲುಗಳಲ್ಲಿ ಸಾಮಾನ್ಯ ನಾಗರಿಕರನ್ನು ಪೀಡಿಸುತ್ತಿರುವ ಅಮೇರಿಕವನ್ನು ಈ ಕಾರಣಕ್ಕೆ ಶಿಕ್ಷಿಸಬಹುದು. ಬಾನ್‌ಕಿ ಮೂನ್‌ರ ವಿಶ್ವಸಂಸ್ಥೆ ಈ ನಿಟ್ಟಿನಲ್ಲಿ ಯಾವ ಪ್ರಯತ್ನವನ್ನೂ ನಡೆಸಿಲ್ಲ. ವಿಕಿ ಬಹಿರಂಗಪಡಿಸಿದೆ ಎಂಬ ಕಾರಣಕ್ಕೆ ಅವರು ಇರಾಕಿನಲ್ಲಿ ನಡೆದ ಯುದ್ಧಾಪರಾಧ ತನಿಖೆಯಾಗಬೇಕೆಂದು ಹೇಳಿ ತನ್ನ ಮೇಲೆ ಎರಚುವ ಕೊಳೆಯನ್ನು ತೊಳೆದುಕೊಂಡಿದ್ದಾರೆ ಅಷ್ಟೇ.

ಹೌದು, ಮಾನವ ರಾಶಿಯ ವಿರುದ್ಧ ಅದು ಎಸಗುತ್ತಿರುವ ಅಪರಾಧ ಕೃತ್ಯಗಳನ್ನು ಭಯೋತ್ಪಾದನೆಯ ವಿರುದ್ಧ ಹೋರಾಟವೆಂಬ ಲೇಬಲಿನಲ್ಲಿ ಮರೆಸಿಡಲಾಗಿದೆ. ಇರಾಕಿನ ಮಾಜಿ ಜನರಲ್ ಹಾಮಿದ್ ವಲ್‌ಹೂಶಿಯನ್ನು ಅಮೇರಿಕನ್ ಸೇನೆ ಮತ್ತು ಸಿಐಎ ಜೊತೆಯಾಗಿ ಹಲವಾರು ದಿವಸಗಳು ಕೂಡಿಟ್ಟು ಚಿತ್ರಹಿಂಸೆ ನೀಡಿ ಗೋಣಿಚೀಲದಲ್ಲಿ ತುಂಬಿ ವಿದ್ಯುತ್ ತಂತಿಯಿಂದ ಕಟ್ಟಿಹಾಕಿ ಉಸಿರುಕಟ್ಟಿಸಿ ಕೊಂದಿದೆ. ಇದಕ್ಕೆ ಕಾರಣನಾದ ಸೈನಿಕನಿಗೆ ಸಿಕ್ಕಿದ ಶಿಕ್ಷೆ ಎಚ್ಚರಿಕೆ. ಎರಡು ತಿಂಗಳ ಸಂಬಳ ಕಟ್ ಮತ್ತು 2 ತಿಂಗಳ ಶಿಕ್ಷೆ! ಪಾಕ್ ವಿಜ್ಞಾನಿ ಆಫಿಯಾಗೆ 80 ವರ್ಷ ಶಿಕ್ಷೆ ವಿಧಿಸಿದ ಅಮೇರಿಕದ ನ್ಯಾಯವಿದು. ಈ ಅನ್ಯಾಯವೇ ಸಾಲದೇ ಅಮೇರಿಕದಲ್ಲಿ ಪ್ರಜಾಪ್ರಭುತ್ವವಿಲ್ಲ, ನಾಗರಿಕ ಹಕ್ಕುಗಳಿಗೆ ಗೌರವವಿಲ್ಲ, ಮಾನವ ಹಕ್ಕುಗಳಿಗೆ ರಕ್ಷಣೆಯಿಲ್ಲ ಎಂಬುದಕ್ಕೆ. ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳು ಈ ಕ್ರೂರ ರಾಷ್ಟ್ರವನ್ನು ಕಣ್ಣು ಮುಚ್ಚಿ ಬೆಂಬಲಿಸುತ್ತಿವೆ. ಇನ್ನು ಕೆಲವು ಅದರ ಸಂಗಕ್ಕೆ ಹಾತೊರೆಯುತ್ತಿವೆ. ಇವರೆಲ್ಲರೂ ಎಲ್ಲ ಕಾಲವೂ ಹೀಗೆ ಸಾಗುತ್ತದೆ ಎಂದು ಭಾವಿಸಿರುವುದಾದರೆ ಮೂರ್ಖತನವಲ್ಲದೆ ಇನ್ನೇನಲ್ಲ.

## ಅಣು: ಮಾತುಕತೆಗೆ ಇರಾನ್

**ಟೆಹ್ರಾನ್:** ಯುರೋಪಿಯನ್ ಯೂನಿಯನ್‌ನೊಂದಿಗೆ ಹೊಸ ಫಾರ್ಮುಲ ಪ್ರಕಾರ ಅಣು ಶಕ್ತಿಯ ಕುರಿತು ಮಾತುಕತೆಗೆ ಸಿದ್ಧವೆಂದು ಇರಾನ್ ಹೇಳಿದೆ. ಈ ಕುರಿತು ಇರಾನಿನ ಅಣು ಭದ್ರತಾ ಸುಪ್ರೀಮ್ ಕೌನ್ಸಿಲ್ ಯುರೋಪಿಯನ್ ಯೂನಿಯನ್‌ನ ವಿದೇಶಾಂಗ ವಿಭಾಗದೊಂದಿಗೆ ಪತ್ರ ವ್ಯವಹಾರ ನಡೆಸುತ್ತಿದೆ. ಎರಡು ಪಕ್ಷಕ್ಕೂ ಸಮ್ಮತವಾದ ಒಂದು ದಿನಾಂಕದಂದು ಸೂಕ್ತ ವೇದಿಕೆಯಲ್ಲಿ ಚರ್ಚೆ ನಡೆಸಲಾಗುವುದೆಂದು ಇರಾನ್ ಹೇಳಿದೆ.

ಅಕ್ಟೋಬರ್ 2009ರಲ್ಲಿ ಎರಡು ಪಕ್ಷಗಳ ನಡುವೆ ಅಣು ಶಕ್ತಿ ಚರ್ಚೆಯನ್ನು ಮತ್ತೆ ಪ್ರಾರಂಭಿಸಬೇಕೆಂದು ಯುರೋಪಿಯನ್ ಯೂನಿಯನ್ ಮತ್ತು ಅಮೇರಿಕವು ಇರಾನ್‌ನ ಮೇಲೆ ಒತ್ತಡ ಹಾಕಿದ್ದುವು. ಇರಾನ್ ವಿರುದ್ಧ ಕಟು ಆರ್ಥಿಕ ದಿಗ್ಬಂಧನವನ್ನು ಕೂಡಾ ಹೇರಲಾಗಿತ್ತು. ಇರಾನ್‌ನಿಂದ ಪತ್ರ ಬಂದ ಬಗ್ಗೆ ಯುರೋಪಿಯನ್ ಯೂನಿಯನ್‌ನ ವಿದೇಶಾಂಗ ವಿಭಾಗದ ಮುಖ್ಯಸ್ಥ ಕ್ಯಾತರೀನ್ ಆಸ್ಟನ್ ದೃಢೀಕರಿಸಿದ್ದಾರೆ.

ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ. ಬಳಿಕ ಗಗನದೆಡೆ ಗಮನ ಹರಿಸಿ ಸಪ್ತ ಗಗನಗಳಿಗೆ ರೂಪುಕೊಟ್ಟನು. ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.
(ಕುರ್‌ಆನ್ 2:29)

*Managing Partner*
**RAJA BRICKS & TILE INDUSTRIES**
*P.B. No. 34, Rajanagar, Sira Road,*
*Tumkur - 572 101. Karnataka, India*
*Ph: 0816 - 6531933/44/55, Fax: 0816 - 2211633*

**ಸನ್ಮಾರ್ಗ ಚಂದಾ ದರ**

| | | |
|---|---|---|
| ವಾರ್ಷಿಕ | ರೂ. | 390.00 |
| ಅರ್ಧವಾರ್ಷಿಕ | ರೂ. | 195.00 |
| **ಗಲ್ಫ್ ರಾಷ್ಟ್ರಗಳಲ್ಲಿ** | | |
| ವಾರ್ಷಿಕ | ರೂ. | 1,200.00 |
| ಅರ್ಧವಾರ್ಷಿಕ | ರೂ. | 650.00 |

# ಈಜಿಪ್ಟ್ ಚುನಾವಣೆ: ಬರ್ದಾಯಿ ಬಹಿಷ್ಕಾರ



**ಕೈರೋ:** ಮುಂದಿನ ನವೆಂಬರ್‌ನಲ್ಲಿ ಈಜಿಪ್ಟ್‌ನಲ್ಲಿ ನಡೆಯಲಿರುವ ಚುನವಾಣೆಯನ್ನು ಬಹಿಷ್ಕರಿಸುವುದಾಗಿ ಅಲ್ ಬರ್ದಾಯಿ ನೇತೃತ್ವದ ಈಜಿಪ್ಟ್-ಏಶ್ಯನ್ ಸೊಸೈಟಿ ಫಾರ್ ಚೇಂಜ್ ಎಂಬ ಸಂಘಟನೆಯು ಹೇಳಿಕೊಂಡಿದೆ. ಅಂತಾರಾಷ್ಟ್ರೀಯ ಅಣುಶಕ್ತಿ ನಿರ್ದೇಶನಾಲಯದ ಮುಖ್ಯಸ್ಥರಾಗಿದ್ದ ಬರ್ದಾಯಿಯವರು ಅಧ್ಯಕ್ಷ ಹುಸ್ನಿ ಮುಬಾರಕ್‌ರ ಸಮರ್ಥ ಎದುರಾಳಿ ಎಂಬ ನಂಬಿಕೆಯನ್ನು ಜನರಲ್ಲಿ ಮೂಡಿಸಿದ್ದಾರೆ.

ಹೆಸರಾಂತ ರಾಜಕೀಯ ಪಕ್ಷವಾದ ಫಹದ್ ಈಗಾಗಲೇ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಹೇಳಿಕೊಂಡಿದೆ. ಇಖ್ವಾನುಲ್ ಮುಸ್ಲಿಮೂನ್‌ನ ಕಾರ್ಯಚಟುವಟಿಕೆಗಳ ಮೇಲೆ ನಿರ್ಬಂಧವಿದ್ದರೂ ಚುನಾವಣೆಯಲ್ಲಿ ಸ್ಪರ್ಧಿಸುವ ನಿರೀಕ್ಷೆಯಿದೆ. ಈ ಕುರಿತು ತನ್ನ ಹೇಳಿಕೆಯನ್ನು ಶೀಘ್ರದಲ್ಲಿ ನೀಡುವುದಾಗಿ ಅದು ಹೇಳಿಕೊಂಡಿದೆ.

## ಮಕ್ಕಾ: ಅಕ್ರಮ ವಲಸಿಗರ ಬಂಧನ

**ಜಿದ್ದಾ:** ಕಾನೂನು ಉಲ್ಲಂಘಿಸಿ ಮಕ್ಕಾಕ್ಕೆ ಹೋಗಲು ಪ್ರಯತ್ನಿಸಿದ 15,000 ಮಂದಿಯನ್ನು ಮಕ್ಕಾ ಸಮೀಪದ 12 ಪ್ರವೇಶ ದ್ವಾರಗಳಲ್ಲಿ ಪಾಸ್‌ಪೋರ್ಟು ವಿಭಾಗದ ಅಧಿಕಾರಿಗಳು ತಡೆದಿರುವುದಾಗಿ ವರದಿಯಾಗಿದೆ. ಕಾನೂನು ಉಲ್ಲಂಘಿಸಿ ಹೋಗ ಬಯಸಿದವರನ್ನು ಅಲ್ಲಿಗೆ ತಲುಪಿಸಲು ಯತ್ನಿಸಿದ 400 ಮಂದಿಯನ್ನು ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮಕ್ಕಾ-ಜಿದ್ದಾ ಡಿಪಾರ್ಟೇಶನ್ ಆಫೀಸ್‌ಗೆ ಹಸ್ತಾಂತರಿಸಲಾಗಿದೆ. ಅನಧಿಕೃತವಾಗಿ ವಾಸಿಸುವವರು ಮತ್ತು ನುಸುಳುವವರನ್ನು ತಡೆಯುವುದಕ್ಕಾಗಿ ದುಲ್ ಕಅದ್ ತಿಂಗಳಿಂದ ಮಕ್ಕಾ ಸಮೀಪ ಪ್ರಾಂತ್ಯದ ದ್ವಾರದಲ್ಲಿ ಆರಂಭಿಸಿದ ತಪಾಸಣೆ ಇತ್ತೀಚೆಗಿನ ದಿನಗಳಲ್ಲಿ ಹೆಚ್ಚು ತೀವ್ರಗೊಳಿಸಲಾಗಿದೆ.

## ಬುಧ ಗ್ರಹಕ್ಕೆ ಮಾನವ



**ವಾಷಿಂಗ್ಟನ್:** ಬೇರೆ ಗ್ರಹಗಳನ್ನು ಕಾಲನಿ ಮಾಡುವ ಯೋಜನೆಯ ಅಂಗವಾಗಿ ಬುಧ ಗ್ರಹಕ್ಕೆ ಮಾನವರನ್ನು ಕಳಿಸುವ ಪ್ರಯತ್ನವನ್ನು ನಾಸಾ ಆರಂಭಿಸಿದೆ. ಈ ಗ್ರಹದಲ್ಲಿ ಸಂಶೋಧಕರು ಕಾಯಂ ಆಗಿ ಉಳಿದುಕೊಳ್ಳಲು ಸಾಧ್ಯವೇ ಎಂಬ ಸಾಧ್ಯತೆಗಳ ಅಧ್ಯಯನವನ್ನು ಅಮೇರಿಕದ ಬಾಹ್ಯಾಕಾಶ ಸಂಶೋಧನಾ ಕೇಂದ್ರವಾದ 'ನಾಸಾ' ನಡೆಸುತ್ತಿದೆ. 'ಎಂಡ್ವಿಡ್ ಇಯರ್ ಸ್ಟೋರ್ ಶಿಪ್' ಎಂದು ಈ ಯೋಜನೆಗೆ ಹೆಸರಿಸಲಾಗಿದ್ದು ಪೆಂಟಗಾನ್‌ನ ಸಹಾಯ ಲಭಿಸಲಿದೆ. 700 ಕೋಟಿ ಡಾಲರ್ ಇದಕ್ಕೆ ಖರ್ಚಾಗಲಿದ್ದು 2030ರ ವೇಳೆಗೆ ಈ ಯೋಜನೆ ಸಾಕ್ಷಾತ್ಕಾರಗೊಳ್ಳುವುದೆಂದು ನಾಸಾ ವಿಜ್ಞಾನಿಗಳು ನಿರೀಕ್ಷೆ ವ್ಯಕ್ತಪಡಿಸಿದ್ದಾರೆ.

## ಸನ್ಮಾರ್ಗ 25 ವರ್ಷಗಳ ಹಿಂದೆ

❖ ಸಂಪುಟ: 8 ❖ ಸಂಚಿಕೆ: 35 ❖ 1985 ಡಿಸೆಂಬರ್ 15–21

### ಅನಿಲ ಸೋರಿಕೆ

ಜಗತ್ತನ್ನೇ ನಡುಗಿಸಿದ ಭೋಪಾಲ ಅನಿಲ ಸೋರಿಕೆ ದುರಂತಕ್ಕೆ ವರ್ಷ ತುಂಬಿತು. ಅಧಿಕಾರಿಗಳ ಬೇಜವಾಬ್ದಾರಿತನ ಇದಕ್ಕೆ ಕಾರಣವೆಂದು ಅನೇಕರನ್ನು ಬಂಧಿಸಲಾಗಿತ್ತು. ಈ ಮಧ್ಯೆ ಒಂದು ವರ್ಷದ ಅವಧಿಯಲ್ಲಿ ದೇಶದ ನಾನಾ ಭಾಗದಲ್ಲಿ ಅನಿಲ ಸೋರಿಕೆ ಪ್ರಕರಣ ಉಂಟಾಗಿದೆ. ಡಿಸೆಂಬರ್ 3ರಂದು ಭೋಪಾಲದಲ್ಲಿ ದುರಂತದ ವರ್ಷಾಚರಣೆಯ ಬೆನ್ನಲ್ಲೇ ದೆಹಲಿಯಲ್ಲಿ ಓಲಿಯಂ ಅನಿಲಸ್ರಾವದಿಂದ ಅನೇಕರು ಅಸ್ವಸ್ಥರಾದ ಬಗ್ಗೆ ವರದಿಯಾಗಿದೆ. ಇವೆಲ್ಲ ಸರ್ಕಾರದ ಬೇಜವಾಬ್ದಾರಿಯನ್ನು ವಿಶದ ಪಡಿಸುವ ಪ್ರಕರಣಗಳು.

ಎರಡು ಸಹಸ್ರ ಮಂದಿಯನ್ನು ಶವವಾಗಿಸಿ 4 ಲಕ್ಷ ಜನರನ್ನು ಅಸ್ವಸ್ಥವಾಗಿಸಿದ ಭೋಪಾಲದ ಘಟನೆ ಚಿತ್ತ ಭಿತ್ತಿಯಲ್ಲಿ ಹಸಿರಾಗಿರುವಾಗಲೇ ಪುಂಖಾನುಪುಂಖವಾಗಿ ಅನಿಲ ಸೋರಿಕೆಯ ಪ್ರಕರಣಗಳು ಎದುರಾಗುತ್ತಿರುವುದು ಆಡಳಿತಾರೂಢರ ನಿಷ್ಕ್ರಿಯತೆಗೆ ಕನ್ನಡಿ ಹಿಡಿದಿದೆ. ಶ್ರೀರಾಮ್ ಫುಡ್ಸ್ ಎಂಡ್ ಫರ್ಟಿಲೈಝರ್ಸ್‌ನ ಪ್ರಧಾನ ವ್ಯವಸ್ಥಾಪಕರು ದುರಂತದ ಬಗ್ಗೆ ತಮ್ಮ ಅತೀವ ದುಃಖ ವ್ಯಕ್ತಪಡಿಸಿದ್ದಾರೆಂದು ಪತ್ರಿಕೆಗಳು ವರದಿ ಮಾಡಿವೆ. ಭೋಪಾಲ ದುರಂತದ ವೇಳೆಯೂ ದುಃಖದ ಮಹಾಪೂರವೇ ಹರಿದು ಬಂದಿತ್ತು. ಆದರೆ ದುಃಖ ಸೂಚನೆ ಮಾಡಿದ ಮಾತ್ರಕ್ಕೆ ದುರಂತಕ್ಕೆ ಪರಿಹಾರ ದೊರೆಯುವಂತಾಗುವುದಿಲ್ಲವೆಂದು ಅರಿಯದಿರುವುದೇ ಇನ್ನೊಂದು ದುರಂತ.

# 'ಮುಸ್ಲಿಮ್ ಸಾಹಿತ್ಯ ಪ್ರಶಸ್ತಿ'ಗಾಗಿ ಕೃತಿಗಳ ಆಹ್ವಾನ

**ಮಂಗಳೂರು:** ಇಲ್ಲಿನ ಮುಸ್ಲಿಮ್ ಲೇಖಕರ ಸಂಘವು ವರ್ಷಂಪ್ರತಿ ರಾಜ್ಯ ಮಟ್ಟದ 'ಮುಸ್ಲಿಮ್ ಸಾಹಿತ್ಯ ಪ್ರಶಸ್ತಿ'ಯನ್ನು ನೀಡುತ್ತಾ ಬಂದಿದ್ದು, 2009ನೇ ಸಾಲಿನ ಪ್ರಶಸ್ತಿಗಾಗಿ ಮುಸ್ಲಿಮ್ ಬರಹಗಾರರಿಂದ ಕನ್ನಡ ಕೃತಿಗಳನ್ನು ಆಹ್ವಾನಿಸಿದೆ. ಒಬ್ಬರು ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದರೆ ಅವುಗಳನ್ನೂ ಕಳುಹಿಸಬಹುದು. ರಾಜ್ಯದ ಹೊರಗೆ ನೆಲೆಸಿರುವ ಕನ್ನಡ ಮುಸ್ಲಿಮ್ ಬರಹಗಾರರೂ ಕೃತಿಗಳನ್ನು ಪ್ರಶಸ್ತಿಗೆ ಕಳುಹಿಸಬಹುದು. ಪ್ರಶಸ್ತಿಗೆ ಕಳುಹಿಸಲಾದ ಕೃತಿಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

ಪ್ರಶಸ್ತಿಯು 5,000 ರೂ. ನಗದು ಮತ್ತು ಪ್ರಶಸ್ತಿ ಪತ್ರವನ್ನೊಳಗೊಂಡಿರುವುದು. ಲೇಖಕರು 2009ರಲ್ಲಿ ಪ್ರಕಟವಾದ ತಮ್ಮ ಸ್ವಂತ ಕೃತಿಗಳ ನಾಲ್ಕು ಪ್ರತಿಗಳನ್ನು ದಿನಾಂಕ 15-11-2010ರೊಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಕೊಡಲು ಕೋರಲಾಗಿದೆ. (ಅನುವಾದಿತ ಕೃತಿಗಳನ್ನು ಪರಿಗಣಿಸಲಾಗುವುದಿಲ್ಲ)

**ಸಂಚಾಲಕರು**
**'ಮುಸ್ಲಿಮ್ ಸಾಹಿತ್ಯ ಪ್ರಶಸ್ತಿ'**
**ಮುಸ್ಲಿಮ್ ಲೇಖಕರ ಸಂಘ,**
**ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು - 575001**
**ದೂರವಾಣಿ: 2410358, 9448465432**

# ಮುಸ್ಲಿಮ್ ಲೇಖಕರ ಸಂಘ: ನ. 21ಕ್ಕೆ ಮಹಾಸಭೆ

**ಮಂಗಳೂರು:** ಮುಸ್ಲಿಮ್ ಲೇಖಕರ ಸಂಘದ ಮಹಾಸಭೆಯು ನವೆಂಬರ್ 21 ಆದಿತ್ಯವಾರ ಬೆಳಿಗ್ಗೆ 10 ಗಂಟೆಗೆ ಇಲ್ಲಿನ ಹಿದಾಯತ್ ಸೆಂಟರ್‌ನಲ್ಲಿ ನಡೆಯಲಿದೆ. ಸದಸ್ಯರೆಲ್ಲರೂ ತಪ್ಪದೇ ಹಾಜರಾಗಬೇಕಾಗಿ ಕೋರಲಾಗಿದೆ. ಹೊಸ ಸದಸ್ಯರಾಗಬಯಸುವವರು ಸಂಘದ ಹಿದಾಯತ್ ಸೆಂಟರ್‌ನಲ್ಲಿರುವ ಕಚೇರಿಯನ್ನು ಸಂಪರ್ಕಿಸಬಹುದು. **Ph: 9448465432**

# ಕಥಾ ಸ್ಪರ್ಧೆ

**ಮಂಗಳೂರು: 'ಮುಸ್ಲಿಮ್ ಮಹಿಳಾ ಸಾಹಿತ್ಯ ಸಂಘ ಮಂಗಳೂರು' ಇದರ ವತಿಯಿಂದ ಮಹಿಳಾ ಬರಹಗಾರ್ತಿಯರಿಗಾಗಿ ಸಣ್ಣ ಕಥಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಕಥೆ ನೈತಿಕ ಮೌಲ್ಯಗಳನ್ನು ಹೊಂದಿರಬೇಕು. ಫೂಲ್ಸ್‌ಕ್ಯಾಪ್ ಹಾಳೆಯ ಮೂರು ಪುಟಗಳನ್ನು ಮೀರಬಾರದು. ಆಯ್ಕೆಯಾದ ಮೂರು ಕಥೆಗಳಿಗೆ ನಗದು ಬಹುಮಾನ ನೀಡಲಾಗುವುದು.**

**ಪ್ರಥಮ ಬಹುಮಾನ – 750 ರೂ.,**
**ದ್ವಿತೀಯ ಬಹುಮಾನ – 500 ರೂ.,**
**ತೃತೀಯ ಬಹುಮಾನ – 350 ರೂ.**
**ಕಳುಹಿಸಬೇಕಾದ ಕೊನೆಯ ದಿನಾಂಕ ನವೆಂಬರ್ 30**
**ಕಥೆ ತಲುಪಿಸಬೇಕಾದ ವಿಳಾಸ:**
**ಸಣ್ಣ ಕಥಾ ಸ್ಪರ್ಧೆ**
**ಮುಸ್ಲಿಮ್ ಮಹಿಳಾ ಸಾಹಿತ್ಯ ಸಂಘ**
**ಬೀಬಿ ಅಲಾಬಿ ರಸ್ತೆ,**
**ಮಂಗಳೂರು– 575001**

# ಜಮಾಅತ್‌ನಿಂದ ಅತ್ಯಾಧುನಿಕ ಆಸ್ಪತ್ರೆ

**ನವದೆಹಲಿ:** ಜಮಾಅತೆ ಇಸ್ಲಾಮಿ ಹಿಂದ್‌ನ ವತಿಯಿಂದ ಅತ್ಯಾಧುನಿಕ ಸೌಕರ್ಯಗಳಿರುವ ಆಸ್ಪತ್ರೆಯೊಂದು ಇಲ್ಲಿನ ದಾವತ್ ನಗರ್‌ನಲ್ಲಿ ಆರಂಭಗೊಳ್ಳಲಿದೆ. ಏಕಕಾಲದಲ್ಲಿ 300 ರೋಗಿಗಳ ದಾಖಲಾತಿ ಸಾಮರ್ಥ್ಯವಿರುವ ಅಲ್ ಶಿಫಾ ಆಸ್ಪತ್ರೆಯ ಕಾಮಗಾರಿ ಭರದಿಂದ ಸಾಗುತ್ತಿದೆ. ಹಲವಾರು ಅತ್ಯಾಧುನಿಕ ಉಪಕರಣಗಳ ಸಹಾಯದಿಂದ ಚಿಕಿತ್ಸೆ ನೀಡುವ ಈ ಆಸ್ಪತ್ರೆಯ ಮೇಲುಸ್ತುವಾರಿಯನ್ನು ಝುಕಿರ್ ಅಲಿ ವಹಿಸಿದ್ದಾರೆ. ಚಿಕಿತ್ಸೆಯು ತುಟ್ಟಿಯಾದ ಈ ಕಾಲದಲ್ಲಿ ಅಗ್ಗದ ಚಿಕಿತ್ಸೆ ನೀಡುವುದು ಈ ಆಸ್ಪತ್ರೆಯ ಗುರಿಯಾಗಿದೆ. ತುರ್ತು ಚಿಕಿತ್ಸಾ ಘಟಕ, ಹೆರಿಗೆ ವಿಭಾಗ, ನಿಯೋ ನೇಚುರಲ್ ಐ.ಸಿ.ಯು. ಅತ್ಯಾಧುನಿಕ ಶಸ್ತ್ರ ಚಿಕಿತ್ಸಾ ವಿಭಾಗ, ಸ್ಕ್ಯಾನಿಂಗ್, ಎಕ್ಸರೇ ಮುಂತಾದ ಅತ್ಯಾಧುನಿಕ ಸೌಕರ್ಯಗಳು ಬಡವರ ಪಾಲಿಗೆ ಆಶಾದಾಯಕವಾಗಲಿದೆ.

ಮೊದಲ ಹಂತದಲ್ಲಿ 40 ಒಳರೋಗಿಗಳಿಗೂ 40 ಹೊರರೋಗಿಗಳಿಗೂ ಸೌಕರ್ಯ ಕಲ್ಪಿಸಲಾಗಿದೆ. ಉಪಕರಣಗಳ ಖರೀದಿಯು ಈಗಾಗಲೇ ಆರಂಭವಾಗಿದೆ.

"ಅಲ್ ಶಿಫಾ ಆಸ್ಪತ್ರೆಯು ಬಡವರ ಪಾಲಿಗೆ ವರದಾನವಾಗಲಿದೆ. ಹಣಗಳಿಕೆಗಾಗಿ ಪರಸ್ಪರ ಪೈಪೋಟಿ ನಡೆಸುತ್ತಿರುವ ಈ ಕಾಲದಲ್ಲಿ ಇದು ಕಡಿಮೆ ಖರ್ಚಿನ ಚಿಕಿತ್ಸೆ ನೀಡುತ್ತದೆ. ಇಲ್ಲಿ ತಜ್ಞ ವೈದ್ಯರಿಂದ ಚಿಕಿತ್ಸೆ ನೀಡಲಾಗುತ್ತದೆ. ನಮ್ಮ ಮುಖ್ಯ ಗುರಿ ಬಡವರ ಚಿಕಿತ್ಸೆಯಾಗಿದೆ" ಎಂದು ಝುಕಿರ್ ಅಲಿ ಹೇಳುತ್ತಾರೆ.

# ಎಸ್.ಐ.ಓ. ಸರ್ವ ಸದಸ್ಯರ ಸಭೆ




**ದಾವಣಗೆರೆ:** ತರಬೇತಿ ಮತ್ತು 2011–12ರ ಅವಧಿಯ ರಾಜ್ಯ ಸಲಹಾ ಮಂಡಳಿಯ ಚುನಾವಣೆಯ ಯೋಜನೆಯೊಂದಿಗೆ ಇಲ್ಲಿನ ದಂಡೋತಿ ರೈಸ್‌ಮಿಲ್‌ನ ಸಭಾಭವನದಲ್ಲಿ ಅಕ್ಟೋಬರ್ 15ರಿಂದ 17ರ ವರೆಗೆ ಎಸ್.ಐ.ಓ. ಸರ್ವ ಸದಸ್ಯರ ತ್ರಿದಿನ ಕಾರ್ಯಾಗಾರವು ಜರಗಿತು.

ಇಸ್ಲಾಮೀ ಸಾಮೂಹಿಕತೆ, ಶಿಕ್ಷಣ ಮತ್ತು ಸಂಘಟನೆಯಲ್ಲಿ ಸಮತೋಲನ, ಪವಿತ್ರ ಕುರ್‌ಆನಿನೊಂದಿಗೆ ಸಂಬಂಧ, ಸಂದೇಶ ಪ್ರಚಾರ– ನಮ್ಮ ಹೊಣೆಗಾರಿಕೆ, ಸಂದೇಶ ಪ್ರಚಾರದ ವಿಧಾನಗಳು, ಜ್ಞಾನದ ತತ್ವಶಾಸ್ತ್ರ, ವಿದ್ಯಾರ್ಥಿ ಸಂಘಟನೆ ಯಾಕೆ ಮತ್ತು ಹೇಗೆ? ಇಸ್ಲಾಮೀ ಆಂದೋಲನದ ಅಗತ್ಯ ಮತ್ತು ಆದ್ಯತೆ ಇತ್ಯಾದಿ ವಿಷಯಗಳಲ್ಲಿ ಭಾಷಣ, ಚರ್ಚೆ ಮತ್ತು ವಿಚಾರಗೋಷ್ಠಿಗಳು ನಡೆದುವು.

ಈ ಕಾರ್ಯಾಗಾರದಲ್ಲಿ ಗಣ್ಯ ಅತಿಥಿಗಳಾಗಿ ಜ.ಇ. ಕರ್ನಾಟಕ–ಗೋವಾ ಘಟಕಾಧ್ಯಕ್ಷರಾದ ಮುಹಮ್ಮದ್ ಅಬ್ದುಲ್ಲಾ ಜಾವೀದ್, ಜ.ಇ. ಕೇಂದ್ರ ಸಲಹಾ ಮಂಡಳಿ ಸದಸ್ಯರಾದ ಎಸ್. ಅಮೀನುಲ್ ಹಸನ್, ಜ.ಇ. ವಲಯ ಸಂಚಾಲಕರಾದ ಲಿಯಾಕತ್ ಅಹ್ಮದ್, ಜ.ಇ. ರಾಜ್ಯ ಸಲಹಾ ಮಂಡಳಿ ಸದಸ್ಯರಾದ ಶಾಹಿದ್ ಮೆಮನ್, ಯೂತ್‌ವಿಂಗ್ ದ.ಕ. ಸಂಚಾಲಕರಾದ ಮುಹಮ್ಮದ್ ಕುಂಞಿ, ವಲಯ ಸಂಚಾಲಕ ಅಬ್ದುಲ್ ಹಸೀಬ್, ವಲಯ ಸಹಸಂಚಾಲಕರಾದ ಚಮನ್ ಮಿಯಾ ಭಾಗವಹಿಸಿದ್ದರು. ಎಸ್.ಐ.ಓ. ರಾಷ್ಟ್ರೀಯ ಅಧ್ಯಕ್ಷರಾದ ಸುಹೈಲ್ ಕೆ.ಕೆ. ಮುಖ್ಯ ಭಾಷಣ ಮಾಡಿದರು. ಎಸ್.ಐ.ಓ. ರಾಜ್ಯಾಧ್ಯಕ್ಷ ಶೌಕತ್ ಅಲಿ ಮತ್ತು ರಾಷ್ಟ್ರೀಯ ಕಾರ್ಯದರ್ಶಿ ಮುಹಮ್ಮದ್ ಬಿಲಾಲ್ ಹಾಗೂ ಕೇಂದ್ರ ಸಲಹಾ ಮಂಡಳಿ ಸದಸ್ಯ ಹಶ್ಮತುಲ್ಲಾ ಖಾನ್ ಉಪಸ್ಥಿತರಿದ್ದರು.

## ನಿಧನ

● **ಮಂಗಳೂರು:** ಇಲ್ಲಿನ ಕುದ್ರೋಳಿಯ ನಿವಾಸಿ ಕಾಸಿಮ್(66) ಅವರು ಕೆಲವು ಸಮಯದ ಅಸ್ವಾಸ್ಥ್ಯದ ಬಳಿಕ ಅಕ್ಟೋಬರ್ 30ರಂದು ನಿಧನರಾದರು. 'ಫಾಲ್ಗುಣಿ' ಎಂಬ ಹೆಸರಿನ ಲಾರಿ ಮಾಲಕರಾಗಿದ್ದ ಅವರು ಪತ್ನಿ ಮತ್ತು ಮೂವರು ಗಂಡು ಮಕ್ಕಳನ್ನೂ ಅಪಾರ ಬಂಧು ಮಿತ್ರಾದಿಗಳನ್ನೂ ಅಗಲಿದ್ದಾರೆ. ಮೃತರು ನಗರದ ಜಮಾಅತ್ ಸದಸ್ಯರಾದ ಕೆ. ಇಸ್ಮಾಈಲ್‌ರವರ ಹಿರಿಯ ಸಹೋದರರಾಗಿದ್ದಾರೆ.

● **ತೊಕ್ಕೊಟ್ಟು:** ಇಲ್ಲಿಗೆ ಸಮೀಪದ ಮಲಾರ್ ಅರಸ್ತಾನದ ಬೀಫಾತಿಮ(65) ಅಲ್ಪಕಾಲದ ಅಸೌಖ್ಯದ ಬಳಿಕ ಅಕ್ಟೋಬರ್ 29ರಂದು ನಿಧನರಾದರು. ಅವರು ಪತಿ, ಮಲಾರ್ ಯೂತ್‌ವಿಂಗ್ ಸಂಚಾಲಕ ಬದ್ರುದ್ದೀನ್ ಸಹಿತ ನಾಲ್ವರು ಪುತ್ರರನ್ನೂ ಇಬ್ಬರು ಪುತ್ರಿಯರನ್ನೂ ಅಗಲಿದ್ದಾರೆ.

● **ಉಪ್ಪಿನಂಗಡಿ:** ಇಲ್ಲಿನ ಬ್ಯಾಂಕ್ ರಸ್ತೆಯಲ್ಲಿರುವ ಕರ್ನಾಟಕ ಆಯಿಲ್ ಮಿಲ್ ಎಂಡ್ ಫ್ಲೋರ್ ಮಿಲ್ ಇದರ ಮಾಲಕರಾದ ಯು.ಟಿ. ಅಬ್ಬಾಸ್ ಹಾಜಿ(67) ಕೆಲಕಾಲದ ಅಸ್ವಾಸ್ಥ್ಯದಿಂದ ಅ. 22ರಂದು ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಹಾಗೂ ಓರ್ವ ಪುತ್ರಿ ಸಹಿತ ಅಪಾರ ಬಂಧು ಬಳಗವನ್ನೂ ಅಗಲಿದ್ದಾರೆ.

● **ಗುಲ್ಬರ್ಗಾ:** ಇಲ್ಲಿನ ಜಮಾಅತ್ ಸದಸ್ಯರಾಗಿದ್ದ ಮೀರ್ ಶೌಕತ್ ಅಲಿಯವರು(78) ಇತ್ತೀಚೆಗೆ ನಿಧನರಾದರು. ನಿವೃತ್ತ ಹೆಲ್ತ್ ಇನ್ಸ್‌ಪೆಕ್ಟರ್ ಆಗಿದ್ದ ಅವರು ಜಮಾಅತ್‌ನ ಸ್ಥಾನೀಯ ಪ್ರಸಾರ ವಿಭಾಗದ ಸಂಚಾಲಕರಾಗಿದ್ದರು. ಬಹಳ ಸೌಮ್ಯ ಸ್ವಭಾವಿಯೂ ಜನಾನುರಾಗಿಯೂ ಆಗಿದ್ದ ಅವರು ಧರ್ಮದ ನಿಷ್ಠಾವಂತ ಸೇವಕರಾಗಿದ್ದರು. ಮೃತರು ಪತ್ನಿ, ಐವರು ಪುತ್ರರನ್ನೂ, ನಾಲ್ವರು ಪುತ್ರಿಯರನ್ನೂ ಅಪಾರ ಬಂಧು ಮಿತ್ರಾದಿಗಳನ್ನೂ ಅಗಲಿದ್ದಾರೆ.

ಅಲ್ಲಾಹನು ಮೃತರೆಲ್ಲರಿಗೂ ಮಗ್‌ಫಿರತ್ ಮತ್ತು ಮರ್‌ಹಮತ್ ನೀಡಲಿ.

# ಲೂಟುವ ರಾಜಕೀಯವೂ ಕನ್ನಡ ರಾಜ್ಯೋತ್ಸವವೂ

(ಮುಖಪುಟದಿಂದ)

ತಮಗೆ ಬೇಕಾದ ತಮ್ಮ ನಿಷ್ಠಾವಂತರನ್ನು ಪಟ್ಟಿಗೆ ತೂರಿಸಿ ಆಯ್ಕೆ ಸಮಿತಿಯಿಂದ ಆಯ್ಕೆಗೊಂಡವರನ್ನು ಬದಿಗೆ ತಳ್ಳುವ ಪ್ರಕ್ರಿಯೆ ನಡೆದಿದೆಯೇ? ಅಂದರೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಪಟ್ಟಿಗೆ ಇನ್ನೂ ಹತ್ತು ಹದಿನೈದು ಮಂದಿಯನ್ನು ಸೇರಿಸುವ ಸಾಧ್ಯತೆ ಕಂಡುಬಂದಿದೆ. ಕೆಲವು ರಾಜಕೀಯ ಚತುರರು ತಮ್ಮ ಪಟ್ಟಿ ಹಿಡಿದು ಅಲೆದಾಡುತ್ತಿರಬಹುದು. ಅಂದರೆ ಅರ್ಹರಿಗೆ ಅನ್ಯಾಯವಾಗಬಾರದು ಎಂಬ ಸದುದ್ದೇಶವೇ ಈ ಪ್ರಶ್ನೆಗೆ ಕಾರಣ. ಈ ನಾಡು-ನುಡಿಗೆ ಸೇವೆ ಸಲ್ಲಿಸಿದವರನ್ನು ಗುರುತಿಸುವುದು ನಾಡಿನ ಆಡಳಿತಗಾರರ ಹೊಣೆಯಾಗಿದೆ.

ಅದಿರಲಿ, ರೈತರ ಹೆಸರಿನಲ್ಲಿಯೇ ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿಗಳು ಕಳೆದ ವಾರ ಹುಬ್ಬಳ್ಳಿಯ ಹಳ್ಯಾಲದ ರೈತ ನಿಂಗಪ್ಪರ ಮನೆಯಲ್ಲಿ ರೈತರ ನೋವನ್ನು ಆಲಿಸಿ ಗಳಗಳನೆ ಅತ್ತುಬಿಟ್ಟರು. ಮತ್ತೊಂದೆಡೆ ಟೈ ಕೋಟು ಧರಿಸಿ ಟಿಪ್‌ಟಾಪಾಗಿ ಬಂಡವಾಳಶಾಹಿಗಳ ಮೆಚ್ಚುಗೆಗೆ ಪಾತ್ರವಾಗುತ್ತಿದ್ದಾರೆ. ಈ ನಾಡಿನ ಮಣ್ಣಿನ ಮಗ ರೈತನ ಭೂಮಿಯಲ್ಲಿ ಫ್ಯಾಕ್ಟರಿ ನಿರ್ಮಿಸಲು ಹಸಿರು ನಿಶಾನೆ ತೋರಿಸಿ, ಅವರ ಅನ್ನಕ್ಕೆ ಕಲ್ಲು ಹಾಕುತ್ತಿದ್ದಾರೆ. ಮಾತ್ರವಲ್ಲ, ಅಭಿವೃದ್ಧಿಯ ನೆಪದಲ್ಲಿ ರಾಜ್ಯದ ಭೂಮಿಯನ್ನು ವಿದೇಶಿ ಹೂಡಿಕೆದಾರರಿಗೆ ಮಾರುತ್ತಿದ್ದಾರೆ. ಇದು ಒಂದೆಡೆಯಾದರೆ ಮತ್ತೊಂದೆಡೆ ರಾಜಕೀಯವೆಂಬುದು ದುರ್ನಾತ ಬೀರುತ್ತಿದೆ. ರವಾನೆಯಾಗುತ್ತಿರುವ ಕೋಟಿ ಕೋಟಿ ಹಣಗಳ ವಿವರ ಕೇಳಿದಾಗ ಇಷ್ಟೊಂದು ಹಣ ಈ ನಾಡಿನ ರಾಜಕೀಯ ಧುರೀಣರು ಚೆಲ್ಲಾಟವಾಡಬೇಕಾದರೆ ಈ ನಾಡಿನ ಅದೆಷ್ಟು ಸಂಪತ್ತನ್ನು ಕೊಳ್ಳೆ ಹೊಡೆದಿರಬಹುದು ಎಂದು ಅನುಮಾನ ಮೂಡುತ್ತಿದೆ. ಎಲ್ಲ ರೀತಿಯ ಹಗರಣಗಳೂ ಇಲ್ಲಿ ರಾರಾಜಿಸಿವೆ. ಅಶ್ಲೀಲತೆಯೂ ಅನೈತಿಕತೆಯೂ ಮಿತಿಮೀರಿದೆ. ಸಭ್ಯನೆನಿಸಿದ ರಾಜಕಾರಣಿಗೆ ಇಲ್ಲಿ ಬರವಾಗಿದೆ. ನಾಡಿಗೆ ಸೇವೆ ಸಲ್ಲಿಸಿದ ಈ ನಾಡಿನ ಉಳಿವಿಗೆ ಹೋರಾಡಿದ ಸಾಧನೆಗಳನ್ನು ಹೇಳಿ ಹೊಗಳಿ ಶಿಳ್ಳೆ ಹೊಡೆಸಿಕೊಂಡು ಚಪ್ಪಾಳೆ ಗಿಟ್ಟಿಸಿಕೊಳ್ಳುವ ಆಡಳಿತಾರೂಢರು ಈ ನಾಡಿಗಾಗಿ ಏನು ಮಾಡಿದ್ದೇವೆ ಎಂಬುದರ ಕುರಿತು ಆತ್ಮಾವಲೋಕನ ನಡೆಸಿದರೆ ಆಗ ರಾಜ್ಯೋತ್ಸವಕ್ಕೊಂದು ಅರ್ಥ ಬರಬಹುದು.

ನಾಡಿನ ಸಂಪತ್ತನ್ನು ಲೂಟಿಗೈದು ಜೈ ಕನ್ನಡಮ್ಮ ಜೈ ಭುವನೇಶ್ವರಿ ಎನ್ನುತ್ತಾ ಘೋಷಣೆ ಕೂಗಿದರೆ ಅದು ತಾವೂ ಈ ನಾಡಿಗೆ ಈ ನಾಡಿನ ಜನತೆಗೆ ಬಗೆಯುವ ದ್ರೋಹ ಎಂಬುದನ್ನು ಮರೆಯಬಾರದು. ಕನ್ನಡ ಎನೆ ಕುಣಿದಾಡುವುದೆನ್ನೆದೆ ಕನ್ನಡ ಎನೆ ಕಿವಿ ನಿಮಿರುವುದು ಎಂದು ಇಲ್ಲಿನ ರಾಜಕಾರಣಿಗಳು ಹಾಡುವಾಗ ಅವರ ಉದ್ದೇಶದ ಬಗ್ಗೆ ಅನುಮಾನ ಮೂಡುವುದು ಸಹಜ. ಕಾರಣ ಅವರ ಕಿವಿಯನ್ನು ಮತದಾರ ಹಿಂಡುವ ದಿನ ದೂರವಿಲ್ಲ. ತಮ್ಮ ಅನಾಗರಿಕ ವರ್ತನೆಯಿಂದ ಕರ್ನಾಟಕದ ಹೆಸರಿಗೆ ಕಳಂಕ ತರುವ ಈ ರಾಜಕೀಯ ಮಹಾಶಯರುಗಳು ಇನ್ನಾದರೂ ಸಭ್ಯತೆಯ ಮುಖಾಂತರ ನಾಡಿನ ಮಾನವನ್ನು ಉಳಿಸಬೇಕಾಗಿದೆ. ಕನ್ನಡ ನಾಡಿನ ಸುಂದರ ಭವ್ಯ ಪರಂಪರೆಯನ್ನು ಮುಂದುವರಿಸಲು ನಾವು ಅಣಿಯಾಗಬೇಕಾಗಿದೆ. ಯಾಕೆಂದರೆ ಕೋಮು ವಿಷ ಕಾರುವ ಲೇಖನಿಗಳನ್ನು ಹಿಡಿದು ಕನ್ನಡಿಗರನ್ನು ಒಡೆಯುವ ಬರಹಗಾರರೂ ನಮ್ಮಲ್ಲಿದ್ದಾರೆ. ಭಾಷೆಯ ಹೆಸರು ಹೇಳಿ ವಿಭಜಿಸುವ ಜನರೂ ಇದ್ದಾರೆ. ಇಂಥವರಿಗೆ ಈ ನಾಡಿನ ಹಿತಾಕಾಂಕ್ಷಿಗಳು ಮನ್ನಣೆ ನೀಡಬಾರದು. ಸೌಹಾರ್ದವನ್ನು ಬಿಂಬಿಸುವ, ಸಾಮರಸ್ಯತೆಯನ್ನು ಪ್ರೋತ್ಸಾಹಿಸುವ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾರುವವರಿಗೆ ಮಹತ್ವ ನೀಡಬೇಕು.

EXIDE
INDUSTRIES LIMITED
GEM BATTERY CENTRE 2, Sunflowr Apartments,
Opp. St. Andrew's Church, Vasco-da-gama, Goa
Tel: 0832-2511270 / 2519066 Email: gembatteriesgoa@indiatimes.com




To.

SANMARGA KANNADA WEEKLY
Post Box No. 16, Hidayath Centre, Mangalore - 575 001 ☎: 2422786
2010 ನವೆಂಬರ್ 07 – 13 / 1431 ದುಲ್‌ಕಅದ್ 29 – ದುಲ್ ಹಜ್ಜ್ 06




'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 02-11-2010 (Tuesday) & 04-11-2010 (Thursday)

## ವಿಷನ್ 2016: ವಿದ್ಯಾರ್ಥಿಗಳಿಗೆ ಸನ್ಮಾನ




**ಗುವಾಹಟಿ:** ವಿಷನ್ 2016ರ ಅಧೀನದಲ್ಲಿರುವ ಹ್ಯುಮಾನಿಟೇರಿಯನ್ ವೆಲ್ಫೇರ್ ಫೌಂಡೇಶನ್ ಅಸ್ಸಾಮಿನಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗಾಗಿ ಸನ್ಮಾನ ಸಮಾರಂಭ ಏರ್ಪಡಿಸಿತು. ಬೋರ್ಡ್ ಪರೀಕ್ಷೆಯಲ್ಲಿ ಶೇಕಡಾ 60ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಈ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಪ್ರತಿ ವಿದ್ಯಾರ್ಥಿಗೆ ಸಾವಿರ ರೂಪಾಯಿ ಮತ್ತು ಪ್ರಮಾಣ ಪತ್ರವನ್ನು ನೀಡಲಾಯಿತು. ಗುವಾಹಟಿಯ ರವೀಂದ್ರ ಭವನದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಜಮಾಅತೆ ಇಸ್ಲಾಮಿ ಅಖಿಲ ಭಾರತ ಉಪಾಧ್ಯಕ್ಷ ಮತ್ತು HWFನ ಪ್ರಧಾನ ಕಾರ್ಯದರ್ಶಿ ಪ್ರೊ| ಕೆ.ಎ. ಸಿದ್ದೀಕ್ ಹಸನ್ ಮುಖ್ಯ ಅತಿಥಿಯಾಗಿದ್ದರು. ಅಸ್ಸಾಮ್ ಘಟಕಾಧ್ಯಕ್ಷ ಶಂಸ್ ಅಹ್ಮದ್ ಅಧ್ಯಕ್ಷತೆ ವಹಿಸಿದ್ದರು. ಅಸ್ಸಾಂ ರಾಜ್ಯ ಆರೋಗ್ಯ ಸಹ ಕಾರ್ಯದರ್ಶಿ ಎ.ಹೆಚ್. ಕಂಡಾಕರ್, ಗುವಾಹಟಿ ವಿಶ್ವವಿದ್ಯಾನಿಲಯದ ಮಾಜಿ ರಿಜಿಸ್ಟ್ರಾರ್ ಡಾ| ರಮಾನಂದ್ ದಾಸ್, ಬಿ.ಬಿ. ಕಿಶನ್ ಕಾಲೇಜು ಪ್ರಾಂಶುಪಾಲ ಡಾ| ಪ್ರತಾಪ್ ನಾಗ್ ಮುಂತಾದವರು ಉಪಸ್ಥಿತರಿದ್ದರು.

## ಅಸ್ಸಾಂ: ಅಲ್ಪಸಂಖ್ಯಾತರ ಮತಕ್ಕಾಗಿ ಕಸರತ್ತು

ಮುಂದಿನ ವರ್ಷ ಆರಂಭದಲ್ಲಿ ಅಸ್ಸಾಂ ವಿಧಾನಸಭೆಯ 126 ಸ್ಥಾನಗಳಿಗಾಗಿ ನಡೆಯಲಿರುವ ಚುನಾವಣೆಗೆ ಮುನ್ನುಡಿಯಾಗಿ ವಿವಿಧ ರಾಜಕೀಯ ಸಂಘಟನೆಗಳು ಅಲ್ಪಸಂಖ್ಯಾತರ ಮತ ಗಳಿಕೆಗಾಗಿ ಅಭಿಯಾನ ಆರಂಭಿಸಿವೆ. 30% ಮುಸ್ಲಿಮರ ಮತವು ಅಧಿಕಾರ ಪಡೆಯುವಲ್ಲಿ ನಿರ್ಣಾಯಕವಾಗಿದೆ. 40 ಪಂಚಾಯತುಗಳ ಭವಿಷ್ಯ ನಿರ್ಣಯಿಸುವುದು ಮುಸ್ಲಿಮ್ ಮತದಾರರಾಗಿದ್ದಾರೆ. ಇವರಲ್ಲದೆ ಅಲ್ಲಿನ ಚಹಾ ತೋಟದ ಕೆಲಸಗಾರರು, ನೇಪಾಳಿ ವಲಸೆಗಾರರೂ ಕೂಡಾ ನಿರ್ಣಾಯಕ ಶಕ್ತಿಯಾಗಿದ್ದಾರೆ. 2001 ಮತ್ತು 2006ರ ಚುನಾವಣೆಯಲ್ಲಿ ಸೋತಿದ್ದ ಅಸ್ಸಾಂ ಗಣ ಪರಿಷತ್ ಮುಸ್ಲಿಮರ ಮತ ಗಳಿಕೆಗಾಗಿ ತಂತ್ರ ಹೆಣೆಯುತ್ತಿದೆ. ನಿರಂತರವಾಗಿ ಮುಸ್ಲಿಮರ ಮತಗಳನ್ನು ಗಳಿಸುತ್ತಿರುವ ಕಾಂಗ್ರೆಸ್ ಅವರನ್ನು ವಂಚಿಸುತ್ತಿದೆ ಎಂದು ಎ.ಜಿ.ಪಿ. ಪ್ರಚಾರ ನಡೆಸುತ್ತಿದೆ. ಕಳೆದ ಚುನಾವಣೆಯಲ್ಲಿ 11 ಸೀಟು ಗಳಿಸಿದ ಎ.ಯು.ಡಿ.ಎಫ್. ಅಲ್ಪಸಂಖ್ಯಾತರ ಮತಕ್ಕಾಗಿ ಏಕಾಂಗಿ ಹೋರಾಟ ನಡೆಸುತ್ತಿದೆ.

## ಕಾರ್ಗಿಲ್ ಯೋಧರ ಮನೆಯನ್ನೂ ನುಂಗಿದರು

(ಮುಖಪುಟದಿಂದ)

ಕಾರ್ಗಿಲ್‌ಗೆ ಸಂಬಂಧಿಸಿದ ಕುಟುಂಬ ಕೇವಲ 3 ಮಾತ್ರ.

ನಿಜವಾಗಿ ಇಂತಹ ಹಗರಣಗಳು ಕಾಂಗ್ರೆಸ್‌ಗೆ ಹೊಸದಲ್ಲ. ಅದೇ ರೀತಿ ಕಾಂಗ್ರೆಸನ್ನು ಟೀಕಿಸುತ್ತಿರುವ ಪ್ರತಿಪಕ್ಷಗಳೂ ಇದಕ್ಕೇನೂ ಭಿನ್ನವಲ್ಲ. ಈ ದೇಶದ ನಾಗರಿಕರನ್ನು ದೇಶದ್ರೋಹಿ ಎಂದು ಹೆಸರಿಸಿ ಜೈಲಿಗೆ ತಳ್ಳುವ ಈ ಅಧಿಕಾರ ರೂಢರು ಇಲ್ಲಿ ದೇಶಕ್ಕಾಗಿ ಹೋರಾಡಿ ಮಡಿದವರ ಸ್ಮರಣೆಗಾಗಿ ನಿರ್ಮಿಸಿದ ವಸತಿಗಳನ್ನು ನುಂಗಿ ಹಾಕಲು ಸಿದ್ಧರೆಂದಾದರೆ, ಇವರ ದೇಶಪ್ರೇಮ ಎಂತಹದ್ದು ಎಂಬುದನ್ನು ಆಲೋಚಿಸಬೇಕಾಗಿದೆ.

**www.sanmarga.com ಸನ್ಮಾರ್ಗ ವೆಬ್‌ಸೈಟ್‌ನ ವಿನ್ಯಾಸದ ಬಗ್ಗೆ ನಿಮ್ಮ ಸಲಹೆ, ಅಭಿಪ್ರಾಯಗಳಿಗೆ ಸ್ವಾಗತ.**

## ಈ ತೀರ್ಪು ನ್ಯಾಯಕ್ಕೆ ಸಂದ ಗೆಲುವೇ?

(ಮುಖಪುಟದಿಂದ)

ಆದರೆ ಈ ತೀರ್ಪಿನಿಂದ ಈ ವ್ಯವಸ್ಥೆಯಲ್ಲಿ ಅಂತಹ ಪರಿಣಾಮವೇನೂ ಸಂಭವಿಸಲಾರದು ಎಂದೇ ಹೇಳಬೇಕಾಗುತ್ತದೆ. ಐಜಿಪಿಯನ್ನು ನ್ಯಾಯಾಲಯ ಶಿಕ್ಷಿಸಿದ್ದು ನಿಜವಾದರೂ ಅವರು ಕೆಲಸ ಮಾಡಿದ್ದ ಸರಕಾರ ಅದರ ಹೊಣೆಗಾರರಿಗೆ ಯಾವ ಶಿಕ್ಷೆಯೂ ಆಗಿಲ್ಲ. ಹೇಳಿಕೇಳಿ ವರ್ಗೀಸ್‌ರ ಮೇಲೆ ಮಾವೋಯಿಸ್ಟ್ ಎಂಬ ಆರೋಪವಿತ್ತು. ಮಾವೋಯಿಸ್ಟ್ ದಮನ ಎಂಬುದು ಸರಕಾರಿ ಉದ್ದೇಶವಾಗಿರುವಾಗ ಬರೇ ಲಕ್ಷ್ಮಣ ತನ್ನೊಬ್ಬನ ನಿರ್ಧಾರದಂತೆ ವರ್ಗೀಸ್‌ರನ್ನು ಕೊಂದಿದ್ದಾರೆಂದು ನಂಬುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಸಾಮಾನ್ಯ ನಾಗರಿಕನಿಗೆ ಮಾವೋಯಿಸ್ಟ್ ಪಟ್ಟ ಕಟ್ಟುವುದರ ಹಿಂದೆ ಸರಕಾರಿ ಷಡ್ಯಂತ್ರವೂ ಅಡಕವಾಗಿದೆ. ಹಾಗಿರುವಾಗ ಲಕ್ಷ್ಮಣ ತನ್ನ ಸರಕಾರಕ್ಕಾಗಿ ಕೆಲಸ ಮಾಡಿದ್ದಾರೆ. ಆದ್ದರಿಂದ ಲಕ್ಷ್ಮಣರನ್ನೊಳಗೊಂಡು ಅಂದಿನ ಸರಕಾರವೂ ಶಿಕ್ಷೆಗೆ ಹೆಗಲು ಕೊಡಬೇಕೆಂಬ ಸ್ಥಿತಿ ನಡೆದಾಗಲೇ ನ್ಯಾಯ ಎಂಬುದು ಪೂರ್ಣ ಪ್ರಕ್ರಿಯೆಯಾಗಬಹುದು. ಕನಿಷ್ಠ ವರ್ಗೀಸ್ ಕೆಲಸ ಮಾಡಿದ್ದ ಅಂದಿನ ಗೃಹಖಾತೆಯ ಸಚಿವರನ್ನು ಕೂಡಾ ಈ ಶಿಕ್ಷೆ ಬಾಧಿಸಿಲ್ಲ ಎಂದ ಮೇಲೆ ಈ ವ್ಯವಸ್ಥೆಯಲ್ಲಿ ಯಾವ ಬದಲಾವಣೆ ಮತ್ತು ಪಾಠಗಳನ್ನು ಈ ತೀರ್ಪಿನಿಂದ ನಿರೀಕ್ಷಿಸಬೇಕು?

ನಮ್ಮ ನ್ಯಾಯ ವಿಧಾನದಲ್ಲಿ ಪೊಲೀಸರ ಕರ್ಮಕಾಂಡಕ್ಕೆ ಸರಕಾರ ಹೊಣೆಯೆಂದು ಗುರುತಿಸಿ ಶಿಕ್ಷಿಸಲ್ಪಡದೆ ಹೋಗುವುದಾದರೆ ಇಂತಹ ತೀರ್ಪಿಗೆ ನಲ್ವತ್ತು ವರ್ಷ ಕಾದರೂ ಒಂದೇ ಇಲ್ಲದಿದ್ದರೂ ಒಂದೇ. ಸರಕಾರಿ ಪ್ರಾಯೋಜಿತ ಭಯೋತ್ಪಾದನೆಗೆ ಸಮಾಜ ಎಂದೂ ಬಲಿಯಾಗಬಹುದು. ಅದೆಷ್ಟೋ ಅಮಾಯಕರು ಬಲಿಯಾಗಬಹುದು. ಈ ಹಿನ್ನಲೆಯಲ್ಲಿ ಈ ತೀರ್ಪಿನ ನಂತರವೂ ವರ್ಗೀಸ್‌ರ ಕುಟುಂಬಕ್ಕೆ ನ್ಯಾಯ ಸಿಕ್ಕಿದರೂ ಸಮಾಜದ ಆರೋಗ್ಯದ ಗತಿ ಏನು ಎಂಬ ಪ್ರಶ್ನೆ ಖಂಡಿತಾ ತಲೆದೋರುತ್ತದೆ. ಪುರಾವೆ-ದಾಖಲೆಗಳಲ್ಲಿ ವ್ಯವಹರಿಸುವ ಕೋರ್ಟು ಇವೆಲ್ಲವನ್ನೂ ತೀರ್ಮಾನಿಸಬಹುದು.

ಒಂದು ತೀರ್ಪಿಗೆ ಸಮಾಜದಲ್ಲಿ ಮತ್ತು ವ್ಯವಸ್ಥೆಯಲ್ಲಿ ಸಂಚಲನ ಅಥವಾ ಪಾಠಬೋಧಕತೆಯನ್ನು ಹುಟ್ಟುಹಾಕುವ ಶಕ್ತಿ ಬರಬೇಕಾದರೆ ಅದು ಸಮಾಜಕ್ಕೆ ಸರ್ವಾಂಗೀಣ ನ್ಯಾಯವನ್ನು ದಕ್ಕಿಸುವಂತಿರಬೇಕು. ಆದರೆ ದಾಖಲೆಗಳನ್ನು ನೋಡಬೇಕಾದ ನ್ಯಾಯಾಲಯಕ್ಕೆ ಎಲ್ಲ ಪ್ರಕರಣಗಳಲ್ಲೂ ಹೀಗೆ ಮಾಡಲು ಸಾಧ್ಯವಿಲ್ಲ. ಸರಕಾರಿ ಪ್ರಾಯೋಜಿತ ತನಿಖಾ ಸಂಸ್ಥೆಗಳು ಸರಕಾರಿ ಭಯೋತ್ಪಾದನೆಗೆ ಪುರಾವೆ-ದಾಖಲೆಗಳನ್ನು ಒದಗಿಸಿಕೊಟ್ಟೀತೆಂದು ಊಹಿಸುವುದು ಕಷ್ಟವಾದದ್ದು.

ಆಡಳಿತಗಾರರ ಪ್ರೇರಣೆಯಿಂದ ಪೊಲೀಸರು ಕೊಲೆಗಡುಕರಾದ ಅದೆಷ್ಟೋ ಘಟನೆಗಳನ್ನು ನಾವಿಂದು ಹೆಕ್ಕಬಹುದು. ಗುಜರಾತ್ ದಂಗೆಯಲ್ಲಿ, ಮುಂಬೈ ದಂಗೆಯಲ್ಲಿ, ಭಾಗಲ್ಪುರ ಹತ್ಯಾಕಾಂಡದಲ್ಲಿ ಪೊಲೀಸರು ತಪ್ಪಿತಸ್ಥರಾಗಿದ್ದಾರೆ. ಶ್ರೀಕೃಷ್ಣ ಆಯೋಗ ಮುಂಬೈ ದಂಗೆಯಲ್ಲಿ ಪೊಲೀಸರನ್ನು ತಪ್ಪಿತಸ್ಥ ಎಂದು ಗುರುತಿಸಿತು. ಭಾಗಲ್ಪುರದ ಹತ್ಯಾಕಾಂಡದಲ್ಲಿ ಕೆಲವು ಪೊಲೀಸರನ್ನು ನ್ಯಾಯಾಲಯ ತಪ್ಪಿತಸ್ಥರೆಂದು ಸೂಚಿಸಿತು. ಗುಜರಾತ್ ದಂಗೆಯಲ್ಲಿ ಪೊಲೀಸ್ ರೌಡಿಗಳಲ್ಲಿ ಹಲವರು ಕೋರ್ಟಿನ ಕಟಕಟೆಯ ಮುಂದೆ ವಿಚಾರಣೆಗೊಳಗಾಗಿ ಜೈಲು ಸೇರಿದ್ದಾರೆ. ಪೊಲೀಸರು ಇಷ್ಟು ನಿರ್ಭಯವಾಗಿ ನಾಗರಿಕರ ಹತ್ಯೆ ನಡೆಸುವುದಕ್ಕೆ ಸರಕಾರಿ ಕೃಪಾಶ್ರಯವಿಲ್ಲದೆ ಸಾಧ್ಯವೇ ಆಗದು.

ಈಗ ಹಣ್ಣು ಹಣ್ಣು ಮುದುಕನಾಗಿರುವ ಲಕ್ಷ್ಮಣರನ್ನು ನೋಡುವಾಗ ಅಯ್ಯೋ ಎಂದೆನ್ನಿಸುತ್ತದೆ. ಜೊತೆಗೆ ರುಚಿಕಾ ಲೈಂಗಿಕ ಹಗರಣದ ಆರೋಪಿ ರಾಠೋಡ್‌ರು ನೆನಪಿಗೆ ಬರುತ್ತಾರೆ. ಒಂದು ವೇಳೆ ಲಕ್ಷ್ಮಣ್‌ರಿಗೆ ತೋಚಿದ್ದಂತೆ ವರ್ತಿಸುವ ಸಲುಗೆ ಸಿಕ್ಕಿದ್ದರೆ ಅದಕ್ಕೂ ಸರಕಾರ ಹೊಣೆಯಲ್ಲವೇ? ಸರಕಾರದವರು ದುರುದ್ದೇಶಕ್ಕೆ ಬಳಸಿಕೊಂಡಾಗ ಅಂತಹ ಪೊಲೀಸರಿಗೆ ತಾನೇನು ಮಾಡಿದರೂ ನಡೆಯುತ್ತದೆ ಎಂಬ ಭಾವನೆ ಬರುತ್ತದೆ. ಹೀಗೆ ಯೋಚಿಸಿದರೂ ಸರಕಾರವೇ ತಪ್ಪಿತಸ್ಥ ಎಂದು ಅನ್ನಿಸುತ್ತದೆ.

ಸರಕಾರ ಮತ್ತು ಅದರ ತಪ್ಪುಗಳು ಶಿಕ್ಷೆಗೊಳಗಾಗದಿದ್ದರೆ ಸಮಾಜ ಹೇಗೆ ಸುರಕ್ಷಿತವಾದೀತು? ಈಗ ವರ್ಗೀಸ್ ಪ್ರಕರಣದಲ್ಲಿ ನಲ್ವತ್ತು ವರ್ಷಗಳ ನಂತರ ತೀರ್ಪು ಬಂದಿದೆ. ಮೇಲಿನ ಆದೇಶದಂತೆ ವರ್ಗೀಸ್‌ರನ್ನು ಗುಂಡಿಟ್ಟು ಕೊಂದಿದ್ದ ಕಾನ್ಸ್‌ಟೇಬಲ್ ವಾಸುದೇವನ್ ನಾಯರ್ ನಿವೃತ್ತನಾಗಿ ಸತ್ಯವನ್ನು ಬಹಿರಂಗಪಡಿಸುವ ವರೆಗೂ ವರ್ಗೀಸ್ ಹತ್ಯೆ ನಿಗೂಢವಾಗಿಯೇ ಉಳಿದುಕೊಂಡಿತ್ತು. ಅಂದರೆ 28 ವರ್ಷದ ನಂತರ ಸರಕಾರಿ ಭಯೋತ್ಪಾದನೆಯೊಂದು ತನಿಖೆಯ ಕಟಕಟೆಗೆ ಬಂತು. ಸರಕಾರದ ಕರಾಳ ಕೈ ಎಷ್ಟು ಬಲಿಷ್ಠವೆಂದು ತನ್ನ ಅಪರಾಧವನ್ನು ಎಷ್ಟು ಸಮರ್ಥವಾಗಿ ಮುಚ್ಚಿಡುತ್ತದೆ ಎಂದೂ ಇದರಿಂದ ತಿಳಿದು ಬರುತ್ತದೆ. ರಾಮಚಂದ್ರ ನಾಯರ್ ನಿವೃತ್ತನಾಗುವ ವರೆಗೂ ತುಟಿ ಬಿಚ್ಚಲು ಸರಕಾರ ಅವಕಾಶವನ್ನೇ ಕೊಟ್ಟಿರಲಿಲ್ಲ. ಇಂತಹ ಸರಕಾರ ಲಕ್ಷ್ಮಣ್‌ರ ಮೂಲಕ ವರ್ಗೀಸ್‌ರಂತಹವರ ಹತ್ಯೆ ನಡೆಸಿಲ್ಲ ಎನ್ನುವುದಾದರೆ ಅದು ಸರಿಯಲ್ಲ. ಆದುದರಿಂದ ಮೂಲ ಕಾರಣಕರ್ತ ಸರಕಾರವೂ ಶಿಕ್ಷೆಗೊಳಗಾಗಬೇಕು.

ಈ ತೀರ್ಪು ಹೊರಬೀಳುವಾಗ ಅಪರಾಧಿಯ ಕಟಕಟೆಯಲ್ಲಿ ನಿಂತಿರುವ ಲಕ್ಷ್ಮಣ 80 ವರ್ಷ ಮೀರಿದ ಹಣ್ಣು ಹಣ್ಣು ಮುದುಕ. ವರ್ಗೀಸ್ ಸತ್ತು ಆನಂತರ ಒಂದೆರಡು ತಲೆಮಾರು ಗತಿಸಿದ ನಂತರ ತೀರ್ಪು ಹೊರಬಿದ್ದಿದೆ. ಅಪರಾಧವೆಸಗಿದವರಿಗೆ ಎಂದೋ ಶಿಕ್ಷೆ ಪ್ರಕಟವಾಗುವುದೆಂದಾದರೆ ವಂಜಾರರಂತಹ ಪೊಲೀಸಧಿಕಾರಿಗಳು ಇನ್ನಷ್ಟು ನಕಲಿ ಎನ್‌ಕೌಂಟರ್ ನಡೆಸಲು ಹೆದರಲಾರರು. ಮೋದಿ-ಅಮಿತ್‌ಶಾನಂತಹ ಸರಕಾರಿ ಭಯೋತ್ಪಾದನೆಯ ಸಂಚುಕೋರರು ಹೆದರುವ ಪ್ರಮೇಯವೇ ಇಲ್ಲ. ಆದುದರಿಂದ ವರ್ಗೀಸ್ ಪ್ರಕರಣದ ತೀರ್ಪು ಸಮಾಜದಲ್ಲಿ ಅಷ್ಟು ಪರಿಣಾಮಕಾರಿಯಾಗುವುದಿಲ್ಲ. ವ್ಯವಸ್ಥೆಯ ಹಂತಕರಿಗೆ ಪಾಠವೂ ಆಗುವುದಿಲ್ಲ ಎನ್ನಬೇಕಾಗುತ್ತದೆ.

## ಬೇಕಾಗಿದ್ದಾರೆ

ಶಾಂತಿ ಪ್ರಕಾಶನ ಕಚೇರಿಯ ಎಡಿಟಿಂಗ್ ವಿಭಾಗಕ್ಕೆ ಸಿಬ್ಬಂದಿ ಬೇಕಾಗಿದ್ದಾರೆ. ಕನ್ನಡ ಚೆನ್ನಾಗಿ ಬಲ್ಲ ಪದವೀಧರರು ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿರಿ;

**ಶಾಂತಿ ಪ್ರಕಾಶನ**

ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ,
ಮಂಗಳೂರು – 575001
0824–2422785, 9448696490

**Volume: 33, Issue: 34,** Printed & Published by **M. Sadullah** on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. Editor: **Abdul Kader Kukkila,** Chief Editor: **P. NOOR MUHAMMED**
Ph: 2422786. Fax: 91-0824-2426846. E-mail: **sanmargamatter@gmail.com** Website: **www.sanmarga.com** (Regd. with RNI No. 29903/78)